ಸಂಪುಟ: 13 Volume | ಸಂಚಿಕೆ: 342 Issue | ಪುಟಗಳು 08 Pages | ಶುಕ್ರವಾರ 06 ಮಾರ್ಚ್ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

ಕನ್ನಡ ಕಿರಣ

Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ

ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ಶಿಕ್ಷಣ ಎನ್ನುವುದು ಅತ್ಯಂತ ಶಕ್ತಿಶಾಲಿ ಆಯುಧ. ಅದರಮೂಲಕ ಜಗತ್ತನ್ನು ಬದಲಿಸಬಹುದು.
–ನೆಲ್ಸನ್ ಮಂಡೇಲಾ

ಜಿಲ್ಲಾ ಆಸ್ಪತ್ರೆಯಲ್ಲಿ ಹಣ್ಣು ವಿತರಣೆ 4
ರಾಮಲಿಂಗೇಶ್ವರ ಜಾತ್ರೆ: ಕುಂಭ ಮೆರವಣಿಗೆ 6
ಪಿಯು ಪರೀಕ್ಷೆ: 1111 ವಿದ್ಯಾರ್ಥಿ ಗೈರು 7

ಮಲ್ಲಮ್ಮ ನುಡಿ

ಯುಗಾದಿ ವಿಶೇಷಾಂಕ- 2026

ಸದಾ ಹೊಸತನಕ್ಕೆ ಹೆಸರಾದ ಪ್ರತಿಷ್ಠಿತ ಪ್ರಾದೇಶಿಕ ಮಲ್ಲಮ್ಮನುಡಿ ದಿನಪತ್ರಿಕೆಯು ಈ ಬಾರಿ ಯುಗಾದಿ ವಿನೂತನ ವಿಶೇಷಾಂಕ–2026 ಹೊರತರಲಿದೆ. ಇದರ ಸಿದ್ಧತೆಯು ಈಗಾಗಲೇ ಆರಂಭವಾಗಿದೆ. ಇದರ ಪ್ರಯುಕ್ತ ವಿಶೇಷ ಸಂಚಿಕೆಗಾಗಿ ಲೇಖಕರಿಂದ ಬರಹಗಳನ್ನು ಆಹ್ವಾನಿಸುತ್ತಿದೆ.

ಲೇಖಕರು ಪಾಲಿಸಬೇಕಾದ ಸೂಚನೆಗಳು

- ನನ್ನೂರು ಹಲವು ವೈಶಿಷ್ಟ್ಯಗಳ ತವರು: 200 ಪದ ಮಿತಿ
- ನನ್ನ ಜೀವನದ ಟರ್ನಿಂಗ್ ಪಾಯಿಂಟ್: 200 ಪದಮಿತಿ
- ನಾನು ಪ್ರೀತಿಸಿದೆ. ಆದರೆ ಆಕೆಗೆ ಹೇಳಲೇ ಇಲ್ಲ, ಸ್ವ ಅನುಭವ: 200 ಪದ ಮಿತಿ
- ಕಥೆಗಳು: 600 ಪದಮಿತಿ
- ಯಾವುದೇ ವಿಷಯ ಕುರಿತ ಲಲಿತ ಪ್ರಬಂಧ: 300 ಪದ
- ಕವನ 24 ಸಾಲು ಮೀರದಿರಲಿ.

► ಲೇಖನಗಳನ್ನು ಕಳುಹಿಸಲು ಅಂತಿಮ ದಿನಾಂಕ: 5–03–2026

► ಬರಹಗಳ ಆಯ್ಕೆಯಲ್ಲಿ ಸಂಚಿಕೆ ಸಂಪಾದಕರ ತೀರ್ಮಾನವೇ ಅಂತಿಮ.

ಈ ಮೇಲ್: mallammanudi@gmail.com



ಆಲಮಟ್ಟಿ: ಪ್ರತಿ ವರ್ಷದಂತೆ ಈ ವರ್ಷವೂ ಶ್ರೀಶೈಲ ಮಲ್ಲಿಕಾರ್ಜುನ ದೇವಸ್ಥಾನಕ್ಕೆ ಪಾದಯಾತ್ರೆ ಮೂಲಕ ತೆರಳುವ ಪಾದಯಾತ್ರಿಕರಿಗೆ ಅನ್ನ ಸಂತರ್ಪಣೆ ಮಜ್ಜಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಆಲಮಟ್ಟಿಯ ಶ್ರೀ ಈಶ್ವರಲಿಂಗ ದೇವಸ್ಥಾನದಲ್ಲಿ ಆಲಮಟ್ಟಿ ಆರ್ ಎಸ್ ಸದ್ಭಕ್ತ ಮಂಡಳಿ ಪಾದಯಾತ್ರೆಗೆ ತೆರಳುವ ಭಕ್ತರಿಗೆ ತಮ್ಮ ಭಕ್ತಿ ಸೇವೆಯನ್ನು ಸಮರ್ಪಿಸಿದರು.

## ಅಮೇರಿಕಾ: ಖಂಡಾಂತರ ಕ್ಷಿಪಣಿ ಪರೀಕ್ಷೆ..!

• ಮಲ್ಲಮ್ಮ ನುಡಿ ವಾರ್ತೆ ವಾಷಿಂಗ್ಟನ್


ಅಮೆರಿಕಾ–ಇರಾನ್ ಮಧ್ಯೆ ಯುದ್ಧ ತಾರಕಕ್ಕೇರಿದೆ. ಯುದ್ಧದ ಕಾವು ಹೆಚ್ಚಾಗುತ್ತಿದ್ದಂತೆ ಅಮೆರಿಕಾ ಕ್ಯಾಲಿಫೋರ್ನಿಯಾದ ಕರಾವಳಿಯಲ್ಲಿ ಅತ್ಯಂತ ಅಪಾಯಕಾರಿ ಪರಮಾಣು ಸಾಮರ್ಥ್ಯದ ಮಿನಿಟ್ಮ್ಯಾನ್ III ಖಂಡಾತರ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು ಪರೀಕ್ಷಿಸಿದೆ. ಈ ಪರಮಾಣು ಸಾಮರ್ಥ್ಯದ ಮಿನಿಟ್ಮ್ಯಾನ್ ಖಂಡಾತರ ಬ್ಯಾಲಿಸ್ಟಿಕ್ ಕ್ಷಿಪಣಿ ಜಪಾನ್‌ನ ಹಿರೋಷಿಮಾ ಮೇಲೆ ಪ್ರಯೋಗ ಮಾಡಿದ ಪರಮಾಣು ಬಾಂಬ್‌ಗಳಿಗಿಂತ 20 ಪಟ್ಟು ಹೆಚ್ಚು ಶಕ್ತಿಶಾಲಿಯಾಗಿದೆ. ವಾರ್ ಹೆಡ್‌ಗಳನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ. ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚಾಗುತ್ತಿರುವ ಬೆನ್ನಲ್ಲೆ, ಇದರ ಪರೀಕ್ಷೆಗೆ ಅಮೆರಿಕ ಮುಂದಾಗಿದ್ದು,




ವಾಯುಪಡೆಯ ಗ್ಲೋಬಲ್ ಸ್ಟ್ರೈಕ್ ಕಮಾಂಡ್ ವ್ಯಾಂಡೆನ್‌ಬರ್ಗ್ ಬಾಹ್ಯಾಕಾಶ ಪಡೆ ನೆಲೆಯಿಂದ ನಿರಾಯುಧ ಮಿನಿಟ್ಮ್ಯಾನ್ ಅನು ಉಡಾವಣೆ ಮಾಡಿದೆ ಎಂದು ಯುಎಸ್ ಬಾಹ್ಯಾಕಾಶ ಪಡೆ ಹೇಳಿದೆ.

## ಎಲ್ಲದಕ್ಕೂ ಯುದ್ಧವೇ ಪರಿಹಾರವಲ್ಲ..!

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ



ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ಸಂಘರ್ಷಗಳಿಗೆ ತ್ವರಿತ ಅಂತ್ಯ ಹಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. ಭಾರತ ಪ್ರವಾಸದಲ್ಲಿರುವ ಫಿನ್ಲೆಂಡ್ ಅಧ್ಯಕ್ಷ ಅಲೆಕ್ಸಾಂಡರ್ ಸ್ಟಬ್ ಅವರೊಂದಿಗೆ ಹೈದರಾಬಾದ್ ಹೌಸ್ ನಲ್ಲಿ ಸುದೀರ್ಘ ಮಾತುಕತೆ ನಡೆಸಿದ ನಂತರ ಪ್ರಧಾನಿ ಮೋದಿ ಈ ಹೇಳಿಕೆ ನೀಡಿ, ಭಾರತ ಮತ್ತು ಫಿನ್ಲ್ಯಾಂಡ್ ಎರಡೂ ರಾಷ್ಟ್ರಗಳು ಕಾನೂನು, ದ್ವಿಪಕ್ಷೀಯ ಮಾತುಕತೆ ಮತ್ತು ರಾಜತಾಂತ್ರಿಕತೆಯನ್ನು ನಂಬುತ್ತವೆ. ಯಾವುದೇ ಸಮಸ್ಯೆಯನ್ನು ಮಿಲಿಟರಿ ಸಂಘರ್ಷದಿಂದ ಪರಿಹರಿಸಲು ಸಾಧ್ಯವಿಲ್ಲ ಎಂದು ತಿಳಿಸಿದ್ದಾರೆ. ಉಕ್ರೇನ್ ಆಗಿರಲಿ ಅಥವಾ ಪಶ್ಚಿಮ ಏಷ್ಯಾ ಆಗಿರಲಿ, ಸಂಘರ್ಷಗಳ ತ್ವರಿತ ಅಂತ್ಯ ಕಾಣಬೇಕು ಮತ್ತು ಶಾಂತಿಗಾಗಿ ಪ್ರತಿಯೊಂದು ಪ್ರಯತ್ನವನ್ನು ಬೆಂಬಲಿಸುವುದನ್ನು ನಾವು ಮುಂದುವರಿಸುತ್ತೇವೆ ಎಂದು ವಿವರಿಸಿದ್ದಾರೆ.

# ಭರವಸೆಯ ಭರ್ಜರಿ ಬಜೆಟ್

### ಸಿಎಂ ಸಿದ್ದರಾಮಯ್ಯ ಅವರಿಂದ ಇಂದು ದಾಖಲೆಯ 17ನೇ ಆಯವ್ಯಯ | ವಿವಿಧ ವಲಯ ನಿರೀಕ್ಷೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು (ಶುಕ್ರವಾರ) ದಾಖಲೆಯ 17ನೇ ಬಜೆಟ್ ಮಂಡಿಸಲಿದ್ದಾರೆ. ಶಿಕ್ಷಣ, ಆರೋಗ್ಯ, ಕೃಷಿ, ಕೈಗಾರಿ–ಕೆ, ಸಾರಿಗೆ ಸೇರಿ ವಿವಿಧ ವಲಯಗಳ ಸಮುದಾಯದಿಂದ ಭಾರೀ ನಿರೀಕ್ಷೆಗಳಿವೆ. ಬಜೆಟ್ ಪೂರ್ವಭಾವಿ ಸಭೆಯಲ್ಲಿ ಈಗಾಗಲೇ ಆಯಾ ವಲಯದ ಸಂಘ–ಸಂಸ್ಥೆಗಳು, ಕೈಗಾರಿಕೆಗಳು, ತಜ್ಞರು, ಭಾಗೀದಾರರು ಸಿಎಂ ಅವರಿಗೆ ತಮ್ಮ ಬೇಡಿಕೆಗಳೇನು? ನಿರೀಕ್ಷೆಗಳೇನು ಎನ್ನುವ ಪಟ್ಟಿ ಸಲ್ಲಿಸಿದ್ದಾರೆ. ಇವುಗಳಲ್ಲಿ ಸಿಎಂ ಯಾವ ವಲಯಕ್ಕೆ ಹೆಚ್ಚು ಒತ್ತು ನೀಡುತ್ತಾರೆ, ಯಾವ ಬೇಡಿಕೆಗಳಿಗೆ ಕನ್ನಣೆ ಕೊಟ್ಟು ಬಜೆಟ್‌ನಲ್ಲಿ ಘೋಷಿಸಲಿದ್ದಾರೆ ಎನ್ನುವ ಕುತೂಹಲ ಜನರಲ್ಲಿದೆ.

**ಗಣ್ಯರ ಜೊತೆ ಸಿಎಂ ಚರ್ಚೆ:** ನಾಯಕತ್ವದ ಗೊಂದಲದಿಂದಾಗಿ ತಡವಾಗಿ ಬಜೆಟ್ ತಯಾರಿಕೆಯ ಪ್ರಕ್ರಿಯೆಗಳನ್ನು ಆರಂಭಿಸಿದ್ದ ಸಿದ್ದರಾಮಯ್ಯ ಅವರು, ಎಂದಿನಂತೆ ರೈತ ಸಂಘಟನೆಗಳು, ಹಿಂದುಳಿದ ವರ್ಗಗಳು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಗಳು, ಕೈಗಾರಿಕೆಗಳಿಗೆ ಸಂಬಂಧಪಟ್ಟ ಸಂಸ್ಥೆಗಳು ಸೇರಿದಂತೆ ವಿವಿಧ ವಲಯಗಳ ಜೊತೆ ಚರ್ಚೆ ನಡೆಸಿದ್ದಾರೆ.

**ಮೀಸಲಿಟ್ಟ ಹಣ ಖರ್ಚು:** 5 ಗ್ಯಾರಂಟಿಗಳಿಗೆ ಕಳೆದ ವರ್ಷ 56 ಸಾವಿರ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ಮೀಸಲ್ಪಟ್ಟಿರುವುದಾಗಿ ಘೋಷಿಸಲಾಗಿತ್ತು. ಅದು ಬಹುತೇಕ ಖರ್ಚಾಗಿದೆ. ಆದರೆ ಆ ಅನುದಾನದ ಜೊತೆ ಎಸ್‌ಇಪಿ, ಟಿಎಸ್ಪಿಯಡಿ ನಿಗದಿಯಾಗಿದ್ದ 14 ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗಳಿಗೆ ಬಳಕೆ ಮಾಡಿಕೊಳ್ಳಲಾಗಿದೆ.



### ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ..?

ಆರೋಗ್ಯ ಇಲಾಖೆಯ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಸ್ಕ್ಯಾನಿಂಗ್, ಎಂಆರ್‌ಐ ಯಂತ್ರಗಳನ್ನು ಸರ್ಕಾರ ತನ್ನದೇ ವೆಚ್ಚದಲ್ಲಿ ಅಳವಡಿಸಲು ಚರ್ಚೆಗಳು ನಡೆದಿದ್ದವು. ವಿಮಾ ಯೋಜನೆ ಪರಿಣಾಮಕಾರಿ ಅನುಷ್ಠಾನ, ಕೃಷಿ ಇಲಾಖೆಯಲ್ಲಿ ರೈತ ಕಲ್ಯಾಣಕ್ಕೆ ಅನೇಕ ಯೋಜನೆ, ಜಿ.ಪಂ, ತಾ.ಪಂ. ಜಿಬಿಎ ಸೇರಿದಂತೆ ಗ್ರಾಮೀಣ, ನಗರ ಸ್ಥಳೀಯ ಸಂಸ್ಥೆಗಳ ಮತದಾರರ ಓಲೈಕೆಗಾಗಿ ಒಂದಿಷ್ಟು ಜನಪ್ರಿಯ ಯೋಜನೆಗಳನ್ನು ಘೋಷಿಸಲಿದ್ದಾರೆ ಸಿಎಂ.

### ಈಬಾರಿ ಆದಾಯ ಗುರಿ

ಅಬಕಾರಿ ಇಲಾಖೆಯ ಉತ್ತಮ ಆದಾಯ ಸಂಗ್ರಹಣೆಯಿಂದ ಉತ್ಸಾಹಗೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2026–27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಅಬಕಾರಿ ಆದಾಯ ಗುರಿಯನ್ನು ರೂ.40,000 ಕೋಟಿಯಿಂದ ರೂ. 45,000 ಕೋಟಿಗೆ ಹೆಚ್ಚಿಸುವ ಸಾಧ್ಯತೆ ಇದೆ. ಪ್ರಸ್ತುತ ಆರ್ಥಿಕ ವರ್ಷದ ರೂ.40,000 ಕೋಟಿ ಗುರಿಯನ್ನು ಇಲಾಖೆ ಮೀರಿಸುವ ಸಾಧ್ಯತೆ ಇದೆ.

### ಹಣ ಹಂಚಿಕೆ ಸವಾಲು

ಪರಿಶಿಷ್ಟ ಜಾತಿ (ಎಸ್ಸಿ), ಪರಿಶಿಷ್ಟ ಪಂಗಡಗಳ (ಎಸ್ಟಿ) ಸಮಗ್ರ ಅಭಿವೃದ್ಧಿಗೆ ಹಣ ಹಂಚಿಕೆ ಮಾಡುವ ಸಂಬಂಧ ದೊಡ್ಡ ಸವಾಲನ್ನು ಸಿಎಂ ಎದುರಿಸುತ್ತಿದ್ದಾರೆ. ಎಸ್ಸಿ, ಎಸ್ಟಿಗಳ ಕಲ್ಯಾಣಕ್ಕಾಗಿ ಸರ್ಕಾರ ತನ್ನ ಬಜೆಟ್‌ನಲ್ಲಿ ಶೇ. 24.1 ಮೀಸಲಿಡುತ್ತದೆ.

### ಕೃಷಿ–ಸಹಕಾರ ರಂಗಕ್ಕೆ..?

ಯುವಜನರನ್ನು ಕೃಷಿಯತ್ತ ಆಕರ್ಷಿಸಲು, ಸಾವಯವ ಮತ್ತು ಸಮಗ್ರ ಕೃಷಿ ಪದ್ಧತಿ ಉತ್ತೇಜನಕ್ಕೆ ಸಹಾಯಧನ ಕಾರ್ಯಕ್ರಮ ಘೋಷಿಸುವ ನಿರೀಕ್ಷೆ ರೈತರದ್ದಾಗಿದೆ. ಅದೇ ರೀತಿ ರೈತರಿಗೆ ಸಹಕಾರ ಸಂಘಗಳ ಮೂಲಕ ಶೂನ್ಯ ಬಡ್ಡಿದರದ ಸಾಲ ಪ್ರಮಾಣ ಹೆಚ್ಚಳ ಮಾಡಿದ್ದರೂ ಹಿಂದೆ ಸಮರ್ಪಕ ಜಾರಿಯಾಗಿಲ್ಲ ಎಂಬ ಆರೋಪಗಳಿವೆ.

### ಶಿಕ್ಷಣ ಹಕ್ಕು ಕಾಯಿದೆ?

ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವಿದ್ದಾಗ ಜಾರಿಗೆ ತಂದ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಲು ಸಿಎಂ ಅವರು ಬಜೆಟ್‌ನಲ್ಲಿ ಘೋಷಣೆ ಮಾಡಬಹುದು. ಅಪಾರ ಶುಲ್ಕ ಕಟ್ಟಿ ಖಾಸಗಿ ಶಾಲೆಗಳಲ್ಲಿ ಮಕ್ಕಳನ್ನು ಓದಿಸಲಾಗದ ಪೋಷಕರು ಆರ್‌ಇಟಿ ಕಾಯಿದೆಯಡಿ ಎಲ್ಲ ಶಾಲೆಗಳಲ್ಲೂ ಶೇ.25 ಸೀಟುಗಳನ್ನು ಬಡಮಕ್ಕಳಿಗೆ ಮೀಸಲಿಟ್ಟು ಅವರ ಶುಲ್ಕ ಪಾವತಿಸುವ ಈ ಯೋಜನೆ ಜಾರಿ ಮಾಡಬೇಕೆಂಬ ನಿರೀಕ್ಷೆ ಇದೆ.

## ಬೀದರ್‌ನಲ್ಲಿ ಕೆಯುಡಬ್ಲ್ಯೂಜೆ ಸರ್ವ ಸದಸ್ಯರ ಸಭೆ ಮಾ.29ಕ್ಕೆ

ಬೆಂಗಳೂರು: ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) 92ನೇ ಸರ್ವ ಸದಸ್ಯರ ಮಹಾಸಭೆಯು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಅಧ್ಯಕ್ಷತೆಯಲ್ಲಿ ಮಾರ್ಚ್ 29ರಂದು ಬೆಳಿಗ್ಗೆ 9.45ಕ್ಕೆ ಝೀರಾ ಕನ್ವೇಷನಲ್ ಹಾಲ್, ನಾವದಗೇರಿ, ಜನವಾಡ ರಸ್ತೆ, ಬೀದರ –585401 ಇಲ್ಲಿ ನಡೆಯಲಿದೆ. ಸಂಘದ ಸದಸ್ಯರುಗಳು ಮಹಾಸಭೆಯಲ್ಲಿ ಭಾಗವಹಿಸಬೇಕೆಂದು ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುತೂಹಲ ಕೆರಳಿಸಿದ ಡಿಸಿಎಂ ಡಿನ್ನರ್

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು



ಬಜೆಟ್ ಗಲಾಟೆಯ ನಡುವೆ ಡಿಸಿಎಂ ಡಿಕೆ ಶಿವಕುಮಾರ್ ಡಿನ್ನರ್ ಮೀಟಿಂಗ್ ಕರೆದಿದ್ದಾರೆ. ಮಾ.10ರಂದು ಖಾಸಗಿ ಹೋಟೆಲ್‌ನಲ್ಲಿ ಔತಣಕೂಟ ಆಯೋಜಿಸಿದ್ದಾರೆ. ಮಾ.6ಕ್ಕೆ ಡಿ.ಕೆ.ಶಿ ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಪೂರ್ಣಗೊಳಿಸುತ್ತಿರುವುದರಿಂದ ಈ ಡಿನ್ನರ್ ಪಾರ್ಟಿ ನೀಡಲಾಗುತ್ತಿದೆ. ಈ ಔತಣಕೂಟಕ್ಕೆ ಸಿಎಂ ಸಿದ್ದರಾಮಯ್ಯ, ಸಂಪುಟ ಸಚಿವರು, ಶಾಸಕರು, ಪರಿಷತ್ ಸದಸ್ಯರು ಹಾಗೂ ಕೆಲವು ಹಿರಿಯ ನಾಯಕರಿಗೂ ಆಹ್ವಾನ ನೀಡಲಾಗಿದೆ. ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಎರಡೂ ಬಣದ ನಾಯಕರು ಸಭೆ, ಮಾತುಕತೆ ನಡೆಸುತ್ತಲೇ ಇದ್ದಾರೆ, ಹೈಕಮಾಂಡ್ ಮೇಲೆ ಯಾವ ರೀತಿ ಒತ್ತಡ ಹೇರಬೇಕೆಂದು ಡಿ ಕೆ ಶಿವಕುಮಾರ್ ಬಣದ ನಾಯಕರು ತಂತ್ರಗಾರಿಕೆ ಹೆಣೆಯುತ್ತಿದ್ದಾರೆ. ಅಧಿಕಾರ ಹಂಚಿಕೆ ಬಿಕ್ಕಟ್ಟಿಗೆ ಹೈಕಮಾಂಡ್ ತೆರೆ ಎಳೆಯಬೇಕೆಂದು ಕೈ ನಾಯಕರು ಪಟ್ಟು ಹಿಡಿದಿದ್ದಾರೆ.

## ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿ ಗೆಲುವಿಗೆ ಪಣ

• ಮಲ್ಲಮ್ಮ ನುಡಿ ವಾರ್ತೆ ದಾವಣಗೆರೆ



ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಗೆಲ್ಲಲೇ ಬೇಕೆಂಬ ಪಣ ತೊಟ್ಟು ನಾವೆಲ್ಲ ಹೊರಟಿದ್ದೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ತಿಳಿಸಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿ, ಏನೇ ವ್ಯತ್ಯಾಸಗಳಿದ್ದರೂ ಅದನ್ನು ಸರಿಪಡಿಸುವ ಶಕ್ತಿ ನಮ್ಮೆಲ್ಲರಲ್ಲೂ ಇದೆ. ರಾಜ್ಯದ ಉಸ್ತುವಾರಿ ರಾಧಾಮೋಹನ್ ದಾಸ್ ಅಗ್ರವಾಲ್ ಅವರೂ ಬಂದಿದ್ದಾರೆ. ಎಲ್ಲರೂ ಕುಳಿತು ಸಮಸ್ಯೆ ಬಗೆಹರಿಸುತ್ತೇವೆ. ಇದನ್ನು ಮುಂದುವರೆಯಲು ಬಿಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಇನ್ನೊಂದು ಪ್ರಶ್ನೆಗೆ ಉತ್ತರ ನೀಡಿದ ಅವರು, ಅಭ್ಯರ್ಥಿ ಆಕಾಂಕ್ಷಿಗಳನ್ನು ಇವತ್ತು ಕೂಡ ಭೇಟಿ ಮಾಡಿದ್ದೇವೆ. ಅವರ ವಿಚಾರಗಳನ್ನು ತಿಳಿದುಕೊಂಡಿದ್ದೇವೆ. ಇವತ್ತು ಬಂದಿರುವ ಉದ್ದೇಶವೇ ಅದು. ಸಣ್ಣಪುಟ್ಟ ಸಮಸ್ಯೆಗಳನ್ನು ಸರಿಪಡಿಸಲಿದ್ದೇವೆ ಎಂದಿದ್ದಾರೆ. 8–10 ಜನ ಆಕಾಂಕ್ಷಿಗಳಿದ್ದಾರೆ. ನಾಲ್ಕೈದು ಜನರನ್ನು ಭೇಟಿ ಮಾಡಿದ್ದೇವೆ ಎಂದು ವಿವರ ನೀಡಿದ್ದಾರೆ.

## 56,432 ಹುದ್ದೆಗಳ ಭರ್ತಿಗೆ ಆಗ್ರಹ




• ಮಲ್ಲಮ್ಮ ನುಡಿ ವಾರ್ತೆ ವಿಜಯಪುರ

ರಾಜ್ಯ ಸಚಿವ ಸಂಪುಟವು ಒಪ್ಪಿಗೆ ನೀಡಿರುವ 56,432 ಹುದ್ದೆಗಳಿಗೆ ತಕ್ಷಣ ಅಧಿಸೂಚನೆ ಹೊರಡಿಸಬೇಕು ಎಂದು ಆಗ್ರಹಿಸಿ ಉದ್ಯೋಗಾಕಾಂಕ್ಷಿಗಳು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಪ್ರತಿಭಟನೆಯನ್ನು ನಡೆಸಿ ಅಪರ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಅಖಿಲ ಭಾರತೀಯ ಜನತಾಂತ್ರಿಕ ಯುವಜನ ಸಂಘಟನೆ ಹಾಗೂ ಉದ್ಯೋಗಾಕಾಂಕ್ಷಿಗಳ ಹೋರಾಟ ಸಮಿತಿ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಯುವಕರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದ್ದಾರೆ. ಸಚಿವ ಸಂಪುಟದಿಂದ ಸಾವಿರಾರು ಹುದ್ದೆಗಳ ಭರ್ತಿಗೆ ಅನುಮೋದನೆ ದೊರೆತಿದ್ದರೂ ಇನ್ನೂ ಅಧಿಸೂಚನೆ ಹೊರಡಿಸದಿರುವುದು ನಿರುದ್ಯೋಗಿಗಳಲ್ಲಿ ಆತಂಕ ಉಂಟುಮಾಡಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ AIDYO ಮುಖಂಡರು ಸೇರಿದಂತೆ ಅನೇಕ ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದರು.

## ಭಕ್ತರ ರಕ್ಷಿಸುವ ಕಾಳಿಕಾ ದೇವಿ ಶಕ್ತಿ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ಭಕ್ತಿಯಿಂದ ಯಾರೂ ಆರಾಧಿಸುತ್ತಾರೆ ಅವರ ಸಮಸ್ಯೆ ಹರಿಸುವ ಹಾಗೂ ಕಾಡಿಸುವವರಿಗೆ ಕಾಪಾಡುವ ಶಕ್ತಿ ಕಾಳಿಕಾ ದೇವಿಗಿದೆ ಎಂದು ಕಂಬಳೇಶ್ವರ ಶ್ರೀ ಸೋಮಶೇಖರ ಶಿವಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ತಾಲೂಕಿನ ದಿಗ್ಗಾಂವ ಸುಕ್ಷೇತ್ರ ಕಂಚಗಾರ ಹಳ್ಳದ ಶ್ರೀ ಪಾರ್ವತಿ ಪರಮೇಶ್ವರ ಕಲ್ಯಾಣ ಧಾಮದಲ್ಲಿ ನಡೆದ ಲಿಂ. ಶ್ರೀ ಗುರುಲಿಂಗೇಶ್ವರ ಶಿವಯೋಗಿಗಳ 22ನೇ ವರ್ಷದ ಪುಣ್ಯಸ್ಮರಣೆ, ಕಾಳಿಕಾ ದೇವಿ ಚರಿತ್ರೆ ಪ್ರವಚನ ಮಹಾಮಂಗಳ, ಧಾರ್ಮಿಕ ಸಭೆಯನ್ನು ಉದ್ಘಾಟಿಸಿ ಮಾತನಾಡಿ, ಈ ಭಾಗದಲ್ಲಿ ಕಾಳಿಕಾ ದೇವಿಯ ಪುರಾಣ ಪ್ರವಚನ ಆಯೋಜಿಸಿದ್ದ ಮಲ್ಲಯ್ಯ ಸ್ವಾಮಿಗಳ ಕಾರ್ಯ ಶ್ಲಾಘನೀಯ ಎಂದಿದ್ದಾರೆ. ಪಿಎಲ್'ಡಿ ಬ್ಯಾಂಕ್ ಅಧ್ಯಕ್ಷ ಭೀಮಣ್ಣ ಸಾಲಿ ಮಾತನಾಡಿ, ಮಲ್ಲಯ್ಯ ಸ್ವಾಮಿಗಳ ಸೇವೆ ನಿಸ್ವಾರ್ಥ ಸೇವೆ. ಈ ಭಾಗದ ಜನರ ನೋವು ನಲಿವುಗಳಿಗೆ ಸ್ಪಂದಿಸುವ ಜನಸಾಮಾನ್ಯರ ಸ್ವಾಮಿಗಳಾಗಿದ್ದಾರೆ ಎಂದಿದ್ದಾರೆ. ಮಳಖೇಡ ದರ್ಗಾದ ಸೈಯದ್ ಮುಸ್ತಫಾ ಖಾದ್ರಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಮೇಶ್ ಮರಗೋಳ ಮಾತನಾಡಿದ್ದು, ಪಾಳಾ ಶ್ರೀ ಡಾ.ಗುರುಮೂರ್ತಿ ಶಿವಾಚಾರ್ಯರು ಕಾಳಿಕಾ ದೇವಿ ಚರಿತ್ರೆ ಕುರಿತು ಪ್ರವಚನ ನೀಡಿದ್ದಾರೆ.. ಶ್ರೀನಿವಾಸ ಸರಡಗಿ ಶ್ರೀ ಅಪ್ಪಾರಾವದೇವಿ ಮುತ್ಯಾ, ಮಳಖೇಡ ಗ್ರಾಪಂ ಮಾಜಿ ಅಧ್ಯಕ್ಷ ರಾಜಶೇಖರ್ ಪುರಾಣಿಕ ಪಾರ್ವತಿ ಪರಮೇಶ್ವರ ಕಲ್ಯಾಣ ಧಾಮದ ಮಲ್ಲಯ್ಯಸ್ವಾಮಿ ಸ್ಥಾವರಮಠ ನೇತೃತ್ವ ವಹಿಸಿದ್ದರು.



## ಆಧಾರ್ ತಿದ್ದುಪಡಿಗೆ ಹೆಚ್ಚು ಹಣ



• ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ

ಆಧಾರ್ ಕಾರ್ಡ್ ನೋಂದಣಿ, ಹೆಸರು ತಿದ್ದುಪಡಿ, ಮೊಬೈಲ್ ನಂಬರ್ ಲಿಂಕ್ ಸೇರಿದಂತೆ ಯಾವುದೇ ಸಣ್ಣ ಪುಟ್ಟ ತಿದ್ದುಪಡಿ ಇದ್ದರೂ ಆಧಾರ್ ಕಾರ್ಡ್ ತಿದ್ದುಪಡಿ ಮಾಡುವ ಸಿಬ್ಬಂದಿಗೆ ಹೆಚ್ಚಿನ ಹಣ ನೀಡುವ ಅನಿವಾರ್ಯತೆ ಸೃಷ್ಟಿಯಾಗಿದೆ. ಸರ್ಕಾರದ ಯಾವುದೇ ಯೋಜನೆ ಪಡೆಯಬೇಕಾದರೆ ಆಧಾರ ಕಾರ್ಡ್ ಕಡ್ಡಾಯವಾಗಿದೆ. ವಿಳಾಸ, ಇನಿಷಿಯಲ್ ಮೊಬೈಲ್ ಸಂಖ್ಯೆ ಕೂಡ ಸರಿಯಾಗಿರಬೇಕು. ಇದಕ್ಕಾಗಿ ದಿನ ನಿತ್ಯ ಆಧಾರ್ ಕೇಂದ್ರಗಳಿಗೆ ಸಾರ್ವಜನಿಕರು ಭೇಟಿ ನೀಡುವುದು ಸಾಮಾನ್ಯ. ಆದರೆ ಇಲ್ಲಿನ ಆಧಾರ್ ಕೇಂದ್ರ ಜನರ ಸುಲಿಗೆ ಕೇಂದ್ರವಾಗಿ ಮಾರ್ಪಟ್ಟಿವೆ ಎಂದು ಸಾರ್ವಜನಿಕರು ದೂರುತ್ತಿದ್ದಾರೆ. ಹಳೆ ಬಸ್ ನಿಲ್ದಾಣದ ಹತ್ತಿರ ಇರುವ ಸರ್ಕಾರಿ ಕನ್ಯಾ ಪ್ರೌಢ ಶಾಲೆಯ ಆವರಣದಲ್ಲಿರುವ ಆಧಾರ್ ಕೇಂದ್ರದಲ್ಲಿ ಸರ್ಕಾರ ನಿಗದಿಪಡಿಸಿದ ದರಕ್ಕಿಂತಲು ಹೆಚ್ಚಿನ ಹಣ ವಸೂಲಿ ಮಾಡುತ್ತಿರುವ ಆರೋಪಗಳು ಕೇಳಿ ಬಂದಿವೆ. ಆಧಾರ್ ಕೇಂದ್ರದಲ್ಲಿ ಸರ್ಕಾರ ನಿಗದಿಪಡಿಸಿದ ದರ ಪಟ್ಟಿವೂ ಇಲ್ಲ, ಕೂಡಲು ಆಸನದ ವ್ಯವಸ್ಥೆ ಇಲ್ಲ ಆದರೆ ಹಣ ಮಾತ್ರ ಮನ ಬಂದಂತೆ ತೆಗೆದುಕೊಳ್ಳುತ್ತಿದ್ದಾರೆ ಎಂದು ಬಡ ಜನರು ಅಲವತ್ತುಕೊಳ್ಳುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸಿ ಬಡ ಜನರ ನೆರವಿಗೆ ಬರಬೇಕು ಎನ್ನುವುದು ಜನರ ಅಪೇಕ್ಷೆಯಾಗಿದೆ.

**ಬೆಂಗಳೂರು ದಕ್ಷಿಣ ಜಿಲ್ಲೆಯನ್ನು ರಾಜ್ಯದಲ್ಲಿಯೇ ನಂ.1 ಮಾಡುವ ಕನಸು ಶಿವಕುಮಾರ್ ಅವರದ್ದು: ಡಿ.ಕೆ.ಸುರೇಶ್, ಬಮೂಲ್ ಅಧ್ಯಕ್ಷ**

# ರಾಮಲಿಂಗೇಶ್ವರ ರಥೋತ್ಸವ ಸಂಪನ್ನ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಕಿಲ್ಲಾದಲ್ಲಿರುವ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ಜಾತ್ರಾ ಮಹೋತ್ಸವದ ಮಹಾರಥೋತ್ಸವ ಗುರುವಾರ ಸಾಯಂಕಾಲ ಅದ್ದೂರಿಯಾಗಿ ಜರುಗಿತು.

ಗುರುವಾರ ಬೆಳಗ್ಗೆಯಿಂದ ಭಕ್ತರು ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ದೇವರಿಗೆ ಬಿಲ್ವಾರ್ಚನೆ, ಅಭಿಷೇಕ, ವಿಶೇಷ ಪೂಜೆ ಸಲ್ಲಿಸಲಾಯಿತು.

ಸಂಜೆ 6 ಗಂಟೆಗೆ ಪಟ್ಟಣದ ಅಂಧೇನಿ ಕಿಲ್ಲಾ ದಲ್ಲಿ ಇರುವ 11 ನೇಯ ಶತಮಾನದ

ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ದೇವಸ್ಥಾನದ ರಥೋತ್ಸವಕ್ಕೆ ಒಳ ಬಳ್ಳಾರಿಯ ತೋರಣಗಿರಿ ವಿರಕ್ತಮಠದ ಶ್ರೀಗಳಾದ ಸಿದ್ದಲಿಂಗ ಮಹಾಸ್ವಾಮಿಗಳು ಪೂಜೆ ಸಲ್ಲಿಸಿ ಕರ್ಪೂರ ಬೆಳಗಿಸಿ ಮೂಲಕ ಚಾಲನೆ ನೀಡಿದರು. ನಂತರ ಮಹಾರಥೋತ್ಸವ ಜರುಗಿತು.

ನಂದವಾಡಗಿ ಶ್ರೀಗಳಾದ ಮಹಾಂತಲಿಂಗ ಶಿವಾಚಾರ್ಯರು, ಚನ್ನಬಸವ ದೇವರು, ಅಂತೂರು ಬೆಂತೂರಿನ ಶ್ರೀ ರಾಚೋಟಿ ಶ್ರೀಗಳು, ಸಂತೆಕೆಲ್ಲೂರು ಗುರುಬಸವ ಶ್ರೀಗಳು, ತಿಮ್ಮಾಪೂರ ಕಲ್ಯಾಣಾಶ್ರಮದ ಮಹಾಂತಸ್ವಾಮಿ, ಸುರೇಂದ್ರಗೌಡ ಪಾಟೀಲ್ ಆದಪುರ , ಮಸ್ಕಿ ಸಿಪಿಐ ರಾಮಣ್ಣ ಜಲಗೇರಿ ನೇತೃತ್ವದಲ್ಲಿ ಪೋಲಿಸ್ ಬಂದೋಬಸ್ತ್ ಒದಗಿಲಾಗಿತ್ತು. ಸ್ಥಳೀಯ ಪೋಲಿಸ್ ಠಾಣಾ ಪಿಎ ವೆಂಕಟೇಶ ಮಾಡಗೇರಿ ಸೇರಿದಂತೆ ಪೊಲೀಸ್ ಸಿಬ್ಬಂದಿಗಳು ಇದ್ದರು.

# ವಿದ್ಯಾರ್ಥಿಗಳ ಬಾಳು ಬೆಳಗುತ್ತಿರುವ ಪಟ್ಟದ್ದೇವರ ಶೈಕ್ಷಣಿಕ ಕ್ರಾಂತಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಗ್ರಾಮೀಣ ಭಾಗದಲ್ಲಿ ಬಡ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವುದರ ಮೂಲಕ ಡಾ.ಬಸವಲಿಂಗ ಪಟ್ಟದ್ದೇವರು ವಿದ್ಯಾರ್ಥಿಗಳ ಬಾಳು ಬೆಳಗುತ್ತಿದ್ದಾರೆ ಎಂದು ಲಾತೂರಿನ ಡೆಪ್ಯುಟಿ ಕಲೆಕ್ಟರ್ ಸುಶಾಂತ ಶಿಂಧೆ ಹೇಳಿದರು.

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಚಯದ ಅನುಭವ ಮಂಟಪದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು.

ಶಿಕ್ಷಣದಿಂದ ಮಾತ್ರ ಸಮಾಜದಲ್ಲಿ ಅಮೂಲಾಗ್ರ ಬದಲಾವಣೆ ತರಲು ಸಾಧ್ಯ. ಈ ಶಕ್ತಿಯ ಮಹತ್ವವನ್ನು ಮನಗಂಡಿರುವ ಬಸವಲಿಂಗ ಪಟ್ಟದ್ದೇವರು ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಅಡಿಯಲ್ಲಿ ಗ್ರಾಮೀಣ ಭಾಗದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದಿರುವುದು ಮಹೋನ್ನತ ಕಾರ್ಯವಾಗಿದೆ ಎಂದು ತಿಳಿಸಿದರು.

ಗುರುಕುಲ ಶಿಕ್ಷಣ ಸಂಸ್ಥೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಪ್ರತಿ ವರ್ಷ ನೀಟ್, ಐಐಟಿ ಸೇರಿದಂತೆ ಇತರ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗಮನಾರ್ಹ ಸಾಧನೆ ಮಾಡುತ್ತಿರುವುದು ಸಂತೋಷದ ಸಂಗತಿ. ಇಲ್ಲಿಯ ಶಿಕ್ಷಣ ವ್ಯವಸ್ಥೆ, ಶೈಕ್ಷಣಿಕ ವಾತಾವರಣ, ವಿದ್ಯಾರ್ಥಿಗಳ ಸಂಸ್ಕಾರವನ್ನು ತಿಳಿದುಕೊಳ್ಳಲು ನಾವು ಈ ಶಾಲೆಗೆ ಭೇಟಿ ನೀಡಿದ್ದೇವೆ. ನಿಜಕ್ಕೂ ಗುರುಕುಲ ಶಿಕ್ಷಣ ಪದ್ಧತಿ ಎಲ್ಲ ರಾಜ್ಯಗಳಿಗೂ ಮಾದರಿ ಆಗುವಂತಹದ್ದಿದೆ ಎಂದು ಹೇಳಿದರು.

ತಹಶೀಲ್ದಾರ್ ರಾಮಭೂಗಾ9ಂವ್ಕರ್ ಮಾತನಾಡಿ, ಪಟ್ಟದೇವರು ಅನಾಥ ಮಕ್ಕಳಿಗೆ ಪಾಲನೆ, ಪೋಷಣೆ ಮಾಡುವುದರ ಮೂಲಕ ಅವರ ಬದುಕು ರೂಪಿಸುತ್ತಿರುವುದು ಶ್ರೇಷ್ಠ ಮಾನವೀಯ ಕಾರ್ಯವಾಗಿದೆ.

ಇವರ ಸಾಮಾಜಿಕ ಧಾರ್ಮಿಕ ಶೈಕ್ಷಣಿಕ ಮಾನವೀಯ ಕಾರ್ಯಗಳು ಸಮಾಜ ಪ್ರತಿಯೊಬ್ಬರಿಗೂ ಮಾದರಿ ಮತ್ತು ದಾರಿದೀಪವಾಗಿವೆ ಎಂದು ತಿಳಿಸಿದರು. ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ನಾಡೋಜ ಡಾ. ಬಸವಲಿಂಗ ಪಟ್ಟದ್ದೇವರು ಮಾತನಾಡಿ, ಧೃಡಸಂಕಲ್ಪ, ಉತ್ತಮ ಓದು ಯಶಸ್ಸಿನ ಮೂಲಗಳಾಗಿವೆ. ವಿದ್ಯಾರ್ಥಿಗಳು ಶೈಕ್ಷಣಿಕ ವರ್ಷದ ಆರಂಭದಿಂದಲೇ ವಾರ್ಷಿಕ ಪರೀಕ್ಷೆಗೆ ಉತ್ತಮ ತಯಾರಿ ನಡೆಸಿ ಯಶಸ್ಸು ಪಡೆಯಬೇಕು ಎಂದರು.

ಶಿಕ್ಷಣ ಮತ್ತು ಸಂಸ್ಕಾರ ಒಂದು ನಾಣ್ಯದ ಎರಡು ಮುಖಗಳಾಗಿದ್ದು, ಪ್ರಾಮಾಣಿಕತೆ, ಪರೋಪಕಾರ, ಗುರು ಹಿರಿಯರ ಬಗ್ಗೆ ನಿಷ್ಠೆ ಸೇರಿದಂತೆ ಉದಾತ್ತ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಉದಗೀರ ಕೋ ಆಪರೇಟಿವ್ ಬ್ಯಾಂಕ್ ನ ಅಧ್ಯಕ್ಷ ರಮೇಶ ಅಂಬರಖಾನೆ, ಆಡಳಿತಾಧಿಕಾರಿ ಮೋಹನ ರೆಡ್ಡಿ, ಕವಲಖೇಡನ್ ಚಂದ್ರಕಾಂತ ಪಾಟೀಲ, ಅಶೋಕ ಅಂಬರಖಾನೆ, ಸಂಜೀವ ಫಾಳೆ ಸೇರಿದಂತೆ ಇತರರು ಇದ್ದರು. ಪ್ರಾಚಾರ್ಯ ಬಸವರಾಜ ಮೊಳಕೀರೆ ಪ್ರಾಸ್ತಾವಿಕ ಮಾತನಾಡಿದರು. ಸಾಹಿತಿ ರಾಜು ಜುಬರೆ ನಿರೂಪಿಸಿದರು.

# ಸಂಪಾದಕೀಯ



ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349

## ರಿಯಲ್ ಎಸ್ಟೇಟ್ ಕ್ಷೇತ್ರದ ಮೇಲೆ ಸರಕಾರಿ ಅಧಿಕಾರಿಗಳ ನಿಗಾ ಅವಶ್ಯಕ

ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ರಿಯಲ್ ಎಸ್ಟೇಟ್ ಕ್ಷೇತ್ರವು ವೇಗವಾಗಿ ಬೆಳೆಯುತ್ತಿದೆ. ನಗರಗಳಷ್ಟೇ ಅಲ್ಲದೆ ಗ್ರಾಮೀಣ ಪ್ರದೇಶಗಳಲ್ಲಿಯೂ ಜಮೀನು ಖರೀದಿ–ಮಾರಾಟದ ವ್ಯವಹಾರಗಳು ಹೆಚ್ಚಾಗುತ್ತಿರುವುದು ಕಾಣಿಸುತ್ತಿದೆ. ಈ ಬೆಳವಣಿಗೆ ಒಂದು ಕಡೆ ಅಭಿವೃದ್ಧಿಗೆ ಸಹಾಯಕವಾದರೂ, ಮತ್ತೊಂದೆಡೆ ಅಕ್ರಮ ವ್ಯವಹಾರಗಳು, ಭೂಮಿ ದಂಧೆ ಮತ್ತು ಭ್ರಷ್ಟಾಚಾರದ ಸಮಸ್ಯೆಗಳನ್ನು ಕೂಡ ಉಂಟುಮಾಡುತ್ತಿದೆ. ಆದ್ದರಿಂದ ರಿಯಲ್ ಎಸ್ಟೇಟ್ ವ್ಯವಹಾರಗಳ ಮೇಲೆ ಸರಕಾರಿ ಅಧಿಕಾರಿಗಳ ನಿಗಾ ಅತ್ಯಂತ ಅಗತ್ಯವಾಗಿದೆ.

ಕೆಲವೆಡೆ ಭೂಮಿಯ ದಾಖಲೆಗಳಲ್ಲಿ ತಿದ್ದುಪಡಿ ಮಾಡುವುದು, ನಕಲಿ ದಾಖಲೆಗಳನ್ನು ಸೃಷ್ಟಿಸುವುದು, ಕೃಷಿ ಭೂಮಿಯನ್ನು ಅಕ್ರಮವಾಗಿ ವಸತಿ ನಿವೇಶನಗಳಾಗಿ ಮಾರಾಟ ಮಾಡುವುದು ಎಂಬಂತಹ ಘಟನೆಗಳು ಬೆಳಕಿಗೆ ಬರುತ್ತಿವೆ. ಇದರಿಂದ ಸಾಮಾನ್ಯ ಜನರು ಮತ್ತು ರೈತರು ಮೋಸಕ್ಕೆ ಒಳಗಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ತಮ್ಮ ಜೀವಿತದ ಸಂಗ್ರಹವನ್ನು ಹಾಕಿ ಜಮೀನು ಅಥವಾ ಮನೆ ಖರೀದಿಸುವ ಜನರಿಗೆ ಈ ರೀತಿಯ ಅಕ್ರಮಗಳು ದೊಡ್ಡ ನಷ್ಟವನ್ನುಂಟುಮಾಡುತ್ತವೆ.

ಇಂತಹ ಸಮಸ್ಯೆಗಳನ್ನು ತಡೆಯಲು ಸರ್ಕಾರದ ಸಂಬಂಧಿಸಿದ ಇಲಾಖೆ ಹಾಗೂ ಅಧಿಕಾರಿಗಳು ಕಟ್ಟುನಿಟ್ಟಿನ ನಿಗಾವನ್ನು ಇಡಬೇಕು. ಭೂಮಿ ದಾಖಲೆಗಳ ಪರಿಶೀಲನೆ, ಲೇಔಟ್‌ಗಳಿಗೆ ಸರಿಯಾದ ಅನುಮತಿ ನೀಡುವುದು, ಮತ್ತು ಅಕ್ರಮ ಪ್ಲಾಟಿಂಗ್ ನಡೆಸುವವರ ಮೇಲೆ ಕಾನೂನು ಕ್ರಮ ಕೈಗೊಳ್ಳುವುದು ಅವಶ್ಯಕ. ಜೊತೆಗೆ ರಿಯಲ್ ಎಸ್ಟೇಟ್ ವ್ಯವಹಾರಗಳು ಪಾರದರ್ಶಕವಾಗಿರುವಂತೆ ವ್ಯವಸ್ಥೆ ಮಾಡಬೇಕು.

ಜನರ ಹಿತಾಸಕ್ತಿಯನ್ನು ಕಾಪಾಡಲು ಮತ್ತು ಭೂಮಿಯ ದಂಧೆಯನ್ನು ತಡೆಯಲು ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಸರಿಯಾದ ನಿಗಾ ಮತ್ತು ಕಾನೂನು ಕ್ರಮಗಳಿಂದ ಮಾತ್ರ ರಿಯಲ್ ಎಸ್ಟೇಟ್ ಕ್ಷೇತ್ರವನ್ನು ಸ್ವಚ್ಛ ಹಾಗೂ ಜನಪರವಾಗಿಡಲು ಸಾಧ್ಯ.

# ಸೇವಾಲಾಲರ ತತ್ವಗಳು ಸಮಾಜಕ್ಕೆ ದಾರಿದೀಪ ಪ್ರಭು ಚವ್ಹಾಣ ಅಭಿಪ್ರಾಯ

• ವರದಿ:ಪರಮೇಶ ರಾಂಪುರೆ
ಮಲ್ಲಮ್ಮ ನುಡಿ ವಾರ್ತೆ
ಕಮಲನಗರ

ಕಮಲನಗರ ತಾಲೂಕಿನ ಮಾಳೆಗಾಂವ ಗ್ರಾಮದ ವ್ಯಾಪ್ತಿಯ ಲಷ್ಕರ್ ನಾಯಕ್ ತಾಂಡಾದಲ್ಲಿ ಗುರುವಾರ ಸಡಗರ–ಸಂಭ್ರಮದ ವಾತಾವರಣ ಮನೆಮಾಡಿತ್ತು. ಬಂಜಾರಾ ಸಮುದಾಯದ ಆರಾಧ್ಯ ದೈವ, ಅಧ್ಯಾತ್ಮಿಕ ಚಿಂತಕ ಹಾಗೂ ಸಮಾಜ ಸುಧಾರಕ ಸಂತ ಶ್ರೀ ಸೇವಾಲಾಲ್ ಮಹಾರಾಜರ ನೂತನ ಭವ್ಯ ಮೂರ್ತಿಯನ್ನು ಗುರುವಾರ ಭಕ್ತಿಪೂರ್ವಕವಾಗಿ ಅನಾವರಣಗೊಳಿಸಲಾಯಿತು.

ಈ ವೇಳೆ ಕಾರ್ಯಕ್ರಮ ಉದ್ಘಾಟನೆ ಮಾಡಿ ಶಾಸಕ ಪ್ರಭು ಚವ್ಹಾಣ ಅವರು ಮಾತನಾಡಿದರು, ಸೇವಾಲಾಲರ ತತ್ವಗಳು ಸಮಾಜಕ್ಕೆ ದಾರಿದೀಪ, ಬಂಜಾರ ಸಮಾಜದ ಧರ್ಮಗುರುಗಳು, ಅಜ್ಞಾನ, ಮೂಢನಂಬಿಕೆ, ದುಶ್ಚಟಗಳು ಒಳಗೊಂಡು ನಾನಾ ರೀತಿಯ ಸಮಸ್ಯೆಗಳಿಂದ ಕೂಡಿದ್ದ ಸಮಾಜವನ್ನು ಸರಿದಾರಿಗೆ ತಂದಿದ್ದಾರೆ. ಸಮಾನತೆ, ಸೌಹಾರ್ದತೆ ಮತ್ತು ಸತ್ಯನಿಷ್ಠೆಯ ಸಂದೇಶವನ್ನು ನೀಡಿದ ಮಹಾನ್ ಸಂತರಾಗಿದ್ದಾರೆ. ಅವರ ತತ್ವಾದರ್ಶಗಳು ಇಂದಿನ ಯುವಜನತೆಗೆ ದಾರಿದೀಪವಾಗಿದ್ದು, ಅವುಗಳನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳಿದರು.



ಇಂದಿಗೂ ಸಮಾಜದಲ್ಲಿ ಬಹಳಷ್ಟು ಸಮಸ್ಯೆಗಳಿವೆ. ಕೆಲವರು ಇಂದಿಗೂ ತಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸಲು ಹಿಂದೇಟು ಹಾಕುತ್ತಿರುವುದು ಕಾಣಿಸುತ್ತಿದೆ. ಎಲ್ಲರೂ ತಮ್ಮ ಮಕ್ಕಳಿಗೆ ತಪ್ಪದೇ ಶಾಲೆಗೆ ಕಳುಹಿಸಬೇಕು. ಉತ್ತಮ ಶಿಕ್ಷಣ ಕೊಡಿಸಬೇಕು. ಅವರಲ್ಲಿ ಉತ್ತಮ ಸಂಸ್ಕಾರಗಳನ್ನು ಬೆಳೆಸಲು ಪ್ರಯತ್ನಿಸಬೇಕು.

ಮಕ್ಕಳ ಉಜ್ವಲ ಭವಿಷ್ಯದ ಹಿತೃಷ್ಟಿಯಿಂದ ಯೋಚಿಸಬೇಕು ಎಂದು ಹೇಳಿದ ಅವರು, ನಮ್ಮ ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಸಂಕಲ್ಪ ತೊಡಬೇಕು. ಸಮಾಜದ ಶಿಕ್ಷಣ ಪ್ರಮಾಣ ಮತ್ತಷ್ಟು ಸುಧಾರಿಸಬೇಕು. ಈ ದಿಶೆಯಲ್ಲಿ ಎಲ್ಲರೂ ಪ್ರಮಾಣಿಕವಾಗಿ ಪ್ರಯತ್ನಿಸಬೇಕು ಎಂದರು.

ಸಂತ ಸೇವಾಲಾಲರ ತತ್ವಗಳು ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗಿಲ್ಲ, ಎಲ್ಲರಿಗೂ ಮಾರ್ಗದರ್ಶನ ನೀಡುವಂತಿವೆ. ಮಹಾರಾಜರ ಮೂರ್ತಿ ಸ್ಥಾಪಿಸಿದರೆ ಮಾತ್ರ ಸಾಲದು.

ಅವರ ಅವರ ತತ್ವ ಸಂದೇಶಗಳನ್ನು ಪಾಲಿಸಬೇಕು. ಸಮಾಜದ ಒಳಿತಿಗಾಗಿ ಪ್ರತಿಯೊಬ್ಬರೂ ಕೈಜೋಡಿಸಬೇಕೆಂದು ಶಾಸಕರು ಕರೆ ನೀಡಿದರು.

ಈ ಸಂದರ್ಭದಲ್ಲಿ ಪೂಜ್ಯ ಸಂಗ್ರಾಮ್ ಮಹಾರಾಜರು, ಪೂಜ್ಯ ದೇವಿದಾಸ ಮಹಾರಾಜರು, ಗೋವಿಂದ ಮಹಾರಾಜರು, ಮುಖಂಡರಾದ ಶಿವರಾಜ ಅಲ್ಮಾಜೆ, ಬಾಬುರಾವ ತೋರ್ಣಾವಾಡಿ, ಅನೀಲ ಬಿರಾದಾರ, ಉಮಾಕಾಂತ ದೇಶಮುಖ, ಧನಾಜಿ ರಾಠೋಡ, ಪ್ರತೀಕ ಚವ್ಹಾಣ, ಸಚಿನ ರಾಠೋಡ, ಸುಜಿತ ರಾಠೋಡ, ಪ್ರದೀಪ ಪವಾರ,

ಸಂಜು ಜಾಧವ, ಲಕ್ಷ ಣ ಜಾಧವ, ವಸಂತ ರಾಠೋಡ ಹಲ್ಯಾಳ ಸೇರಿದಂತೆ ಗ್ರಾಮಸ್ಥರು, ಸಮಾಜದ ಮುಖಂಡರು ಹಾಗೂ ಗಣ್ಯರು ಭಾಗವಹಿಸಿ ಸಂತ ಸೇವಾಲಾಲ್ ಮಹಾರಾಜರಿಗೆ ಪುಷ್ಪನಮನ ಸಲ್ಲಿಸಿದರು.

ಕಾರ್ಯಕ್ರಮಕ್ಕೂ ಮುನ್ನ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಕಳಸ ಹೊತ್ತ ಮಹಿಳೆಯರು ಡೊಂಗರಗಾಂವ ಕ್ರಾಸ್‌ನಿಂದ ಲಷ್ಕರ್ ನಾಯಕ್

ತಾಂಡಾವರೆಗೆ ಭವ್ಯ ಮೆರವಣಿಗೆ ನಡೆಸಿ ಗಮನ ಸೆಳೆದರು. ಯುವಕರು ಉತ್ಸಾಹದಿಂದ ಬೈಕ್ ರ‍್ಯಾಲಿ ನಡೆಸಿ ಭಕ್ತಿಭಾವ ಪ್ರದರ್ಶಿಸಿದರು.

## ವ್ಯಕ್ತಿ ಕಾಣೆ: ಪತ್ತೆಗಾಗಿ ಮನವಿ

• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ ತಾಲ್ಲೂಕಿನ ಚಟನಳ್ಳಿ ಗ್ರಾಮದ ನಿವಾಸಿಯಾದ ಗಗನ ಗಣಪತಿ ಶೀಲವಂತ (23) ಇತನು ದಿನಾಂಕ: 24–02–2026 ರಂದು ಮನೆಯಿಂದ ಕೆಲಸಕ್ಕೆ ಹೋಗಿ ಬರುವುದಾಗಿ ಹೇಳಿ ಹೋದವನು ಮನೆಗೆ ಮರಳಿ ಬಾರದೇ ಕಾಣೆಯಾಗಿರುತ್ತಾನೆ.

ಕಾಣೆಯಾದ ವ್ಯಕ್ತಿಯು 5 ಅಡಿ 6 ಇಂಚ್ ಎತ್ತರ ಇದ್ದು, ಗೋಧಿ ಮೈಬಣ್ಣ ಹೊಂದಿದ್ದು, ಉದ್ದ ಮುಖ, ನೇರ ದಪ್ಪ ಮೂಗು, ಸಾಧಾರಣ ಮೈಕಟ್ಟು ಹೊಂದಿದ್ದು, ಕಾಣೆಯಾಗುವ ಸಮಯದಲ್ಲಿ ಮೈಮೇಲೆ ಒಂದು ಬಿಳಿ ಬಣ್ಣದಲ್ಲಿ ಕಪ್ಪು ಬಣ್ಣದ ರೇಖೆ ಉಳ್ಳ ಅಂಗಿ, ಒಂದು ಚಾಕಲೇಟ ಬಣ್ಣದ ಪ್ಯಾಂಟ ಧರಿಸಿರುವ ಇತನು ಕನ್ನಡ, ಹಿಂದಿ ಭಾಷೆಯಲ್ಲಿ ಮಾತನಾಡುತ್ತಾನೆ.

ಈ ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ತಿಳಿದುಬಂದಲ್ಲಿ ಮನ್ನಳ್ಳಿ ಪೊಲೀಸ್ ಠಾಣೆಯ ಪಿ.ಎಸ್.ಐ. ಮೊಬೈಲ್ ಸಂಖ್ಯೆ: 8277975088, 226707, 08742–263601ಗೆ ಸಂಪರ್ಕಿಸುವಂತೆ ಮನ್ನಳ್ಳಿ ಪೊಲೀಸ್ ಠಾಣೆಯ ಪೊಲೀಸ್ ಉಪ ನಿರೀಕ್ಷಕರು ಪ್ರಕಟಣೆಯಲ್ಲಿ ಕೋರಿದ್ದಾರೆ

# ಸಹಿ ಪ್ರಾಥಮಿಕ ಶಾಲೆಯ 7ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಸಂಗೋಳಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 7ನೇ ತರಗತಿ ವಿದ್ಯಾರ್ಥಿಗಳಿಗೆ ಆತ್ಮೀಯವಾಗಿ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲೆಯ ಮುಖ್ಯ ಗುರುಗಳಾದ ಅನ್ನಪೂರ್ಣ ಅವರು ವಹಿಸಿಕೊಂಡರು,

ಇದೇ ಸಂಧರ್ಭದಲ್ಲಿ ಶಿಕ್ಷಕರಾದ ಸುರೇಶ್ ಕಾಳೇಕರ್ ದೈಹಿಕ ಶಿಕ್ಷಕರು, ಪ್ರಶಾಂತ್ ಡ್ಯಾಡೇ ಸಹ ಶಿಕ್ಷಕರು ,ಶ್ರೀಮತಿ ಜ್ಯೋತಿ ಸಹ ಶಿಕ್ಷಕಿಂ–ಯರು, ಸಂಧ್ಯಾರಾಣಿ ಸಹ ಶಿಕ್ಷಕಿಯರು.ಉಷಾ ಸಹ ಶಿಕ್ಷಕಿಯರು,ಕುಮಾರಿ ರೇಣುಕಾ ಅತಿಥಿ ಶಿಕ್ಷಕಿಯರು, ಬೀಳ್ಕೊಡುಗೆ ಸಮಾರಂಭದಲ್ಲಿ ಭಾಗವಹಿಸಿದರು, 7ನೇ ತರಗತಿ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ನೀಡಿ ಸಹ ಶಿಕ್ಷಕರು ಗೌರವಿಸಿದರು,



ಕಮಲನಗರ: ಪಟ್ಟಣದಲ್ಲಿ ಹೋಳಿ ಹಬ್ಬದ ನಿಮಿತ್ತ ಸಡಗರ ಸಂಭ್ರಮ ಮನೆಮಾಡಿತ್ತು. ಇಂದು ಬೆಳಿಗ್ಗೆಯಿಂದಲೇ ರಸ್ತೆಗಿಳಿದ ಪುಟಾಣಿ ಮಕ್ಕಳು, ಪರಸ್ಪರ ಬಣ್ಣ ಎರಚಿ ಸಡಗರಪಟ್ಟರು.
ಬಣ್ಣದ ಓಕುಳಿಯಲ್ಲಿ ಮಿಂದೆದ್ದ ಮಕ್ಕಳು, 'ಹೋಳಿ ಹಬ್ಬದ ಶುಭಾಶಯ' ವಿನಿಮಯ ಮಾಡಿಕೊಳ್ಳುತ್ತಾ ಹಬ್ಬದ ಖುಷಿಯನ್ನು ಹಂಚಿಕೊಂಡರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮಕ್ಕಳ ಬಣ್ಣದಾಟ ನೋಡುಗರ ಗಮನ ಸೆಳೆಯಿತು.(ಮಲ್ಲಮ್ಮ ನುಡಿ ಚಿತ್ರ)

# ಮಧ್ಯವರ್ತಿಗಳ ಆಮಿಷಕ್ಕೆ ಒಳಗಾಗಬೇಡಿ: ಕಲಾವಿದರಿಗೆ ಸೋನಾರೆ ಮನವಿ



• ಮಲ್ಲಮ್ಮ ನುಡಿ ವಾರ್ತೆ ಬೀದರ

ಬೀದರ ಜಿಲ್ಲೆಯಲ್ಲಿ ಮತ್ತು ಹುಲಸೂರ ಹಾಗೂ ಬಸವಕಲ್ಯಾಣ ತಾಲೂಕುಗಳಲ್ಲಿ ಕಲಾವಿದರಿಗೆ ಮಸಾಶನ (ಪಿಂಚಣಿ) ಮಾಡಿಕೊಡುತ್ತೇವೆ ಎಂದು ಹೇಳಿ ಕೆಲವು ದಲ್ಲಾಳಿಗಳು ಕಲಾವಿದರಿಗೆ ಅಮಿಷ ಒಡ್ಡಿ ಹಣ ದೋಚುತ್ತಿರುವ ಪ್ರಕರಣಗಳು ಹೆಚ್ಚಾಗಿವೆ ಎಂಬ ಮಾತುಗಳು ಸಾರ್ವಜನಿಕರಲ್ಲಿ ಕೇಳಿಬರುತ್ತಿವೆ.

ಈ ಹಿನ್ನೆಲೆಯಲ್ಲಿ ಕಲಾವಿದರು ಯಾವುದೇ ಮಧ್ಯವರ್ತಿಗಳ ಮಾತಿಗೆ ಒಳಗಾಗದೆ ನೇರವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಗೆ ಭೇಟಿ ನೀಡಿ ಸ್ವತಃ ಅರ್ಜಿ ಸಲ್ಲಿಸಬೇಕು ಎಂದು ಸದಸ್ಯರು ಕರ್ನಾಟಕ ಜಾನಪದ ಅಕಾಡೆಮಿ ಬೆಂಗಳೂರು ವಿಜಯಕುಮಾರ್ ಸೋನಾರೆ ಅವರು ಮನವಿ ಮಾಡಿದ್ದಾರೆ.

ಕಲಾವಿದರ ಸೌಲಭ್ಯಗಳ ಹೆಸರಿನಲ್ಲಿ ಕೆಲವು ವ್ಯಕ್ತಿಗಳು ಹಣ ವಸೂಲಿ ಮಾಡುವ ಮೂಲಕ ಕಲಾವಿದರ ಗೌರವ ಘನತೆಗೆ ಧಕ್ಕೆ ತಂದು ಅವರ ಕಲಾವೃತ್ತಿಗೆ ಅಪಮಾನ ಮಾಡಿ ದುರುಪಯೋಗಪಡಿಸಿಕೊಳ್ಳುತ್ತಿರುವುದು ವಿಷಾದನೀಯ ಸಂಗತಿಯಾಗಿದೆ.

ಸರ್ಕಾರದಿಂದ ನೀಡಲಾಗುವ ಮಸಾಶನ ಯೋಜನೆಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಸರಳವಾಗಿದ್ದು, ಇದಕ್ಕಾಗಿ ಯಾವುದೇ ಮಧ್ಯವರ್ತಿಗಳ ಅಗತ್ಯವಿಲ್ಲ ಎಂದು ಅವರು ತಿಳಿಸಿದ್ದಾರೆ.

ಈ ರೀತಿಯ ದಲ್ಲಾಳಿಗಳ ಚಟುವಟಿಕೆಗಳಿಗೆ ಕಡಿವಾಣ ಹಾಕಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಹಾಯಕ ನಿರ್ದೇಶಕರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ವಿಜಯಕುಮಾರ್ ಸೋನಾರೆ ಅವರು ಆಗ್ರಹಿಸಿದ್ದಾರೆ.

ಕಲಾವಿದರು ಜಾಗೃತರಾಗಿದ್ದು, ಯಾರಿಗೂ ಹಣ ನೀಡದೆ ನೇರವಾಗಿ ಇಲಾಖೆಯ ಕಚೇರಿಗೆ ತೆರಳಿ

ಅರ್ಜಿ ಸಲ್ಲಿಸಿದರೆ ಮಾತ್ರ ಇಂತಹ ಮೋಸಗಳನ್ನು ತಪ್ಪಿಸಿಕೊಳ್ಳಲು ಸಾಧ್ಯವೆಂದು ಅವರು ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಆಯುಷ್ ಇಲಾಖೆ, ಜಿಲ್ಲಾ ಪಂಚಾಯತ್, ಬಳ್ಳಾರಿ
ಜಿಲ್ಲಾಆಯುಷ್ ಅಧಿಕಾರಿಗಳ ಕಾರ್ಯಾಲಯ, ಬಳ್ಳಾರಿ, ವೀರನಗೌಡ ಕಾಲೋನಿ, ಅಶೋಕ ನಗರ, ಕುಮಾರಸ್ವಾಮಿದೇವಸ್ಥಾನದಎದುರುಗಡೆ, ಭಾಗ್ಯಆಸ್ಪತ್ರೆ ಹತ್ತಿರ, ಬಳ್ಳಾರಿ–583101
Email- dao.bellary09@gmail.com
ಸಂಖ್ಯೆ: ಜಿಆಕಬ/ಔಷಧಿ/ಇ–ಟೆಂಡರ್/2025–26 ದಿನಾಂಕ: 03.03.2026
ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ
2025–26 ನೇ ಸಾಲಿಗೆ ಬಳ್ಳಾರಿ ಜಿಲ್ಲಾ ಆಯುಷ್ ಇಲಾಖೆಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ಆಯುಷ್ ಆಸ್ಪತ್ರೆಗಳು/ ಚಿಕಿತ್ಸಾಲಯಗಳಿಗೆ ಆವಶ್ಯಕವಾಗಿ ಬೇಕಾದ ಆಯುಷ್ ಔಷಧಿಗಳನ್ನು ಖರೀದಿಸಲು ಅಲ್ಪಾವಧಿ ಮರು ಇ–ಟೆಂಡರ್ ಕರೆಯಲಾಗಿದೆ. ಇ–ಪೋರ್ಟಲ್ ವೆಬ್‌ಸೈಟ್ www.kppp.karnataka.gov.in ನಲ್ಲಿ ವೀಕ್ಷಣೆ ಮತ್ತು ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಮಾಡಲು ಕೊನೆಯ ದಿನಾಂಕ: 11–03–2026 ಸಾಯಂಕಾಲ 05.00 ಗಂಟೆಯವರೆಗೂ ನಿಗಧಿಪಡಿಸಲಾಗಿದೆ. ಇ–ಟೆಂಡರ್ ಅಂದಾಜು ಮೌಲ್ಯ ಒಟ್ಟು ರೂ. 28.72 ಲಕ್ಷಗಳು ಇರುತ್ತದೆ. ಆಸಕ್ತಿವುಳ್ಳವರು ನಿಗದಿತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.
ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು ಜಿಲ್ಲಾ ಆಯುಷ್ ಕಛೇರಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1088/ಕೆಎಸ್‌ಎಂಸಿಎ/2025–26

## ವ್ಯಕ್ತಿ ಕಾಣೆ: ಪತ್ತೆಗೆ ಮನವಿ




ಹರಪನಹಳ್ಳಿ:– ಪೊಲೀಸ್ ಠಾಣೆ ಹರಿಹರ ಕ್ಯಾಂಪ್ ಕಾಲೋನಿಯ ನಿವಾಸಿಯಾದ ಮುಜಾವರ್ ಆಯುಬ್ ಎನ್ನುವ ವ್ಯಕ್ತಿಯು 28/08/2024 ರಂದು ಮನೆಯಿಂದ ಹೋದವನು ಮನೆಗೆ ಬಾರದೇ ಕಾಣೆಯಾಗಿರುತ್ತಾರೆ ಈ

ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹರಪನಹಳ್ಳಿ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ.9480805776, ಸಿಪಿಐ ದೂರವಾಣಿ ಸಂಖ್ಯೆ.9480805736, ಗೆ ಕರೆಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವ್ಯಕ್ತಿ ಕಾಣೆ: ಪತ್ತೆಗೆ ಮನವಿ

• ಮಲ್ಲಮ್ಮ ನುಡಿ ವಾರ್ತೆ ಹರಪನಹಳ್ಳಿ



ಹಲುವಾಗಲು ಪೊಲೀಸ್ ಠಾಣೆ ವ್ಯಾಪ್ತಿಯ ಭೀಮ್ಲಾತಾಂಡ ನಿವಾಸಿಯಾದ ರಾಜನಾಯ್ಕ್ ಎನ್ನುವ ವ್ಯಕ್ತಿಯು 12/10/2018 ರಂದು ಭೀಮ್ಲಾತಾಂಡದ ಮನೆಯಿಂದ ಹೋದವನು ಮನೆಗೆ ಬಾರದೇ

ಕಾಣೆಯಾಗಿರುತ್ತಾರೆ ಈ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹರಪನಹಳ್ಳಿ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ.9480805776,

ಸಿಪಿಐ ದೂರವಾಣಿ ಸಂಖ್ಯೆ .9480805736, ಗೆ ಕರೆಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಳೆ ವಿವಿಧ ಸ್ಪರ್ಧೆ ಉದ್ಘಾಟನೆ



**ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ,**

ಇಲ್ಲಿಯ ಚನ್ನಬಸವಾಶ್ರಮ ಪರಿಸರದಲ್ಲಿ ಬಸವ ಜಯಂತಿ, ವಚನ ಜಾತ್ರೆ-2026 ಡಾ.ಚನ್ನಬಸವ ಪಟ್ಟದ್ದೇವರ 27ನೇ ಸ್ಮರಣೋತ್ಸವ ಮತ್ತು ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರ ಅಮೃತ ಮಹೋತ್ಸವ ನಿಮಿತ್ತ ಹಿರೇಮಠ ಸಂಸ್ಥಾನ ಮತ್ತು ಅಮೃತ ಮಹೋತ್ಸವ ಸಮಿತಿ ವತಿಯಿಂದ ಶನಿವಾರ ಬೆಳಿಗ್ಗೆ 10 ಗಂಟೆಗೆ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್‌ನಡಿ ನಡೆದ ವಿವಿಧ ಅಂತಿಮ ಸ್ಪರ್ಧೆಗಳ ಉದ್ಘಾಟನಾ ಸಮಾರಂಭ ಜರುಗಲಿದೆ.

ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು, ಪೀಠಾಧಿಪತಿ ಗುರುಬಸವ ಪಟ್ಟದ್ದೇವರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಶ್ರೀಮಠದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ೯ರಂದು ಕೊಪ್ಪಳದಲ್ಲಿ ವಾಕ್ ಇನ್ ಇಂಟರ್‌ವ್ಯೂವ್

**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ**

ಕೊಪ್ಪಳ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ವಾಕ್ ಇನ್ ಇಂಟರ್‌ವ್ಯೂವನ್ನು ಮಾರ್ಚ್ 9 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಲ್ಲಿ ಆಯೋಜಿಸಲಾಗಿದೆ. ಈ ವಾಕ್ ಇನ್ ಇಂಟರ್‌ವ್ಯೂವದಲ್ಲಿ ದಿವ್ಗಿ ಟಾರ್ಕ್ ಟ್ರಾನ್ಸಫರ್, ಶಿರಸಿ, ಉತ್ತರ ಕನ್ನಡ ಜಿಲ್ಲೆ ಸಂಸ್ಥೆಯು ತಮ್ಮಲ್ಲಿ ಖಾಲಿ ಇರುವ ಮಶೀನ್ ಆಪರೇಟರ್ ಹುದ್ದೆಗಳಿಗೆ ನೇರ ಸಂದರ್ಶನ ನಡೆಸಲಿದ್ದಾರೆ. ಆದ್ದರಿಂದ ಐ.ಟಿ.ಐ(ಫಿಟ್ಟರ್), ಐ.ಟಿ.ಐ(ಟರ್ನರ), ಐ.ಟಿ.ಐ(ಮಶಿನಿಷ್ಟ್) ಹಾಗೂ ಬಿಎಸ್‌ಸಿ, ಬಿಕಾಂ, ಬಿಎ ಅಭ್ಯರ್ಥಿಗಳು ಮತ್ತು ಡಿಪ್ಲೊಮಾ ಮೆಕ್ಯಾನಿಕಲ್, ಆಟೋಮೊಬೈಲ್, ಟೂಲ್ & ಡೈಮೆಕಿಂಗ್ ವೃತ್ತಿಗಳಲ್ಲಿ ಪಾಸ್ ಅಥವಾ ಫೇಲ್ ಆದ ಅಭ್ಯರ್ಥಿಗಳು ಹಾಜರಾಗಬಹುದು. ಅಲ್ಲದೇ ಜಿಟಿಟಿಸಿ ಕೊಪ್ಪಳ ರವರು ತಮ್ಮಲ್ಲಿ ಖಾಲಿ ಇರುವ ಭೋದಕ ಹುದ್ದೆಗಳಿಗೆ ನೇರ ಸಂದರ್ಶನ ನಡೆಸಲಿದ್ದು, ಡಿಪ್ಲೋಮಾ (ಟೂಲ್ & ಡೈಮೇಕಿಂಗ್), ಬಿಇ(ಇ&ಇ), ಬಿಇ(ಇ&ಸಿ), ಪೋಸ್ಟ್ ಡಿಪ್ಲೋಮಾ-ಟೂಲ್ & ಡೈಮೇಕಿಂಗ್ ವಿದ್ಯಾರ್ಹತೆಯ ಅಭ್ಯರ್ಥಿಗಳು ಈ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಇದಲ್ಲದೇ ದೇಶಪಾಂಡೆ ಸ್ಕಿಲ್ಲಿಂಗ್ ರವರು ತಮ್ಮಲ್ಲಿ ಖಾಲಿ ಇರುವ ಇಂಗ್ಲಿಷ್ ಹಾಗೂ ಕಂಪ್ಯೂಟರ್ ಟ್ರೈನರ್ ಹುದ್ದೆಗಳಿಗೆ ಗದಗ ಹಾಗೂ ಕೊಪ್ಪಳ ಜಿಲ್ಲಾದ್ಯಾಂತ ಹುದ್ದೆಗಳಿಗೆ ಆಯ್ಕೆ ಮಾಡಿಕೊಳ್ಳುತ್ತಿದ್ದು, ಕೆಲಸದ ಅನುಭವ ಇದ್ದವರಿಗೆ ಆದ್ಯತೆ ಇರುತ್ತದೆ. ಅರ್ಹ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿದ್ಯಾಭ್ಯಾಸ ಹೊಂದಿದ ಅಭ್ಯರ್ಥಿಗಳು ಈ ನೇರ ಸಂದರ್ಶನಕ್ಕೆ ಹಾಜರಾಗಬಹುದು. ಆಸಕ್ತ 18 ರಿಂದ 34 ವರ್ಷ ನಿರುದ್ಯೋಗಿ ಪುರಷರು ಹಾಗೂ ಮಹಿಳೆಯರು ದೃಢೀಕರಿಸಲಾದ ತಮ್ಮ ವಿದ್ಯಾರ್ಹತೆಯ ಎಲ್ಲ ಪ್ರಮಾಣ ಪತ್ರಗಳು 2 ಪ್ರತಿಗಳೊಂದಿಗೆ ಮತ್ತು ಆಧಾರ ಕಾರ್ಡಿನ ಪ್ರತಿ, ಬಯೋಡಾಟಾ (ರೆಜೂಮ್) ಹಾಗೂ ಪಾಸ್ ಪೋರ್ಟ್ ಅಳತೆಯ 2 ಭಾವಚಿತ್ರಗಳೊಂದಿಗೆ ಈ ವಾಕ್ ಇನ್ ಇಂಟರ್‌ವ್ಯೂವನಲ್ಲಿ ಭಾಗವಹಿಸಿ, ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ಉದ್ಯೋಗಾಕಾಂಕ್ಷಿಗಳು https://forms.gle/bYm5KEikfXAVCP2E7 ಮೂಲಕವು ರಿಜಿಸ್ಟರ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ, ಜಿಲ್ಲಾ ಆಡಳಿತ ಭವನ, ಮೊದಲನೇ ಮಹಡಿ, ಕೊಪ್ಪಳ ಇವರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಉದ್ಯೋಗಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗುತ್ತಿಗೆ ಕಾರ್ಮಿಕರಿಗೆ ಸೇವಾ ಭದ್ರತೆ ಕಲ್ಪಿಸಲು ಆಗ್ರಹ




**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ, :** ನಗರದ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿಂದು ಎಐಯುಟಿಯುಸಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಹಾಸ್ಟೆಲ್, ವಿಮ್ಸ್, ಜೆಸ್ಕಾಂ, ಕೆಪಿಟಿಸಿಎಲ್ ಗುತ್ತಿಗೆ ಕಾರ್ಮಿಕರು ಭಾಗವಹಿಸಿದ್ದರು. ಎಐಯುಟಿಯುಸಿ ಜಿಲ್ಲಾ ಅಧ್ಯಕ್ಷರಾದ ಎ.ದೇವದಾಸ್, ಜಿಲ್ಲಾ ಕಾರ್ಯದರ್ಶಿ ಡಾ.ಪ್ರಮೋದ್, ಉಪಾಧ್ಯಕ್ಷರಾದ ಶಾಂತಾ, ಜಂಟಿ ಕಾರ್ಯದರ್ಶಿ ಸುರೇಶ್, ಗುತ್ತಿಗೆ ಕಾರ್ಮಿಕ ಮುಖಂಡರಾದ ಚೇತನ್, ಕಿರಣ್ ಕುಮಾರ್, ಮುರಳಿ, ಹುಲುಗಪ್ಪ, ಪಾರ್ವತಿ, ಚಂದ್ರಮ್ಮ, ರೋಹಿಣಿ ಮುಂತಾದವರು ಉಪಸ್ಥಿತರಿದ್ದರು.ಪ್ರತಿಭಟನೆಯ ನಂತರ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ತಮ್ಮ ಬೇಡಿಕೆಗಳಾದ ಕನಿಷ್ಠ ವೇತನ ಹೆಚ್ಚಳ ಕುರಿತ ರಾಜ್ಯ ಸರ್ಕಾರದ ಅಧಿಸೂಚನೆ ಕೂಡಲೆ ಹೊರಡಿಸಬೇಕು. ಹೊರಗುತ್ತಿಗೆ ~ಪದ್ಧತಿಯನ್ನು~ ರದ್ದುಗೊಳಿಸಿ, ಕಾರ್ಮಿಕರ ಸೇವೆಯನ್ನು ಖಾಯಂ ಮಾಡಿ. ಅಲ್ಲಿವರೆಗೂ ಎಲ್ಲಾ ಜಿಲ್ಲೆಗಳಲ್ಲಿ ವಿವಿದುದ್ದೇಶ ಕಾರ್ಮಿಕರ ಸಹಕಾರ ಸಂಘ ರಚಿಸಲು ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

# ವ್ಯಕ್ತಿ ಕಾಣೆ: ಪತ್ತೆಗೆ ಮನವಿ



**ಮಲ್ಲಮ್ಮ ನುಡಿ ವಾರ್ತೆ ಹರಪನಹಳ್ಳಿ:**

ಪೊಲೀಸ್ ಠಾಣೆ ಕೋಣನಕೇರಿ ಗ್ರಾಮ ದ ನಾಗರಾಜ ಎನ್ನುವ ವ್ಯಕ್ತಿಯು 12/07/2024 ರಂದು ಮನೆಯಿಂದ ಹೋದವನು ಮನೆಗೆ ಬಾರದೇ ಕಾಣೆಯಾಗಿರುತ್ತಾರೆ ಈ ವ್ಯಕ್ತಿಯ ಬಗ್ಗೆ ಮಾಹಿತಿ ಸಿಕ್ಕಲ್ಲಿ ಹರಪನಹಳ್ಳಿ ಪೊಲೀಸ್ ಠಾಣೆಯ ದೂರವಾಣಿ ಸಂಖ್ಯೆ.9480805776, ಸಿಪಿಐ ದೂರವಾಣಿ ಸಂಖ್ಯೆ .9480805736, ಗೆ ಕರೆಮಾಡಿ ಮಾಹಿತಿ ನೀಡಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜ್ಯದಲ್ಲಿ ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆಯಾಗಲಿ: ಮಹೇಶ ಗೋರನಾಳಕರ್

**ಮಲ್ಲಮ್ಮ ನುಡಿ ವಾರ್ತೆ ಬೀದರ :** ರಾಜ್ಯದಲ್ಲಿ ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪಿಸಿ ಅನುದಾನ ಮೀಸಲಿಡಬೇಕೆಂದು ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಂ-ಯಾ (ಅಂಬೇಡ್ಕರ್) ಪಕ್ಷದ ರಾಜ್ಯ ಸಂಯೋಜಕ ಮಹೇಶ ಗೋರನಾಳಕರ ಸರ್ಕಾರಕ್ಕೆ ಒತ್ತಾಯ ಮಾಡಿದರು.

ಈ ಕುರಿತು ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಗುರುವಾರ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಂ-ಯಾ (ಅಂಬೇಡ್ಕರ್) ವತಿಯಿಂದ ಕರೆದ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು ಸರ್ಕಾರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಿಸಿದರು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ 24% ಪ್ರತಿಶತ ಅನುದಾನ ಮೀಸಲಿಡಬೇಕು. ದಲಿತರಿಗಾಗಿ ಮೀಸಲಿಟ್ಟ ಅನುದಾನ ಅನ್ಯ ಕಾರ್ಯಕ್ಕೆ ಬಳಸಿದರೆ ಅಂಥಹ ಜನಪ್ರತಿನಿಧಿಗಳ ವಿರುದ್ಧ ಅಟ್ರಾಸಿಟಿ ಕೇಸ್ ದಾಖಲಿಸಲಾಗುವುದು. ಕರ್ನಾಟಕದಲ್ಲಿ ಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕು, ಕರ್ನಾಟಕದ ಪ್ರತಿ ಹಳ್ಳಿಯಲ್ಲಿ ದಲಿತರಿಗೆ ಸ್ಮಶಾನ ಭೂಮಿ ಮಂಜುರು ಮಾಡಬೇಕು, ಪ್ರತಿ ಜಿಲ್ಲೆ ತಾಲೂಕು ಮತ್ತು ಹೊಬ್ಬಳಿ ಮಟ್ಟದಲ್ಲಿ ಸುಸಜ್ಜಿತವಾದ ಡಾ.ಬಿ.ಆರ್. ಅಂಬೇಡ್ಕರ್ ಭವನಗಳು ನಿರ್ಮಾಣ ಮಾಡಬೇಕು, ಫಾರಂ ನಂಬರ 50.53. ಮತ್ತು 57 ಅರ್ಜಿ ಸಲ್ಲಿಸಿ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ರೈತರಿಗೆ ಅರಣ್ಯ ಇಲಾಖೆ ಅನ್ಯಾಯ ಮಾಡುತ್ತಿರುವುದನ್ನು ನಿಲ್ಲಿಸಬೇಕು ಮತ್ತು ಎಲ್ಲಾ ರೈತರಿಗೆ ಸಿ.ಫಾರಂ ಮಂಜುರು ಮಾಡಬೇಕು, ಮನೆ ಇಲ್ಲದೆ ಬಾಡಿಗೆ ಮನೆಗಳಲ್ಲಿ ವಾಸಿಸುವ ಎಲ್ಲಾ ವರ್ಗದವರಿಗೆ ನಿವೇಶನ ಮತ್ತು ಮನೆ ಮಂಜುರು ಮಾಡಬೇಕು, ಆಶಾ ಕಾರ್ಯಕರ್ತೆ-ಯರಿಗೆ ಖಾಯಂ ನೌಕರರೆಂದು ಪರಿಗಣಿಸಿ 18 ಹದಿನೆಂಟು ಸಾವಿರ ರೂಪಾಯಿ ವೇತನ ನೀಡಬೇಕು ಮತ್ತು ಮುಂಬಡ್ತಿ ನೀಡಬೇಕು, ಬೀದರನಲ್ಲಿ ಸ್ಲಂ ಬೋರ್ಡನಿಂದ ಪ್ರಧಾನ ಮಂತ್ರಿ ಆವಾಸ್ ಯೋಜನೆಯಲ್ಲಿ ನಿರ್ಮಾಣವಾಗುತ್ತಿರುವ 750 ಮನೆಗಳು ನಿರ್ಮಾಣದಲ್ಲಿ ಭ್ರಷ್ಟಾಚಾರ ಮಾಡುತ್ತಿರುವ ಗುತ್ತಿಗೆದಾರರಿಗೆ ಕಪ್ಪು ಪಟ್ಟಿಗೆ ಸೇರಿಸಬೇಕು ಮತ್ತು ಉನ್ನತ ಮಟ್ಟದ ಅಧಿಕಾರಿಗಳಿಂದ ತನಿಖೆ ಮಾಡಿ ತಪ್ಪಿತಸ್ಥ ಅಧಿಕಾರಿಗಳಿಗೆ ನೌಕರಿಯಿಂದ ವಜಾ ಮಾಡಬೇಕು, ಸರ್ಕಾರಿ ಶಾಲೆಗಳು ಮುಚ್ಚಬಾರದು, ಕಲ್ಯಾಣ ಕರ್ನಾಟಕದಲ್ಲಿ ನಿರುದ್ಯೋಗ ಹೊಗಲಾಡಿಸಲು ಕೈಗಾರಿಕೆಗಳು ಸ್ಥಾಪಿಸಬೇಕು, ಅಂತರ್ಜಾತಿ ವಿವಾಹ, ಒಳ ಪಂಗಡ ವಿವಾಹ, ಸರಳ ಸಾಮೂಹಿಕ ವಿವಾಹ ಮಾಡಿಕೊಂಡ ಜೋಡಿಗಳಿಗೆ ತುರ್ತಾಗಿ ಪ್ರೋತ್ಸಾಹ ಧನ ಮಂಜುರು ಮಾಡಬೇಕು ಮತ್ತು ಪ್ರೋತ್ಸಾಹ ಧನ ಹೆಚ್ಚಳ, ಉದ್ಯೋಗಿನಿ ಸ್ವಯಂ ಉದ್ಯೋಗ ಸಾಲದ ಪ್ರೋತ್ಸಾಹ ಧನ ಹೆಚ್ಚಳ ಮಾಡಬೇಕು, ಅಸ್ಪೃಶ್ಯತೆ ನಿವಾರಣೆಗೆ ಕಾರ್ಯ ಯೋಜನೆ ರೂಪಿಸಬೇಕು, ಪ.ಜಾ.ಪ.ಪಂ ಓಣಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕೆಂದು ಒತ್ತಾಯಿಸಿದರು. ಆರ್.ಪಿ.ಐ (ಅಂಬೇಡ್ಕರ್) ಪಕ್ಷದ ಜಿಲ್ಲಾಧ್ಯಕ್ಷ ಪ್ರಕಾಶ ರಾವಣ ಮಾತನಾಡುತ್ತ ಸಿದ್ಧರಾಮಯ್ಯ ಅನ್ನರಾಮಯ್ಯನೂ ಅಲ್ಲ, ದಲಿತರಾಮಯ್ಯನೂ ಅಲ್ಲ, ಅವರು ದಲಿತದ್ರೋಹಿರಾಮಯ್ಯರಾಗಿದ್ದಾರೆ. ಬಡವರ ದಲಿತರ ಹೆಸರು ಹೇಳಿಕೊಂಡು ಗೆದ್ದುಬಂದು ಒಳಮೀಸಲಾತಿ ಹೆಸರಿನಲ್ಲಿ ದಲಿತರಿಗೆ ದಿಕ್ಕುತಪ್ಪಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ರಾಜ್ಯದ ಕಾಂಗ್ರೇಸ್ 60 ಪ್ರತಿಶತ ಕಮಿಷನ್ ಸರ್ಕಾರವಾಗಿದೆ. ಎಸ್‌ಇಪಿ ಟಿಎಸ್‌ಪಿ ಹಣವನ್ನು ದುರ್ಬಳಕೆ ಮಾಡಿಕೊಂಡು ದಲಿತರಿಗೆ ಅನ್ಯಾಯ ಮಾಡಲಾಗುತ್ತಿದೆ. ಗ್ಯಾರಂಟಿ ಯೋಜನೆ ಬಿಟ್ಟು ದುಡಿಯುವ ಕೈಗಳಿಗೆ ಉದ್ಯೋಗ ಕೊಡಿ. ಉಳುವವರಿಗೆ ಭೂಮಿ ಕೊಡಿ. ಈ ಬಾರಿ ಬಜೇಟ್‌ನಲ್ಲಿ ದಲಿತರ ಅಭಿವೃದ್ಧಿ ವಿಷಯದಲ್ಲಿ ತಾರತಮ್ಯ ಮಾಡಿದರೆ ಆರ್‌ಪಿಐ ಪಕ್ಷದ ವತಿಯಿಂದ ಹೋರಾಟ ಮಾಡುತ್ತೇವೆ ಎಂದು ತಿಳಿಸಿದರು. ಪಕ್ಷದ ರಾಜ್ಯ ಸಮಿತಿ ಸದಸ್ಯೆ ಗಂಗಮ್ಮಾ ಫುಲೆ ಮಾತನಾಡಿ ದಲಿತ ಮಹಿಳೆಯರ ಮೇಲೆ ಆಗುತ್ತಿರುವ ಅನ್ಯಾಯವನ್ನು ಸರ್ಕಾರ ತಡೆಯಬೇಕು. ತಪ್ಪಿತಸ್ಥರ ವಿರುದ್ಧ ಕ್ರಮ ಆಗುತ್ತಿಲ್ಲ. ತನಿಖೆಯೂ ಆಗುತ್ತಿಲ್ಲ. ದಲಿತರ ಓಣಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಬೇಕು. ದುಶ್ಚಟಗಳಿಂದ ಯುವಕರು ಹಾಳಾಗುತ್ತಿರುವ ಕಾರಣ ಸಾರಾಯಿ, ಗುಟಖಾ ಬಂದ್ ಮಾಡಬೇಕೆಂದು ಸರ್ಕಾರಕ್ಕೆ ಆಗ್ರಹಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಪಕ್ಷದ ಕಲಬುರಗಿ ವಿಭಾಗೀಯ ಮಹಿಳಾ ಕಾರ್ಯಾಧ್ಯಕ್ಷೆ ಉಷಾಬಾಯಿ ಬನ್ಸುಡೆ, ಜಿಲ್ಲಾ ಮಹಿಳಾ ಪ್ರಧಾನ ಕಾರ್ಯದರ್ಶಿ ಶೆಶಿಕಲಾ ಶರ್ಮಾ, ಬೀದರ ಮಹಿಳಾ ತಾಲೂಕು ಅಧ್ಯಕ್ಷೆ ಸೊನಮ್ಮಾ ಕಸ್ತೂರೆ ಇದ್ದರು.

# ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ ಜಾತ್ರಾ ಮಹೋತ್ಸವದ ಅಂಗವಾಗಿ ಪಶುಗಳ ಪ್ರದರ್ಶನ



**ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ತಾಲ್ಲೂಕಿನ ಕರಕನಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಶ್ರೀ ಗುರು ಗಂಗಾಧರ ಬಕ್ಕಪ್ರಭುಗಳ ಜಾತ್ರಾ ಮಹೋತ್ಸವದ ಅಂಗವಾಗಿ ಪಶುಗಳ ಭವ್ಯ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಸಹಾಯಕ ನಿರ್ದೇಶಕರು ಪಶು ವೈದ್ಯಾಧಿಕಾರಿ ಡಾ. ಶಾಂತವೀರ ಗೋಪಾ ಉದ್ಘಾಟಿಸಿದರು. ಮಾತನಾಡಿದರು.

ಜಾತ್ರಾ ಮಹೋತ್ಸವದ ಭಾಗವಾಗಿ ನಡೆದ ಈ ಪಶು ಪ್ರದರ್ಶನದಲ್ಲಿ ಸುತ್ತಮುತ್ತಲಿನ ಗ್ರಾಮಗಳಿಂದ ಅನೇಕ ರೈತರು ತಮ್ಮ ಉತ್ತಮ ಜಾತಿಯ ಎತ್ತುಗಳು, ಹಸುಗಳು, ಕರುಗಳು ಹಾಗೂ ಇತರ ಪಶುಗಳನ್ನು ಕ-ರೆತಂದು ಪ್ರದರ್ಶಿಸಿದರು. ವಿವಿಧ ಜಾತಿಯ ಪಶುಗಳನ್ನು ನೋಡಲು ಗ್ರಾಮಸ್ಥರು ಹಾಗೂ ರೈತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಆಸಕ್ತಿ ತೆ-ೂರಿದರು. ಈ ಕಾರ್ಯಕ್ರಮದಲ್ಲಿ ಉತ್ತಮ ಗುಣಮಟ್ಟದ ಪಶುಗಳನ್ನು ಪ್ರದರ್ಶಿಸಿದ ರೈತರಿಗೆ ಬಹುಮಾನಗಳನ್ನು ನೀಡಿ ಗೌರವಿಸಲಾಯಿತು. ರೈತರು ಪಶುಸಂಗೋಪನೆ ಹಾಗೂ ಉತ್ತಮ ಜಾತಿಯ ಪಶುಗಳ ಸಾಕಾಣಿ-ಕೆಗೆ ಪ್ರೋತ್ಸಾಹ ನೀಡುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಈ ಸಂದರ್ಭದಲ್ಲಿ ಜಾತ್ರಾ ಸಮಿತಿ ಸದಸ್ಯರು, ಗ್ರಾಮದ ಹಿರಿಯರು, ರೈತರು ಹಾಗೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಅಧ್ಯಕ್ಷತೆಯನ್ನು ಪಂಚಾಯತಿ ಅಭಿವೃದ್ಧಿ ಅಧುಕಾರಿ ರಾಜಕುಮಾರ ಪಂಚಾಳ ವಹಿಸಿದ್ದರು, ಬೇಮಳಖೇಡಾ ಪಿ.ಎಸ್.ಆಯ್. ಸವಿತಾ, ರಾಜಪ್ಪಾ ಮುತ್ಯಾ, ಲಕ್ಷ್ಮಿಕಾಂತ ಕುಲಕರ್ಣಿ, ಜಗನ್ನಾಥ ರೆಡ್ಡಿ ಮಟಾಟಿ, ಗೋಪಾಲರೆಡ್ಡಿ ನಿರ್ಣಾ, ಪ್ರಭು ಘಾಟೊಳ್ಳಿ, ಜಗನ್ನಾಥ ಇದಲಾಯಿ ರೈತರು ಭಾಗವಹಿಸಿದ್ದರು.

# ವೀರಣ್ಣ ಬೆಳ್ಳುಬ್ಬಿಗೆ ದೈಹಿಕ ಶಿಕ್ಷಕರ ಸಂಘದಿಂದ ಸನ್ಮಾನ

**ಮಲ್ಲಮ್ಮ ನುಡಿ ವಾರ್ತೆ ಹುಣಸಗಿ:**

ಸ್ಥಳೀಯ ಸರಕಾರಿ ಕನ್ಯಾ ಪ್ರೌಢಶಾಲೆಯಲ್ಲಿ ತಾಲೂಕು ದೈಹಿಕ ಶಿಕ್ಷಕರ ಸಂಘದ ವತಿಯಿಂದ ಉತ್ತಮ ಶಿಕ್ಷಕ ವಿದ್ಯಾರತ್ನ ಪ್ರಶಸ್ತಿ ಪಡೆದ ಗೆದ್ದಲಮರಿ ಸರಕಾರಿ ಪ್ರೌಢಶಾಲೆಯ ಮುಖ್ಯಶಿಕ್ಷಕ ವೀರಣ್ಣ ಬೆಳ್ಳುಬ್ಬಿ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆ ನೌಕರರ ಸಂಘದ ರಾಜ್ಯಮಟ್ಟದ ಸಮಾವೇಶದಲ್ಲಿ ಉತ್ತಮ ಶಿಕ್ಷಕ ವಿದ್ಯಾರತ್ನ ಪ್ರಶಸ್ತಿ ಸ್ವೀಕರಿಸಿದ ಹಿನ್ನೆಲೆಯಲ್ಲಿ ಅವರಿಗೆ ಈ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಮುಖ್ಯಶಿಕ್ಷಕ ವೀರಣ್ಣ ಬೆಳ್ಳುಬ್ಬಿ ಅವರು, ಶಿಕ್ಷಕ ವೃತ್ತಿಯಲ್ಲಿ ಸಾಕಷ್ಟು ಶ್ರಮಪಟ್ಟು ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಪ್ರಾಮಾಣಿಕವಾಗಿ



ಸೇವೆ ಸಲ್ಲಿಸಿರುವ ತೃಪ್ತಿ ನನಗಿದೆ. ಈ ಪ್ರಶಸ್ತಿ ನನ್ನ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದ್ದು, ಮುಂದೆಯೂ ವಿದ್ಯಾರ್ಥಿಗಳ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುವುದಾಗಿ ಹೇಳಿದರು.

ಇದೇ ಸಂದರ್ಭದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ವಿಠಲ್ ಚವ್ಹಾಣ ಅವರು ಹುಣಸಗಿ ತಾಲೂಕು ಎಸ್‌ಸಿ/ಎಸ್‌ಟಿ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಅವರನ್ನು ಸಹ ಸನ್ಮಾನಿಸಿ ಅಭಿನಂದಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯಗುರು ವಿಠಲ ಚವ್ಹಾಣ, ನಿವೃತ್ತ ಶಿಕ್ಷಕ ಬಸವರಾಜ ಬೆಳ್ಳಿ, ಬಸನಗೌಡ ವಠಾರ, ಶರಣಗೌಡ ಬಾನಾಳ, ಬಸವರಾಜ ತೆಗ್ಗಳ್ಳಿ, ನಾಗನಗೌಡ ಪಾಟೀಲ, ಬಸನಗೌಡ ಬಿರಾದಾರ, ಮಶಾಕ ಯಾಳಗಿ, ಬಸನಗೌಡ ಬಿರಾದಾರ, ಭೀಮಣ್ಣ ಸರ್, ತಿಪ್ಪಣ್ಣ ಅರನಾಳ ಸೇರಿದಂತೆ ಹಲವು ಶಾಲೆಯ ದೈಹಿಕ ಶಿಕ್ಷಕರು ಉಪಸ್ಥಿತರಿದ್ದರು

# ಪವಿತ್ರ ರಂಜಾನ್ ; ಮದ್ರಾಸ ಮಕ್ಕಳಿಗೆ ಜುಬ್ಬಾ ಪೈಜಾಮ ವಿತರಣೆ



**ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ :** ನಗರದ ಗುಗ್ಗರಹಟ್ಟಿ ಪ್ರದೇಶದಲ್ಲಿರುವ ಮದ್ರಸ-ಎ-ಸಿರಾಜುಲ್ ಖುರಾನ್ ಮದ್ರಸನಲ್ಲಿನ ಸುಮಾರು 25 ಅನಾಥ ಮಕ್ಕಳಿಗೆ ಮುಸ್ಲಿಮರ ಅತಿ ದೊಡ್ಡ ಹಬ್ಬ ಪವಿತ್ರ ರಂಜಾನ್ ಪ್ರಯುಕ್ತ ಸಮಾಜ ಸೇವಕ ಸಿಲಾರ್ ಭಾಷ ಜುಬ್ಬಾ ಪೈಜಾಮ ವಿತರಣೆ ಮಾಡಿದರು. ಮುಸ್ಲಿಂ ಸಮುದಾಯದಕ್ಕೆ ಅತ್ಯಂತ ಪವಿತ್ರವಾದ ಈ ಹಬ್ಬ ದಾನ ಧರ್ಮದ ಪ್ರತೀಕವಾಗಿ ಆಚರಿಸಲಾಗುತ್ತದೆ, ಇಂತಹ ಪವಿತ್ರ ಹಬ್ಬದಲ್ಲಿ ತಂದೆ-ತಾಯಿ ಇಲ್ಲದ ಮಕ್ಕಳು ಸಹ ಭಕ್ತಿ ಶ್ರದ್ಧೆಯಿಂದ ಮೂವತ್ತು ದಿನಗಳ ಕಾಲ ಉಪವಾಸ ಮಾಡುವುದರೊಂದಿಗೆ ಆಚರಿಸಿ ಅಲ್ಲಾನ ಕೃಪೆಗೆ ಪಾತ್ರರಾಗಲೆಂದು ಮತ್ತು ಸಮಾಜದ ಎಲ್ಲಾ ಮಕ್ಕಳಂತೆ ಇವರು ಸಹ ಹಬ್ಬದ ವಾತಾವರಣದಲ್ಲಿ ಸಂತೋಷವಾಗಿರಲಿ ಎಂದು ಈ ಮಕ್ಕಳಿಗೆ ಹೊಸ ಬಟ್ಟೆಯನ್ನು ನೀಡುತ್ತಿದ್ದೇನೆ ಎಂದ ಸಿಲಾರ್ ಸಾಬ್, ಮುಂದಿನ ದಿನಗಳಲ್ಲಿ ಇಂತಹ ಇನ್ನೂ ಹಲವಾರು ಮಕ್ಕಳಿಗೆ ಇದೇ ರೀತಿಯಾಗಿ ಸಹಾಯ ಮಾಡಲು ಉದ್ದೇಶಿಸಿದ್ದೇನೆ, ನನಗೆ ಮುಂದಿನ ದಿನಗಳಲ್ಲಿ ಇಂತಹ ಸಾಮಾಜಿಕ ಕಾರ್ಯವನ್ನು ಕೈಗೊಳ್ಳಲು ದೇವರು ಶಕ್ತಿ ನೀಡಲಿ ಎಂದು ಕೇಳಿಕೊಂಡರು.

ಈ ಸಂದರ್ಭದಲ್ಲಿ ಅನ್ಸರ್ ಬಾಷಾ, ಹಾಜಿ, ಹಬ್ಬುಲ್ಲಾ, ವೈ ಪಿರಾಸಾಬ್, ಮುಫ್ತಿ ಮುಬಿನ್, ಖಾದ್ರಿ, ಡಾ. ಮುಫ್ತಿ ಇದಾಯಿತುಲ್ಲಾ, ಅಶ್ರಫಿ, ಮೌಲಾನ, ಶಾಹಿದ್, ಅಶ್ರಫ್, ಹುಸೇನ್ ಸೇರಿದಂತೆ ಹಲವಾರು ಜನ ಮುಸ್ಲಿಂ ಮುಖಂಡರಿದ್ದರು.

# ತಿರಸ್ಕೃತ ಅರಣ್ಯವಾಸಿಗಳ ಅರ್ಜಿಗಳಿಗೆ ನ್ಯಾಯ ಒದಗಿಸುವಂತೆ ಸಚಿವರಿಗೆ ಮನವಿ



**ಮಲ್ಲಮ್ಮ ನುಡಿ ವಾರ್ತೆ ಗೋಕರ್ಣ :** ಜಿಲ್ಲೆಯ ಅರಣ್ಯವಾಸಿಗಳ ಭೂ ಹಕ್ಕು ಮಾನ್ಯತೆ ಸಂಬಂಧಿಸಿ ತಿರಸ್ಕೃತ ಅರ್ಜಿಗಳ ಮರು ಪರಿಶೀಲನೆಗಾಗಿ ನಿಯೋಜಿಸಲ್ಪಟ್ಟ ಜಂಟಿ ಸಮಿತಿಗಳ ಪ್ರಕ್ರಿಯೆಯ ಶೀಘ್ರ ಮತ್ತು ಪರಿಣಾಮಕಾರಿ ಅನುಷ್ಠಾನಕ್ಕೆ ಆಗ್ರಹಿಸಿ ಹೋರಾಟ ಸಮಿತಿಗಳ ನಿಯೋಗವು ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಉಚ್ಚ ನ್ಯಾಯಾಲಯದ ಆದೇಶದಂತೆ ರಾಜ್ಯ ಅರಣ್ಯ ಭೂಮಿ ಹಕ್ಕು ಉಸ್ತುವಾರಿ ಸಮಿತಿಯು ಅರ್ಜಿಗಳ ಮರುಪರಿಶೀಲನೆಗಾಗಿ ನೀಡಿದ ನಿರ್ದೇಶನ ಪಾಲಿಸುವ 'ಜಂಟಿ ಪರಿಶೀಲನಾ ಸಮಿತಿ' ಸ್ಪಷ್ಟತೆ ಮೂಡಿಸಿ ಅವಲಂಬಿತರಿಗೆ ನೈಜ ನ್ಯಾಯ ದೊರಕುವಲ್ಲಿ ಸಹಾಯಕಾರಿಯಾಗುವ ಉದ್ದೇಶದಿಂದ ಜಿಲ್ಲಾಧಿಕಾರಿಗಳೊಂದಿಗೆ ಜಂಟಿ ಸಭೆ ಏರ್ಪಡಿಸಲು ಅವರು ಸಲ್ಲಿಸಿದ ಮನವಿಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಜಿಲ್ಲಾ ಜನಪರ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಡಾ. ನಾಗೇಶ ನಾಯ್ಕ ಕಾಗಾಲ, ಪ್ರಮುಖರಾದ ರಾಮಾ ಮೊಗೇರ ಭಟ್ಕಳ, ವಿ. ಎನ್. ನಾಯ್ಕ ಬೇಡ್ಕಣಿ, ಚಂದ್ರಕಾಂತ ಕೊಚರೇಕರ್ ಅಳ್ಳಂಕಿ, ವೀರಭದ್ರ ನಾಯ್ಕ ಸಿದ್ದಾಪುರ, ಎಂ. ಡಿ. ನಾಯ್ಕ ಭಟ್ಕಳ, ಸಮಿಉಲ್ಲಾ ಶೇಕ್ ಭಟ್ಕಳ, ಸುಲೇಮಾನ್ ಶೇಖ್ ಭಟ್ಕಳ ಇತರರಿದ್ದರು.

# ಗ್ರಾಮ-1 ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಅರ್ಜಿ ಆಹ್ವಾನ

**ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :**

ಕೊಪ್ಪಳ ಜಿಲ್ಲೆಯ 19 ನವೀಕೃತ ಗ್ರೇಡ್-1 ಗ್ರಾಮ ಪಂಚಾಯತಿಗಳ ಗ್ರಾಮ-1 ಕೇಂದ್ರಗಳಲ್ಲಿ ತಲಾ ಒಂದು ಹುದ್ದೆಗೆ ಕಾರ್ಯನಿರ್ವಹಿಸಲು ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ಜಿಲ್ಲೆಯಲ್ಲಿ ಗ್ರೇಡ್-2 ಯಿಂದ ಗ್ರೇಡ್-1 ನವೀಕರಿಸಲಾದ ಗ್ರಾಮ ಪಂಚಾಯತಿಗಳಲ್ಲಿ ಗ್ರಾಮ-1 ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಸಲುವಾಗಿ ಗಂಗಾವತಿ ತಾಲ್ಲೂಕಿನ ಆನೆಗುಂದಿ ಮತ್ತು ಡಣಾಪುರ, ಕನಕಗಿರಿ ತಾಲ್ಲೂಕಿನ ಚಿಕ್ಕಡನಕನಕಲ್ & ಗೌರಿಪುರ, ಕಾರಟಗಿ ತಾಲ್ಲೂಕಿನ ಚೆಳ್ಳೂರು, ಕೊಪ್ಪಳ ತಾಲ್ಲೂಕಿನ ಬೆಟಗೇರಿ & ಹಾಲವರ್ತಿ, ಕುಕನೂರು ತಾಲ್ಲೂಕಿನ ಬನ್ನಿಕೊಪ್ಪ, ಬಾನಾಪುರ, ಇಟಗಿ, ಕುದರಿಮೋತಿ & ಮಸಬಹಂಚಿನಾಳ, ಕುಷ್ಟಗಿ ತಾಲ್ಲೂಕಿನ ದೋಡಿಹಾಳ, ಹನುಮನಾಳ, ಕಂದಕುರ, ಕೇಸೂರು, ಲಿಂಗದಹಳ್ಳಿ & ಮುದೇನೂರು ಹಾಗೂ ಯಲಬುರ್ಗಾ ತಾಲ್ಲೂಕಿನ ಹಿರೇಮ್ಯಾಗೇರಿ ಸೇರಿದಂತೆ ಈ ಎಲ್ಲಾ 19 ಗ್ರಾಮ ಪಂಚಾಯತಿಗಳಲ್ಲಿ ಹೊಸದಾಗಿ ಅಧಿಸೂಚನೆಯನ್ನು ಸರ್ಕಾರವು ಹೊರಡಿಸಿರುತ್ತದೆ.

ಪ್ರಯುಕ್ತ, ಆಯಾ ಗ್ರಾಮ ಪಂಚಾಯತಿಗಳಲ್ಲಿನ ಆಸಕ್ತರು ಗ್ರಾಮ-1 ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಇಚ್ಛಿಸಿದ್ದಲ್ಲಿ ಮಾರ್ಚ್ 15 ರೊಳಗೆ ಆನ್‌ಲೈನ್ https://sevasindhuservices.karnataka.gov.in/loginWindow.do ಪೋರ್ಟಲ್ ಮೂಲಕ ಅರ್ಜಿಯನ್ನು ಸಲ್ಲಿಸಲು ಮಾತ್ರ ಅವಕಾಶ ಕಲ್ಪಿಸಿದ್ದು, ಆಸಕ್ತರು ಇದರ ಸದುಪಯೋಗ ಪಡಿಸಿಕೊಳ್ಳುವಂತೆ ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಜಕೀಯ ಷಡ್ಯಂತ್ರ ಮುಂದುವರೆದರೆ ಉಗ್ರ ಹೋರಾಟದ ಎಚ್ಚರಿಕೆ

**ಮಲ್ಲಮ್ಮ ನುಡಿವಾರ್ತೆ ಗುರುಮಠಕಲ್**

ಗುರುಮಠಕಲ್: ಶಹಾಪುರ ತಾಲೂಕಿನ ಮಹಲ್ ರೋಜಾ ದೇವಸ್ಥಾನದ ಯುವ ಧರ್ಮಗುರು ಮಲ್ಲಿಕಾರ್ಜುನ ಮುತ್ಯಾ ಅವರ ವಿರುದ್ಧ ದಾಖಲಾಗಿರುವ ಪೋಕ್ಸೋ ಪ್ರಕರಣವು ನಿರಾಧಾರವಾಗಿದ್ದು, ಇದು ರಾಜಕೀಯ ಷಡ್ಯಂತ್ರದ ಭಾಗವಾಗಿದೆ ಎಂದು ಕೋಲಿ ಸಮಾಜದ ಮುಖಂಡರು ಆರೋಪಿಸಿದ್ದಾರೆ.

ಪಟ್ಟಣದ ಶ್ರೀ ಆಂಜನೇಯ ದೇವಸ್ಥಾನದ ಆವರಣದಲ್ಲಿ ಗುರುವಾರ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿದ ಕೋಲಿ ಸಮಾಜದ ಮುಖಂಡ ಅನಂತಪ್ಪ ಯದ್ಲಾಪೂರ್, ಕೂಡಲೇ ಮಲ್ಲಿಕಾರ್ಜುನ ಮುತ್ಯಾ ಅವರನ್ನು ಆರೋಪ ಮುಕ್ತಗೊಳಿಸಿ, ಸುಳ್ಳು ಆರೋಪ ಮಾಡಿದವರ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಇಲ್ಲವಾದರೆ ಕೋಲಿ ಸಮಾಜ ಮತ್ತು ಮಲ್ಲಿಕಾರ್ಜುನ ಮುತ್ಯಾ ಭಕ್ತರ ವತಿಯಿಂದ ಉಗ್ರ ಹೋರಾಟ ನಡೆಸುವುದಾಗಿ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೋಲಿ ಸಮಾಜದ ಮುಖಂಡೆ ಶ್ರೀಮತಿ ಅಮೃತಮ್ಮ ಬೋರಬಂಡಾ, ಮಲ್ಲಿಕಾರ್ಜುನ ಮುತ್ಯಾರವರು ತಮ್ಮ ತಂದೆ ಹನುಮಂತರಾಯ ಮುತ್ಯಾ ಅವರ ನಂತರ ಪೀಠವನ್ನು ಅಲಂಕರಿಸಿ ಅನೇಕ ಭಕ್ತರ ನಡುವೆ ಪವಾಡ ಪುರುಷರಾಗಿ ಗುರುತಿಸಿಕೊಂಡಿದ್ದಾರೆ. ಇತ್ತೀಚೆಗೆ ಇವರ ವಿರುದ್ಧ ದಾಖಲಾಗಿರುವ



ಪೋಕ್ಸೋ ಪ್ರಕರಣವು ಯಾವುದೇ ವಾಸ್ತವಾಂಶವಿಲ್ಲದೆ ಮಾಡಿರುವ ನಿರಾಧಾರ ಆರೋಪವಾಗಿದ್ದು, ಅವರ ವರ್ಚಸ್ಸನ್ನು ಕುಗ್ಗಿಸಲು ಕೆಲವರು ನಡೆಸಿರುವ ಹುನ್ನಾರ ಎಂದು ಕಿಡಿಕಾರಿದರು. ಹಿರಿಯ ಮುಖಂಡ ಸೂರ್ಯನಾರಾಯಣ ನೀರೆಟಿ ಮಾತನಾಡಿ, ಇತ್ತೀಚೆಗೆ ಹಿಂದೂ ಧರ್ಮದ ದೇವಸ್ಥಾನಗಳ ಕುರಿತು ಬೇಕಂತಲೇ ಅಪಪ್ರಚಾರ ನಡೆಸಿ ಭಕ್ತರ ನಂಬಿಕೆಯನ್ನು ಕುಂದಿಸುವ ಕಾರ್ಯಗಳು ನಡೆಯುತ್ತಿವೆ. ನಾವು ಯಾವುದೇ ಕಾರಣಕ್ಕೂ ಇಂತಹ ಷಡ್ಯಂತ್ರಗಳಿಗೆ ಬಲಿಯಾಗಬಾರದು ಎಂದು ಹೇಳಿದರು.

ಇದೇ ವೇಳೆ ಯಾದಗಿರಿ ಜಿಲ್ಲೆಯ ಕೆಲವು ರಾಜಕೀಯ ನಾಯಕರಿಂದಲೇ ಈ ಕೃತ್ಯ ನಡೆದಿದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ ಎಂದು ಮುಖಂಡರು ಆರೋಪಿಸಿದರು. ಜಿಲ್ಲೆಯ ಉಸ್ತುವಾರಿ ಸಚಿವರು ಹಾಗೂ ಕೆಲವು ಶಾಸಕರು ಈ ಪ್ರಕರಣವನ್ನು ಖಂಡಿಸಿರುವುದಾಗಿ ತಿಳಿಸಿದ ಅವರು, ಇನ್ನೂ ಈವರೆಗೆ ಯಾವುದೇ ಪ್ರತಿಕ್ರಿಯೆ ನೀಡದ ಕೆಲ ರಾಜಕೀಯ ನಾಯಕರ ಬಗ್ಗೆ ಸಾರ್ವಜನಿಕರಲ್ಲಿ ಅನುಮಾನ ಶುರುವಾಗಿದೆ ಎಂದು ಹೇಳಿದರು.

ಈ ವೇಳೆ ಕೋಲಿ ಸಮಾಜದ ಅಧ್ಯಕ್ಷ ಅಶೋಕ್ ಸಂಜನೊಳ ಸೇರಿದಂತೆ ಕೋಲಿ ಸಮುದಾಯದ ಮುಖಂಡರು, ಪ್ರಕರಣವನ್ನು ಸುಳ್ಳು ಎಂದು ಆರೋಪಿಸಿ

ಪಟ್ಟಣದಲ್ಲಿ ಬೃಹತ್ ಪ್ರತಿಭಟನೆ ನಡೆಸಿ ನ್ಯಾಯಕ್ಕಾಗಿ ಹೋರಾಟ ಮುಂದುವರಿಸುವುದಾಗಿ ತಿಳಿಸಿದರು. ಪತ್ರಿಕಾ ಗೋಷ್ಠಿಯಲ್ಲಿ ಶರಣಪ್ಪ ಧರ್ಮಪುರ್, ತಿಮ್ಮಪ್ಪ ನಿಂಗವೊಳ್, ಕನ್ನಯ್ಯ ಪಡಿಗೆ, ಬಸ್ಸಣ್ಣ ಅರಬಿಂಜರ್, ಶ್ರೀನಿವಾಸ್ ಗಾಳ, ನರಸಿಮುಲು ಗಂಗನೊಳ, ರಾಮುಲು ಕೊಡಗಂಟಿ, ಶೇಷಪ್ಪ ಬುರ್ಜು, ಮಹೇಶ್ ಗಡ್ಡಂ, ಸಾಬಣ್ಣ ಮನ್ನೇ ಹಾಗೂ ಸಮಾಜದ ಮುಖಂಡರು ಭಾಗವಹಿಸಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.
PRGI NO. 120927
(RNINO:KARKAN/2011/48371)


# ಕನಿಷ್ಠ ವೇತನ ಜಾರಿಗೊಳಿಸಿ, ಬಜೆಟ್‌ನಲ್ಲಿ ಮೀಸಲಿಡಲು ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ರಾಜ್ಯದಾದ್ಯಂತ ಸಮಾಜ ಕಲ್ಯಾಣ ಇಲಾಖೆ,ಹಿಂದುಳಿದವರ್ಗಗಳಕಲ್ಯಾಣ ಇಲಾಖೆ,ಪರಿಶಿಷ್ಟವರ್ಗಗಳ ಕಲ್ಯಾಣ ಇಲಾಖೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ(ಕ್ರೈಸ್) ವ್ಯಾಪ್ತಿಯಲ್ಲಿ ನಡೆಯುತ್ತಿರುವ ಸರ್ಕಾರಿ ಹಾಸ್ಟೇಲ್, ಆಶ್ರಮ ಶಾಲೆ,ವಸತಿಶಾಲೆ/ಕಾಲೇಜುಗಳಲ್ಲಿ ಹಲವು ವರ್ಷಗಳಿಂದ ಸೇವೆಯಲ್ಲಿರುವ ಹೊರಗುತ್ತಿಗೆ ಕಾರ್ಮಿಕರ ಸೇವೆ ಖಾಯಂಗೊಳಿಸಬೇಕು,ಪರಿಷ್ಕೃತ ಕನಿಷ್ಠ ವೇತನ ಕೂಡಲೇ ಜಾರಿಗೊಳಿಸಬೇಕು ಹಾಗು ಎಲ್ಲಾ ಜಿಲ್ಲೆಗಳಲ್ಲಿ ವಿವಿದುದ್ದೇಶ ಕಾರ್ಮಿಕರ ಸಹಕಾರ ಸಂಘ ರಚಿಸಲು ಕೂಡಲೇ ಕ್ರಮಕೈಗೊಳ್ಳಬೇಕು ಎಂದು ಎ.ಐ.ಯು.ಟಿ.ಯು.ಸಿ ಗೆ ಸಂಯೋಜಿತವಾದ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘ(ರಿ) ಯಾದಗಿರಿ ಜಿಲ್ಲಾ ಸಮಿತಿ ಆಗ್ರಹಿಸಿದೆ.

ಕಾರ್ಮಿಕರ ಬದುಕು ಅತ್ಯಂತ ಸಂಕಷ್ಟದಿಂದ ಕೂಡಿದೆ. ಸರ್ಕಾರಿ ಇಲಾಖೆಗಳಲ್ಲೇದುಡಿಯುತ್ತಿದ್ದರೂ ಕನಿಷ್ಠ ವೇತನ, ಪಿ.ಎಫ್. ರಜೆ ಸೇರಿದಂತೆ ಇನ್ನೂ ಅನೇಕ ಕಾನೂನು ಬದ್ದ ಸೌಲಭ್ಯಗಳು ಪಡೆಯಬೇಕಾದರೆ ಹರಸಾಹಸ ಪಡಬೇಕಾಗಿದೆ. ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿದ್ದರೂ ಕಾರ್ಮಿಕರಿಗೆ ಕೆಲಸದ ಭದ್ರತೆಯಿಲ್ಲ. ದಿನನಿತ್ಯ ಅಭದ್ರತೆಯಲ್ಲೇ ಕೆಲಸ ಮಾಡಬೇಕಿದೆ. ಸಾವಿರಾರು ಕಾರ್ಮಿಕರು ಇದೇ ಕೆಲಸವನ್ನೇ ನಂಬಿ ಬದುಕುತಿದ್ದಾರೆ. ಇವರೆಲ್ಲರೂ ಖಾಯಂ ಸ್ವರೂಪದ ಕೆಲಸ ಮಾಡುತ್ತಿದ್ದರೂ, ಅತ್ಯಂತ ಅಪಾಯಕಾರಿ ವೃತ್ತಿಯಲ್ಲಿದ್ದರೂ ಸರ್ಕಾರ ಈವರೆಗೂ ಇವರನ್ನು ಖಾಯಂಗೊಳಿಸಿಲ್ಲ. ಕನಿಷ್ಠ ಪಕ್ಷ ಇವರನ್ನು ಒಳಗುತ್ತಿಗೆ ಆಧಾರದ ಮೇಲು ತೆಗೆದುಕೊಂಡಿಲ್ಲ. ಬದಲಿಗೆ ಗುತ್ತಿಗೆದಾರರ ಮೂಲಕ ನೂತನ ಜೀತ ಪದ್ದತಿಗೆ ನೂಕಿದಂತಾಗಿದೆ. ಖಾಯಂ ನೇಮಕಾತಿ ಕುರಿತು ಕಾರ್ಮಿಕ ನ್ಯಾಯಾಲಯ, ಉಚ್ಛ ನ್ಯಾಯಾಲಯಗಳ ಆದೇಶಗಳನ್ನು ಉಲ್ಲಂಘಿಸುತ್ತಾ, ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ, ಅನ್ಯಾಯವೆಸಗುವ ಗುತ್ತಿಗೆದಾರರಿಂದ ಮುಕ್ತಿಗೊಳಿಸಬೇಕು ಎಂಬ ಕಾರ್ಮಿಕರ ನಿರಂತರ ಹೋರಾಟ ಮತ್ತು ಬೇಡಿಗೆ ಸ್ಪಂದಿಸಿ, ರಾಜ್ಯ ಸರ್ಕಾರ ಎಲ್ಲಾ ಜಿಲ್ಲೆಗಳಲ್ಲಿ ವಿವಿದುದ್ದೇಶ ಸಹಕಾರ ಸಂಘ ರಚಿಸುವ ನಿರ್ಧಾರ ಮಾಡಿರುವುದು ಶ್ಲಾಘನೀಯ. ಆದರೆ ಸಹಕಾರ ಸಂಘ ರಚಿಸುವ ಪ್ರಕ್ರಿಯೆ ನೆನೆಗುದಿಗೆ ಬಿದ್ದಿದೆ. ಕೆಲ ಜಿಲ್ಲೆಗಳಲ್ಲಿ ಜನವರಿ 2025 ರಿಂದಲೇ ಸಹಕಾರ ಸಂಘ ರಚಿಸುವ ಪ್ರಕ್ರಿಯೆ ಪ್ರಾರಂಭವಾಗಿದ್ದು ಸಾವಿರಾರು ಸಂಖ್ಯೆಯಲ್ಲಿ ಕಾರ್ಮಿಕರು ರೂ. 1000/– ಪಾವತಿಸಿ, ಸದಸ್ಯರು ಕೂಡಾ ಆಗಿದ್ದಾರೆ. ಆದರೆ ಸಹಕಾರ ಸಂಘ ಇಲ್ಲಿಯವರೆಗೂ ಸಂಪೂರ್ಣವಾಗಿ ರಚನೆಯಾಗಿ,ತನ್ನ ಕೆಲಸ ಕಾರ್ಯಗಳನ್ನು ಪ್ರಾರಂಭಸಿಲ್ಲ.

ಇದಲ್ಲದೇ ಕಾರ್ಮಿಕ ಇಲಾಖೆಯು ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ರೂ. 35,000/ ವರೆಗೂ ಪರಿಸ್ಕರಿಸಿ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರಕ್ಕೆ ಕಳಿಸಿತ್ತು. ಲಕ್ಷಾಂತರ ಸಂಖ್ಯೆಯ ಕಾರ್ಮಿಕರು ಅತ್ಯಂತ ಸಂತೋಷಗೊಂಡಿದ್ದರು.




ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಕಾರ್ಮಿಕರು ತಮಗೆ ಕೊಂಚವಾದರೂ ನೆಮ್ಮದಿ ದೊರೆಯಬಹುದೆಂಬ ನಿರೀಕ್ಷೆಯಲ್ಲಿದ್ದರು. ಈಗಾಗಲೇ ಕಾರ್ಮಿಕ ಸಂಘಗಳು, ಮಾಲೀಕರು ಹಾಗೂ ಸರ್ಕಾರವನ್ನೊಳಗೊಂಡ ತ್ರಿಪಕ್ಷೀಯ ಸಭೆ ಮೂರು ಬಾರಿ ಆಗಿವೆ. ಆದರೆ ಕಾರ್ಮಿಕರ ಹಿತ ದೃಷ್ಟಿಯಿಂದ ಈ ಸಭೆಗಯಿನ್ನಿದುವರೆಗೂ ಫಲಪ್ರದವಾಗಿಲ್ಲ. ಈ ವಿಷಯದಲ್ಲೂ ಕೂಡಾ ರಾಜ್ಯ ಸರ್ಕಾರ ಕಾರ್ಮಿಕರ ಪರ ಸ್ಪಷ್ಟ ಹಾಗೂ ದೃಢ ನಿಲುವು ತೆಗೆದುಕೊಳ್ಳಬೇಕು ಮತ್ತು ಅಧಿಸೂಚನೆಯು ಸರ್ಕಾರಿ ಆದೇಶವಾಗಬೇಕಿದೆ. ಆಗ ಮಾತ್ರವೇ ಕಾರ್ಮಿಕರ ಶ್ರಮವನ್ನು ದೋಚಿ ಕೋಟ್ಯಾಂತರ ರೂಪಾಯಿ ಲಾಭಗಳಿಸುವ ಮಾಲೀಕರ ಶೋಷಣೆಯಿಂದ ಕಾರ್ಮಿಕರಿಗೆ ಮುಕ್ತಿ ದೊರಕುವುದು.

ಪ್ರತಿ ತಿಂಗಳು ಪ್ರತಿಯೊರ್ವ ಗುತ್ತಿಗೆ ಕಾರ್ಮಿಕ ಉತ್ತಮ ಆರೋಗ್ಯ ಸೌಲಭ್ಯಗಳು ದೊರೆಯಬೇಕು ಎಂಬ ಹಂಬಲದಿಂದ ಇ.ಎಸ್.ಐ ಶುಲ್ಕವನ್ನು ಭರಿಸುತ್ತಾನೆ. ಆದರೆ ವಿಪರ್ಯಾಸವೆಂದರೆ ಇ.ಎಸ್.ಐ ಸೌಲಭ್ಯವು ಅವಶ್ಯಕವಿರುವ ಕಾರ್ಮಿಕನಿಗೆ ಹಾಗೂ ಆತನ ಕುಟುಂಬಕ್ಕೆ ತಲುಪುತ್ತಿಲ್ಲ. ಬೆರಳೆಣಿಕೆಯ ಜಿಲ್ಲೆಗಳು ಹೊರತುಪಡಿಸಿದರೆ, ತಜ್ಞ ವೈದ್ಯರು ಹಾಗೂ ಸಿಬ್ಬಂದಿಯನ್ನು ಒಳಗೊಂಡ ಸುಸಜ್ಜಿತ ಆಸ್ಪತ್ರೆಗಳೇ ಇಲ್ಲ. ಬಹು ಸಂಖ್ಯೆಯ ಜಿಲ್ಲೆಗಳಲ್ಲಿ ಡಿಸ್ಪೆನ್ಸರಿಗಳು ಮಾತ್ರ ಇದ್ದು ಹೆಚ್ಚಿನ ಮಟ್ಟದ ಚಿಕಿತ್ಸೆಗೆ ಬೆಂಗಳೂರು, ಹುಬ್ಬಳಿ, ಕಲಬುರ್ಗಿ ಅಂತಹ ನಗರಗಳಲ್ಲಿರುವ ಇ.ಎಸ್.ಐ ಆಸ್ಪತ್ರೆಗೆ ಹೋಗಬೇಕು. ಇಎಸ್.ಐ ಸೌಲಭ್ಯಯುಳ್ಳ ಖಾಸಗಿ ಆಸ್ಪತ್ರೆಗಳು ಸಹ ವಿರಳವಾಗಿವೆ.

ಆದ್ದರಿಂದ ಗುತ್ತಿಗೆ ಕಾರ್ಮಿಕರ ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬೇಕು, ಹೊರ ಗುತ್ತಿಗೆ ಕಾರ್ಮಿಕರ ಸಹಕಾರ ಸಂಘವನ್ನು ರಚಿಸಬೇಕು ಹಾಗೂ ಪರಿಷ್ಕೃತ ಕನಿಷ್ಠ ವೇತನವನ್ನು ಕೂಡಲೇ ಜಾರಿಗೆ ತರಬೇಕು ಎಂದು 05 ಮಾರ್ಚ 2026 ಹಾಸ್ಟೆಲ್ ಕಾರ್ಮಿಕರಿಂದ ರಾಜ್ಯವ್ಯಾಪಿ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ಮೂಲಕ ಎ.ಐ.ಯು.ಟಿ.ಯು.ಸಿ ಗೆ ಸಂಯೋಜಿತವಾದ ಕರ್ನಾಟಕ ರಾಜ್ಯ ಸಂಯುಕ್ತ ವಸತಿನಿಲಯ ಕಾರ್ಮಿಕರ ಸಂಘ(ರಿ) ಯಾದಗಿರಿ ಜಿಲ್ಲಾ ಸಮಿತಿ ಒತ್ತಾಯಿಸಿದೆ.

ಬೇಡಿಕೆಗಳು:

1) ಪ್ರಸಕ್ತ ಬಜೆಟ್‌ನಲ್ಲಿ ಕನಿಷ್ಠ ವೇತನ ಹೆಚ್ಚಳ ಕುರಿತ ರಾಜ್ಯ ಸರ್ಕಾರದ ಅಧಿಸೂಚನೆ ಕೂಡಲೆ ಜಾರಿಯಾಗಬೇಕು. ಸರ್ಕಾರಿ ಆದೇಶವಾಗಿ ಮಾರ್ಪಾಡಬೇಕು. ಮತ್ತು ಬಜೆಟನಲ್ಲಿ ವೇತನದ ಅನುದಾನವನ್ನು ಮೀಸಲಿಡಬೇಕು.

2) ಹೊರಗುತ್ತಿಗೆ ಪದ್ಧತಿಯನ್ನು ರದ್ಧುಗೊಳಿಸಿ, ಕಾರ್ಮಿಕರ ಸೇವೆಯನ್ನು ಖಾಯಂ ಮಾಡಿ. ಅಲ್ಲಿವರೆಗೂ ಇಲಾಖೆಗಳಿಂದಲೇ ನೇರವಾಗಿ ವೇತನ ಪಾವತಿಸಿ ಮತ್ತು ಸೇವಾಭಧ್ರತೆ ಒದಗಿಸಬೇಕು.

3) ಎಲ್ಲಾ ಜಿಲ್ಲೆಗಳಲ್ಲಿ ವಿವಿದುದ್ದೇಶ ಕಾರ್ಮಿಕರ ಸಹಕಾರ ಸಂಘ ರಚಿಸಲು ಕೂಡಲೇ ಕ್ರಮಕೈಗೊಳ್ಳಬೇಕು.

4) ಜಿಲ್ಲಾ ಕೇಂದ್ರಗಳಲ್ಲಿ ಸುಸಜ್ಜಿತ ಇಎಸ್‌ಐ ಆಸ್ಪತ್ರೆ ಪ್ರಾರಂಭಿಸಬೇಕು. ಕಾರ್ಮಿಕರಿಗೆ ಹಾಗೂ ಅವರ ಕುಟುಂಬಗಳಿಗೆ ಇಎಸ್‌ಐ ಸೌಲಭ್ಯ ದೊರೆಯುವಂತೆ ಸಮರ್ಪಕ ಕ್ರಮಕೈಗೊಳ್ಳಬೇಕು. ಪ್ರಕ್ರಿಯೆಯನ್ನು ಸರಳೀಕೃತಗೊಳಿಸಬೇಕು. ಇಎಸ್‌ಐ ಸೌಲಭ್ಯದ ಮಿತಿಯನ್ನು ರೂ. 36,000\– ಕ್ಕೆ ಹೆಚ್ಚಿಸಬೇಕು.

5) ಎಲ್ಲಾ ಗುತ್ತಿಗೆ ಕಾರ್ಮಿಕರಿಗೆ ಕನಿಷ್ಠ ವೇತನ ರೂ. 36,000\– ನಿಗದಿಪಡಿಸಬೇಕು.

6) 2017ರ ನಂತರ ಆರಂಭಗೊಂಡ ಎಲ್ಲಾ ವಸತಿ ಶಾಲೆ/ಕಾಲೇಜುಗಳಿಗೆ 11 ಜನ ಅಡಿಗೆ ಸಿಬ್ಬಂಧಿಯವರನ್ನು ನೇಮಕ ಮಾಡಬೇಕು. ನಿಯೋಗದಲ್ಲಿ ಎ.ಐ.ಯು.ಟಿ.ಯು.ಸಿ ಜಿಲ್ಲಾ ಅಧ್ಯಕ್ಷೆ ಡಿ.ಉಮಾದೇವಿ, ಸಂಘದ ಜಿಲ್ಲಾ ಅಧ್ಯಕ್ಷರಾದ ಶರಣಪ್ಪ ಜಿ ತೆಳಿಗೇರಿಕರ್, ಜಿಲ್ಲಾ ಉಪಾಧ್ಯಕ್ಷ ತಾಜುದ್ದೀನ್ ಚೌಕಿ, ಜಿಲ್ಲಾ ಸಹ ಕಾರ್ಯದರ್ಶಿ ಶ್ರೀಕಾಂತ್ ಚಿಕ್ಕಮೇಟಿ, ಮೋನಮ್ಮ, ಯಲ್ಲಮ್ಮ ಜಗದೇವಿ, ಹನುಮಂತ ಸೇರಿದಂತೆ ಇತರರು ಹಾಜರಿದ್ದರು

# ವಡಗೇರಾ ಆಸ್ಪತ್ರೆಗೆ ಹೆಚ್ಚಿನ ವೈದ್ಯರ ನೇಮಕ ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ವಡಗೇರಾ ಪಟ್ಟಣದಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿವಿಧ ತಜ್ಞ ವೈದ್ಯರ ನೇಮಕ ಮತ್ತು ಇಸಿಜಿ, ಎಕ್ಸ್–ರೇ ಮಷೀನ್ ಅಳವಡಿಕೆ ಆಸ್ಪತ್ರೆಯಲ್ಲಿ ಇನ್ನಿತರ ಮೂಲಭೂತ ಸೌಕರ್ಯ ಒದಗಿಸುವಂತೆ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ರೆಡ್ಡಿ ಚೆನ್ನೂರು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು ನಮ್ಮ ತಾಲೂಕಿಗೆ ಸುಮಾರು 60 ಕ್ಕೂ ಹೆಚ್ಚು ಹಳ್ಳಿಗಳು ಒಳಪಡುತ್ತವೆ ಸುತ್ತಮುತ್ತಲ ಗ್ರಾಮಸ್ಥರು ಇದೆ ಆಸ್ಪತ್ರೆಯ ಮೇಲೆ ಅವಲಂಬಿತರಾಗಿದ್ದಾರೆ ಆದರೆ ಇಲ್ಲಿ ನುರಿತ ತಜ್ಞ ವೈದ್ಯರು ಮತ್ತು ಮಹಿಳಾ ಸರ್ಜರಿ ವೈದ್ಯರ ಕೊರತೆ ಹಾಗೂ ಇನ್ನಿತರ ಮೂಲಭೂತ ಸೌಕರ್ಯಗಳಿಲ್ಲದೆ ಸಾರ್ವಜನಿಕರು ತೀವ್ರ ತೊಂದರೆ ಅನುಭವಿಸುವಂತಾಗಿದೆ ತಾಲೂಕು ಕೇಂದ್ರವಾಗಿ ಸುಮಾರು ವರ್ಷಗಳ ಕಳೆದರೂ ಕೂಡಾ ಇಲ್ಲಿ ಎಕ್ಸರೇ ಮಷೀನ್ ಇಲ್ಲ ನುರಿತ ಮಹಿಳಾ ವೈದ್ಯರು ಹಾಗೂ ಶಸ್ತ್ರಚಿಕಿತ್ಸಾ ಮತ್ತು ಹೃದಯ ರೋಗ ತಜ್ಞ, ಎಲಬು ಮತ್ತು ಕೀಲು ತಜ್ಞರು, ಹೃದಯ ರೋಗ ತಜ್ಞ,ವೈದ್ಯರಿ ಕೊರತೆಯು ಇದೆ ಇತ್ತೀಚಿಗೆ ಈ ಭಾಗದಲ್ಲಿ ಹೃದಯಘಾತ ಪ್ರಕರಣಗಳು ಹೆಚ್ಚಾಗುತ್ತಿವೆ ಈ ಮೊದಲು ಮಕ್ಕಳ ಸಂತಾನ ಹರಣ ಶಸ್ತ್ರ ಚಿಕಿತ್ಸೆ ನಡೆಯುತ್ತಿತ್ತು ಆದರೆ ಇತ್ತೀಚಿಗೆ ಅದನ್ನು ಕೂಡ ಬಂದು ಮಾಡಲಾಗಿದೆ ಇದರಿಂದ ಈ ಭಾಗದ ಮಹಿಳೆಯರಿಗೆ ತುಂಬಾ ತೊಂದರೆಯಾಗುತ್ತಿದೆ ಶಸ್ತ್ರಚಿಕಿತ್ಸೆಗಾಗಿ ಶಹಾಪುರ ಮತ್ತು ದೂರದ ಜೇವರ್ಗಿ ಪಟ್ಟಣಕ್ಕೆ ತೆರಳಬೇಕು ಸಂಬಂಧಿಸಿದ ಅಧಿಕಾರಿಗಳು ಮತ್ತು ಶಾಸಕರು ಕಾಳಜಿ ವಹಿಸಿ ಈ ಆಸ್ಪತ್ರೆಗೆ ಹೆಚ್ಚಿನ ನುರಿತ ವೈದ್ಯರ ನೇಮಕ ಮಾಡುವುದರ ಜೊತೆಗೆ ಇಸಿಜಿ, ಎಕ್ಸರೇ ಮಷೀನ್ ಅಳವಡಿಸಿ ಆಸ್ಪತ್ರೆಯಲ್ಲಿ ಸೂಕ್ತ ಮೂಲಭೂತ ಸೌಕರ್ಯ ಒದಗಿಸಬೇಕು ಒಂದು ವೇಳೆ ನಿರ್ಲಕ್ಷ ಮಾಡಿದ್ದಲ್ಲಿ ಪಟ್ಟಣದ ಆಸ್ಪತ್ರೆ ಎದುರುಗಡೆ ರಾಜ್ಯ ರೈತ ಸಂಘ ವತಿಯಿಂದ ಪ್ರತಿಭಟನೆ ಮಾಡುವುದಾಗಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ರೆಡ್ಡಿ ಚೆನ್ನೂರು ಎಚ್ಚರಿಸಿದ್ದಾರೆ.

# ಜಿಲ್ಲಾ ಆಸ್ಪತ್ರೆಯಲ್ಲಿ ಹಣ್ಣು ವಿತರಣೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಜಯ ಕರ್ನಾಟಕ ಸಂಘಟನೆ ರಾಜ್ಯಾಧ್ಯಕ್ಷ ಡಾ. ಬಿ.ಎನ್. ಜಗದೀಶ ಅವರ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಘಟಕದ ವತಿಯಿಂದ ನಗರದ ತಾಯಿ ಮಕ್ಕಳ (ಹಳೆ ಜಿಲ್ಲಾಸ್ಪತ್ರೆ) ಆಸ್ಪತ್ರೆಯಲ್ಲಿ ಹಣ್ಣು ಹಂಪಲ ವಿತರಣೆ ಮಾಡಲಾಯಿತು.

ಹಣ್ಣು ಹಂಪಲ ವಿತರಣೆ ಮಾಡಿ ಮಾತನಾಡಿದ ಜಯ ಕರ್ನಾಟಕ ಸಂಘಟನೆ ಜಿಲ್ಲಾದ್ಯಕ್ಷ ಬಿ.ಎನ್. ವಿಶ್ವನಾಥ ನಾಯಕ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಸಂಘಟನೆ ಕನ್ನಡ ನಾಡು ನುಡಿ ನೆಲ ಜಲ ರಕ್ಷಣೆಗಾಗಿ ಅವಿತರ ಹೋರಾಟಗಳು ನಡೆಯುತ್ತಿವೆ.

ಹುಟ್ಟುಹೋರಾಟಗಾರರಾಗಿರುವ ಡಾ. ಜಗದೀಶ ಅವರು, ರಾಜ್ಯಾದ್ಯಂತ ಪ್ರವಾಸ ಮಾಡಿ ಕಳೆದ 30 ವರ್ಷಗಳಿಂದ ಸಂಘಟನೆ ಕಟ್ಟುವುದರ ಜೊತೆಗೆ ಕನ್ನಡ ಕಟ್ಟುವ ಕೆಲಸ ಮಾಡುತ್ತಾ ಬರುತ್ತಿದ್ದಾರೆ.

ಇಂತಹ ಧೀಮಂತ ನಾಯಕರಿಗೆ ಈ ಸಂದರ್ಭದಲ್ಲಿ ಇನ್ನು ಹೆಚ್ಚಿನ ಮಟ್ಟದಲ್ಲಿ ಕನ್ನಡಮ್ಮನ ಸೇವೆ ಮಾಡಲು ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ವಿಜಯಕುಮಾರ ಮೊಗದಂಪುರ, ಮಕ್ಕಳ ತಜ್ಞ ಡಾ॥ ನಾಗರಾಜ, ಶಿವರಾಜ ಗುತ್ತೇದಾರ, ನಾಗರಾಜ ರಾಮಸಮುದ್ರ, ಮಾರುತಿ ಮುದ್ನಾಳ, ಮಲ್ಲಿಕಾರ್ಜುನ ಹತ್ತಿಕುಣಿ, ಕೆಬಿ ಅರುಣಕುಮಾರ, ರಂಗನಾಥ ನಾಯಕ, ಮಲ್ಲಿಕಾರ್ಜುನ ಕಡ್ಡಿ, ಶೇಖರ ಹತ್ತಿಕುಣಿ, ಸಾಬರಡ್ಡಿ ಶೆಟ್ಟಿಗೇರಾ, ನಾಗಪ್ಪ ಶೇಟ್ಟಿಗೇರಾ, ವಿಶಾಲ ಕೌಳೂರ ಸೇರಿದಂತೆ ಅನೇಕ ಕಾರ್ಯಕರ್ತರು ಇದ್ದರು.

# ಶ್ರೀಶೈಲಕ್ಕೆ ತೆರಳುವ ಪಾದಯಾತ್ರಿಗಳಿಗೆ ಉಚಿತ ಹಣ್ಣು ಪಾನೀಯ ಸೇವೆ




• ಮಲ್ಲಮ್ಮ ನುಡಿ, ಹುಣಸಗಿ

ಪಟ್ಟಣದ ನಿವೃತ್ತ ಶಿಕ್ಷಕರಾದ ಮುರಿಗೆಂದ್ರಸ್ವಾಮಿ, ಡಾ. ಎಂ.ಬಿ. ಸಜ್ಜನ ಹಾಗೂ ಶರಣು ಅಕ್ಕಿ ಅವರ ವತಿಯಿಂದ ಶ್ರೀಶೈಲ ಮಲ್ಲಿಕಾರ್ಜುನ ದರ್ಶನಕ್ಕೆ ತೆರಳುವ ಸಹಸ್ರಾರು ಪಾದಯಾತ್ರಿಗಳಿಗೆ ಉಚಿತವಾಗಿ ಹಣ್ಣು, ಕಬ್ಬಿನ ರಸ, ಬಿಸ್ಕೆಟ್ ಸೇರಿದಂತೆ ತಂಪಾದ ಪಾನೀಯಗಳನ್ನು ವಿತರಿಸಲಾಯಿತು.

ಯುಗಾದಿ ಹಬ್ಬದ ಪ್ರಯುಕ್ತ ಐದು ದಿನಗಳ ಕಾಲ ಈ ಸೇವೆಯನ್ನು ಹಮ್ಮಿಕೊಳ್ಳಲಾಗಿದ್ದು, ವಿಜಯಪುರ ಜಿಲ್ಲಾ ಸೇರಿದಂತೆ ಮಹಾರಾಷ್ಟ್ರ ರಾಜ್ಯದ ವಿವಿಧ ಭಾಗಗಳಿಂದ ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿ ದರ್ಶನಕ್ಕಾಗಿ

ಪಾದಯಾತ್ರೆ ಕೈಗೊಂಡು ಬರುತ್ತಿರುವ ಭಕ್ತರಿಗೆ ಈ ಸೇವೆ ಬಹಳ ಅನುಕೂಲಕರವಾಗಿದೆ. ಪಾದಯಾತ್ರೆಯಲ್ಲಿ ಸಾಗುವ ಭಕ್ತರಿಗೆ ವಿಶ್ರಾಂತಿ ಹಾಗೂ ದಾಹ ನೀಗಿಸುವ ಉದ್ದೇಶದಿಂದ ಹಣ್ಣು ಮತ್ತು ಪಾನೀಯ ವಿತರಣೆ ಮಾಡಲಾಗುತ್ತಿದೆ.

ಈ ಸೇವೆ ಸಾರ್ವಜನಿಕರಿಂದ ಪ್ರಶಂಸೆಗೆ ಪಾತ್ರವಾಗಿದ್ದು, ಪಾದ ಯಾತ್ರಿಗಳು ಸೇವೆ ನೀಡಿದವರನ್ನು ಅಭಿನಂದಿಸಿದರು. ಈ ಸಂದರ್ಭದಲ್ಲಿ ಅನಿಲ ಬಳಿ, ರಾಜಶೇಖರ ದೇಸಾಯಿ, ಪ್ರಕಾಶ ಬಳಿ, ರಾಜು ಉಳ್ಳಾಗಡ್ಡಿ, ರವಿ ಬಂಟನೂರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಬಜೆಟ್‌ನಲ್ಲಿ ದಲಿತರ ಹಿತರಕ್ಷಣೆಗಾಗಿ ದಸಂಸ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ರಾಜ್ಯದ 2026–27ನೇ ಸಾಲಿನ ಆಯವ್ಯಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗೆ ಜನಸಂಖ್ಯೆಗನುಗುಣವಾಗಿ ನ್ಯಾಯಯುತ ಪಾಲು ನೀಡಬೇಕು ಎಂದು ಆಗ್ರಹಿಸಿ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಲಕ್ಷ್ಮೀನಾರಾಯಣ ನಾಗವಾರ ಸ್ಥಾಪಿತ) ವತಿಯಿಂದ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿಗಳಿಗೆ ಮನವಿಯನ್ನು ಅಪರ ಜಿಲ್ಲಾಧಿಕಾರಿಗಳ ಮೂಲಕ ಸಲ್ಲಿಸಿದರು.ಪ್ರತಿಭಟನೆಯನ್ನುದ್ದೇಶಿಸಿ ಮಾತನಾಡಿದ ಜಿಲ್ಲಾ ಸಂಚಾಲಕ ಗೋಪಾಲ ತಳವಾರ ವಜ್ಜಲ್, ಕಳೆದ ಹಲವು ವರ್ಷಗಳಿಂದ ಸಮುದಾಯದ ಅಭಿವೃದ್ಧಿಗೆ ಮೀಸಲಿಟ್ಟ ಹಣವನ್ನು ಬೇರೆ ಯೋಜನೆಗಳಿಗೆ ವರ್ಗಾಯಿಸಲಾಗುತ್ತಿದೆ. ಇದು ಸಂವಿಧಾನಬದ್ಧ ಹಕ್ಕಿನ ಉಲ್ಲಂಘನೆ.

ಶಿಕ್ಷಣ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ನಾವು ಒಕ್ಕೊರಲಿನಿಂದ ಧ್ವನಿ ಎತ್ತಬೇಕಿದೆ ಎಂದರು. ಕಲಬುರಗಿ ವಿಭಾಗೀಯ ಸಂಘಟನಾ ಸಂಚಾಲಕ ಹೊನ್ನಪ್ಪ ರಸ್ತಾಪುರ ಮಾತನಾಡಿ, ಬಜೆಟ್‌ನಲ್ಲಿ ಶೇ. 24.1 ಅನುದಾನವನ್ನು ಕಟ್ಟುನಿಟ್ಟಾಗಿ ಮೀಸಲಿಡಬೇಕು ಮತ್ತು ಅದನ್ನು ಇತರ ಉದ್ದೇಶಗಳಿಗೆ ಬಳಸಬಾರದು ಎಂದು ಒತ್ತಾಯಿಸಿದರು. 101 ಉಪಜಾತಿಗಳಿಗೆ ಅನ್ಯಾಯವಾಗದಂತೆ ರೋಸ್ಟರ್ ಬಿಂದು ಗೊಂದಲ ಸರಿಪಡಿಸಿ ನೇಮಕಾತಿ ಮಾಡಬೇಕು.

ಹಾಸ್ಟೆಲ್ ಬಯಸುವ ಎಲ್ಲಾ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಬೇಕು ಹಾಗೂ ಸ್ಕಾಲರ್‌ಶಿಪ್ ಹೆಚ್ಚಿಸಬೇಕು. ವಸತಿ ಯೋಜನೆ ಸಹಾಯಧನ 5 ಲಕ್ಷ ರೂ.ಗೆ ಏರಿಸಬೇಕು ಮತ್ತು ಆದಾಯ ಮಿತಿಯನ್ನು 15 ಲಕ್ಷ ರೂ.ಗೆ ಹೆಚ್ಚಿಸಬೇಕು. ಕೆಂಭಾವಿ ಪೊಲೀಸ್ ಸಿಬ್ಬಂದಿಗೆ ವಸತಿ ಹಾಗೂ ಪಟ್ಟಣದಲ್ಲಿ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಮಂಜೂರಿ, ಕೆಂಭಾವಿ ಬುದ್ದ ವಿಹಾರದ ಮೂಲಭೂತ ಸೌಕರ್ಯ, ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ರದ್ದುಪಡಿಸಬೇಕು, ಸ್ಮಶಾನ ಭೂಮಿ ಮೀಸಲಿಡಬೇಕು ಮತ್ತು ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ಜಾರಿಗೊಳಿಸುವಂತೆ ಮನವಿಯಲ್ಲಿ ಪ್ರಸ್ತಾಪಿಸಲಾಗಿದೆ

ಈ ಸಂದರ್ಭದಲ್ಲಿ ಜಿಲ್ಲಾ ಸಂಘಟನಾ ಸಂಚಾಲಕರಾದ ಶಿವಶರಣ ಯಾಳಗಿ, ಶರಣಪ್ಪ ಅನವಾರ, ಸಿದ್ದಣ್ಣ ಬೇವಿನಹಳ್ಳಿ, ಹಣಮಂತ ಭದ್ರಾವತಿ, ಸಿದ್ದರಾಮ ಬಾರಿಗಿಡ, ಗುರುಪುತ್ರ ಮೂದನೂರ್, ಶರಣಪ್ಪ ಮದ್ರಕಿ, ಶಿವಪ್ಪ ಕಂಬಾರ, ಪರಶುರಾಮ್ ಮೂದನೂರ್, ಮರೆಪ್ಪ ಮಲ್ಲಾ, ಬಸವರಾಜ ವಜ್ಜಲ್, ಜಗದೀಶ್ ಶಾಖಾನವರು, ಮಂಜುನಾಥ ಮಲ್ಲಾ, ರಾಯಪ್ಪ ಯತ್ನಾಳ್, ಅಂಬರೀಶ್ ಬೊಮ್ಮನಹಳ್ಳಿ, ಹಣಮಂತ ಬೊಮ್ಮನಹಳ್ಳಿ, ಖಂಡಪ್ಪ ಯಾಳಗಿ, ಸಿದ್ದು ಕರೆಡಕಲ್ಲ, ಸಂಗಣ್ಣ ಮಲ್ಲಾ, ಶಿವಶರಣ ಸಂದಿಮನಿ ಮತ್ತು ಶಿವು ಸೇರಿದಂತೆ ಅನೇಕರಿದ್ದರು.



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ರಕ್ಷಣಾ ವೇದಿಕೆಯ ಯಾದಗಿರಿ ಜಿಲ್ಲಾಧ್ಯಕ್ಷರಾದ ಭೀಮು ನಾಯಕ ರವರ ಸುಪುತ್ರ ಪೃಥ್ವಿ ನಾಯಕ, ರೀತು ನಾಯಕ ತಮ್ಮ ಗೆಳೆಯರೊಂದಿಗೆ ನಗರದಲ್ಲಿ ಹೋಳಿ ಹಬ್ಬದ ನಿಮಿತ್ಯ ವಿವಿಧ ರಂಗು ರಂಗುವಿನ ಬಣ್ಣದೊಂದಿಗೆ ಸಂಭ್ರಮಿಸಿದರು.

# ಲೋಕಾಯುಕ್ತ ದಾಳಿ ಮಹತ್ವದ ದಾಖಲೆಗಳ ಜಪ್ತಿ

ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ



ಆದಾಯಕ್ಕಿಂತ ಅಸಮಾನ ಪ್ರಮಾಣದಲ್ಲಿ ಆಸ್ತಿ ಸಂಪಾದನೆ ಮಾಡಿರುವ ಗಂಭೀರ ಆರೋಪದ ಹಿನ್ನೆಲೆ ಯಾದಗಿರಿ ನಗರದ ಡೆಪ್ಯುಟಿ ಎಲೆಕ್ಟ್ರಿಕಲ್ ಪರಿವೀಕ್ಷಕರಾದ ವಿರೇಶ್ ಹಿರೇಮಠ ಅವರ ನಿವಾಸ ಹಾಗೂ ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ಬೆಳ್ಳಂಬೆಳಿಗ್ಗೆ ದಿಢೀರ್ ದಾಳಿ ನಡೆಸಿ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದ ಘಟನೆ ಜಿಲ್ಲೆಯಾದ್ಯಂತ ತೀವ್ರ ಚರ್ಚೆಗೆ ಗ್ರಾಸವಾಗಿದೆ.

ನಗರದ ಮಾತಾಮಾಣಿಕೇಶ್ವರಿ ನಗರದಲ್ಲಿರುವ ವಿರೇಶ್ ಹಿರೇಮಠ ಅವರ ನಿವಾಸಕ್ಕೆ ಲೋಕಾಯುಕ್ತ ಅಧಿಕಾರಿಗಳ ತಂಡ ಏಕಾಏಕಿ ಭೇಟಿ ನೀಡಿ ಮನೆಯಲ್ಲಿದ್ದ ಆಸ್ತಿ ಸಂಬಂಧಿತ ದಾಖಲೆಗಳು, ಬ್ಯಾಂಕ್ ಖಾತೆಗಳ ವಿವರಗಳು, ಆರ್ಥಿಕ ವ್ಯವಹಾರಗಳ ದಾಖಲೆಗಳು ಸೇರಿದಂತೆ ಹಲವಾರು ಮಹತ್ವದ ದಾಖಲೆಗಳನ್ನು ವಶಕ್ಕೆ ಪಡೆದು ಪರಿಶೀಲನೆ ನಡೆಸಿದರು. ದಾಳಿ ಸಂದರ್ಭದಲ್ಲಿ ಅಧಿಕಾರಿ ವಿರೇಶ್ ಹಿರೇಮಠ ಮನೆಯಲ್ಲಿ ಇದ್ದರು ಎಂದು ತಿಳಿದುಬಂದಿದ್ದು, ಅಧಿಕಾರಿಗಳು ಸ್ಥಳದಲ್ಲೇ ಪ್ರಾಥಮಿಕ ವಿಚಾರಣೆ ನಡೆಸಿದರು ಎನ್ನಲಾಗಿದ.

ಸುಮಾರು ಒಂದು ದಶಕಕ್ಕೂ ಹೆಚ್ಚು ಅವಧಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿರುವ ವಿರೇಶ್ ಹಿರೇಮಠ ಅವರು ತಮ್ಮ ಅಧಿಕೃತ ವೇತನ ಹಾಗೂ ಆದಾಯಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಸಮರ್ಪಕವಾಗಿ ಆಸ್ತಿ ಸಂಪಾದಿಸಿದ್ದಾರೆ ಎಂಬ ಗಂಭೀರ ದೂರಿನ ಆಧಾರದ ಮೇಲೆ ಲೋಕಾಯುಕ್ತ ಇಲಾಖೆ ಈ ಕಾರ್ಯಾಚರಣೆಯನ್ನು ಕೈಗೊಂಡಿದೆ ಎಂದು ಮೂಲಗಳು ತಿಳಿಸಿವೆ. ಲೋಕಾಯುಕ್ತ ಎಸ್ಪಿ ಸಿದ್ದರಾಜ ಸಿ.ಅವರ ಸಮಗ್ರ ಮಾರ್ಗದರ್ಶನದಲ್ಲಿ ಡಿವೈಎಸ್ಪಿ ಜೆ.ಎಚ್. ಇನಾಂದಾರ್ ಹಾಗೂ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದರಾಯ ಬಳರಗಿ ನೇತೃತ್ವದ ಅಧಿಕಾರಿಗಳ ತಂಡ ದಾಳಿ ನಡೆಸಿ ಮನೆ ಮತ್ತು ಕಚೇರಿಯಲ್ಲಿ ದಾಖಲೆಗಳ ಸವಿಸ್ತಾರ ಪರಿಶೀಲನೆ ಕೈಗೊಂಡಿತು. ದಾಳಿ ವೇಳೆ ಹಲವು ಮಹತ್ವದ ದಾಖಲೆಗಳು ಪತ್ತೆಯಾಗಿರುವುದಾಗಿ ತಿಳಿದುಬಂದಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ ವಿರೇಶ್ ಹಿರೇಮಠ ಅವರು ಬೆಂಗಳೂರು ನಗರದಲ್ಲಿ ಬೆಲೆಬಾಳುವ ನಿವಾಸ, ಸುಮಾರು 14 ಎಕರೆ ಕೃಷಿ ಜಮೀನು , ಜೊತೆಗೆ ಕಲಬುರಗಿ ಮತ್ತು ಯಾದಗಿರಿ ಸೇರಿದಂತೆ ನಾಲ್ಕು ವಿವಿಧ ಸ್ಥಳಗಳಲ್ಲಿ ನಿವೇಶನಗಳು ಹೊಂದಿರುವುದು ಬೆಳಕಿಗೆ ಬಂದಿದೆ ಎಂದು ತಿಳಿದುಬಂದಿದೆ. ಈ ಆಸ್ತಿಗಳ ಖರೀದಿ ಹಾಗೂ ಮೂಲದ ಕುರಿತು ಲೋಕಾಯುಕ್ತ ಅಧಿಕಾರಿಗಳು ದಾಖಲೆಗಳ ಸಮಗ್ರ ಪರಿಶೀಲನೆ ನಡೆಸುತ್ತಿದ್ದಾರೆ.

ಲೋಕಾಯುಕ್ತರ ಈ ಅಚಾನಕ್ ದಾಳಿಯಿಂದ ಜಿಲ್ಲೆಯ ಆಡಳಿತ ವಲಯದಲ್ಲಿ ಸಾಕಷ್ಟು ಸಂಚಲನ ಉಂಟಾಗಿದ್ದು, ಸರ್ಕಾರಿ ಅಧಿಕಾರಿಗಳ ಭ್ರಷ್ಟಾಚಾರ ಕುರಿತು ಸಾರ್ವಜನಿಕ ವಲಯದಲ್ಲಿ ತೀವ್ರ ಚರ್ಚೆಗಳು ಜೋರಾಗಿವೆ. ತನಿಖೆಯ ಮುಂದಿನ ಹಂತಗಳಲ್ಲಿ ಇನ್ನಷ್ಟು ಆಸ್ತಿ ವಿವರಗಳು ಮತ್ತು ದಾಖಲೆಗಳು ಬಹಿರಂಗವಾಗುವ ಸಾಧ್ಯತೆ ಇದೆ ಎಂದು ತಿಳಿದುಬಂದಿದೆ.

# ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ

ಕರ್ನಾಟಕ ಸರ್ಕಾರದ 2026–27 ನೇ ಸಾಲಿನ ಆಯವ್ಯಯವನ್ನು ಹಣಕಾಸು ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6 ಶುಕ್ರವಾರದಂದು ಮಂಡಿಸಲಿದ್ದಾರೆ. 17ನೇ ಬಾರಿ ಬಜೆಟ್ ಮಂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಾಖಲೆ ಸೃಷ್ಟಿಸಿದ್ದು, ಈ ಬಜೆಟ್ ಮಂಡನೆಯ ನೇರಪ್ರಸಾರವನ್ನು ರಾಜ್ಯದ ಆಯ್ದ ಬಸ್ ನಿಲ್ದಾಣದ ಟಿವಿಗಳಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯದ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಪ್ರಸಾರ ಮಾಡಲು ಉದ್ದೇಶಿಸಿದೆ. ಕರ್ನಾಟಕ ರಾಜ್ಯದ ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಆಗಿ ಕಾರ್ಯನಿರ್ವಹಿಸುತ್ತಿರುವ ಮುಖ್ಯಮಂತ್ರಿಗಳಾದ

ಸಿದ್ದರಾಮಯ್ಯ ಅವರು ದಿನಾಂಕ 06 ಮಾರ್ಚ್ 2026ರಂದು ವಿಧಾನಸೌಧದಲ್ಲಿ ರಾಜ್ಯದ ಬಜೆಟ್ ಮಂಡಿಸಲಿದ್ದಾರೆ. ಈ ಮಹತ್ವದ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸುವ ಉದ್ದೇಶದಿಂದ ವೃತ್ತಿ ಸೊಲ್ಯೂಷನ್ಸ್ ಲಿಮಿಟೆಡ್ ಸಂಸ್ಥೆಯು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಯೋಗದೊಂದಿಗೆ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಇರುವ ತನ್ನ ಡಿಜಿಟಲ್ ಡಿಸ್ಪ್ಲೇ (ಐಇಆ) ಪರದೆಗಳ ಮೂಲಕ ನೇರ ಪ್ರಸಾರ ಮಾಡಲು ಮುಂದಾಗಿದೆ. ವಿಧಾನಸೌಧದಲ್ಲಿ

ನಡೆಯುವ ಬಜೆಟ್ ಮಂಡನೆ ಹಾಗೂ ಬಳಿಕ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯ ನೇರ ಪ್ರಸಾರವನ್ನು ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ಜನರು ವೀಕ್ಷಿಸುವ ಅವಕಾಶ ಕಲ್ಪಿಸಲಾಗುತ್ತದೆ.

ಈ ಮೂಲಕ ರಾಜ್ಯದ ಜನತೆಗೆ ಸರ್ಕಾರದ ಬಜೆಟ್ ಕುರಿತು ನೇರವಾಗಿ ಮಾಹಿತಿ ಪಡೆಯುವ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ಪ್ರಕಟಣೆ ತಿಳಿಸಿದೆ.

# ನಾಯಿಗಳ ಹಾವಳಿ: ಕಣ್ಣು ಮುಚ್ಚಿ ಕುಳಿತ ಪುರಸಭೆ

• ಮಲ್ಲಮ್ಮ ನುಡಿ ವಾರ್ತೆ ಕಂಪ್ಲಿ



ಪುರಸಭೆ ಮುಂಭಾಗದಲ್ಲಿ ನಾಯಿಗಳ ಹಾವಳಿ ಪುರಸಭೆ ಮುಖ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ

ಪಟ್ಟಣದಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಬೀದಿ ನಾಯಿಗಳ ಹಾವಳಿಯನ್ನು

ತಡೆಗಟ್ಟಲು ಪುರಸಭೆಯವರು ಕ್ರಮ ಕೈಗೊಳ್ಳಬೇಕು ಪಟ್ಟಣದಲ್ಲಿ 23 ವಾರ್ಡುಗಳಿವೆ. ಪ್ರತಿಯೊಂದು ವಾರ್ಡಿನ ಬೀದಿ ಬೀದಿಯಲ್ಲೂ ಬೀದಿನಾಯಿಗಳ ಹಾವಳಿ ಹೆಚ್ಚಾಗುತ್ತಲೇ ಇದೆ.

ಹಿಂಡು ಹಿಂಡಾಗಿ ಸುತ್ತಾಡುವ ನಾಯಿಗಳು ದಾರಿಯಲ್ಲಿ ಸಂಚರಿಸುವ ವಾಹನ ಸವಾರರನ್ನು ಅಟ್ಟಿಸಿಕೊಂಡು ಹೋಗುವುದರ ಜೊತೆಗೆ ಶಾಲಾ ಮಕ್ಕಳ ಮೇಲೆ ದಾಳಿ ಮಾಡುತ್ತಿವೆ ಎಂದಿದ್ದಾರೆ.

ಪಟ್ಟಣದಲ್ಲಿ ನಾಯಿಕೊಡೆಗಳಂತೆ ತಲೆ ಎತ್ತಿರುವ ಮಾಂಸ ಮಾರಾಟದ ಅಂಗಡಿಗಳಿಂದಾಗಿ ನಾಯಿಗಳ ಸಂತತಿ ಹೆಚ್ಚಾಗುತ್ತಿದೆ. ಮಾಂಸದ ಅಂಗಡಿಗಳ ಬಳಿಯಲ್ಲಿ ಬಿಸಾಡುವ ತ್ಯಾಜ್ಯಗಳನ್ನು ತಿನ್ನಲು ಬೀಡುಬಿಟ್ಟಿರುವ ಅವು,

ರಸ್ತೆಗಳ ಎರಡೂ ಬದಿಯಲ್ಲಿ ಮಲಗುತ್ತವೆ. ಪಕ್ಕದಲ್ಲಿ ಹೋಗುವವರ ಮೇಲೆ ಪಕ್ಕನೆ ಎರಗುತ್ತವೆ ಎಂದಿದ್ದಾರೆ.

ಒಂದು ನಾಯಿ

ಹಿಂದಟ್ಟಿದರೆ ಅದರ ಹಿಂದೆ ಹತ್ತಾರು ನಾಯಿಗಳು ಏಕಕಾಲದಲ್ಲಿ ದಾಳಿ ಮಾಡುತ್ತವೆ.

ಪಟ್ಟಣದಲ್ಲಿ ಬೀದಿನಾಯಿಗಳ ಜೊತೆಯಲ್ಲೇ ಕೋತಿಗಳ ಹಾವಳಿಯೂ ಜಾಸ್ತಿಯಾಗಿದೆ. ಮನೆಗಳಲ್ಲಿ ನೆಮ್ಮದಿಯಾಗಿ ಮಲಗುವಂತಿಲ್ಲ. ರಾತ್ರಿಯಿಡಿ ಹೂಳಿಡುವ

ನಾಯಿಗಳಿಂದ ಸಮಸ್ಯೆ ಒಂದೆಡೆ–ಯಾದರೆ ಬೆಳಕಾಗುತ್ತಿದ್ದಂತೆ ಹಿಂಡು ಹಿಂಡಾಗಿ ಬರುವ ಕೋತಿಗಳ ಉಪಟಳ ತಾಳಿಕೊಳ್ಳಲು ಸಾಧ್ಯವಾಗುತ್ತಿಲ್ಲ' ಎಂದಿದ್ದಾರೆ.

# ನಿವೇಶನ ನೀಡದೆ ಅಧಿಕಾರಿಗಳಿಂದ ಅನ್ಯಾಯ



• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಮಾಜಿ ಶಾಸಕರಾದ ವಿ. ಪಾಪಣ್ಣರವರು ಪಟ್ಟಣದಲ್ಲಿ ನಿವೇಶನ ರಹಿತ ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ ಆಶ್ರಯ ಸಮಿತಿ ವತಿಯಿಂದ ನಿವೇಶಗಳನ್ನು ರತ್ನಪುರಿ ರಸ್ತೆಯಲ್ಲಿರುವ ವಿಜಯನಗರ ಬಡಾವಣೆಯಲ್ಲಿ ಸರ್ವೇ ನಂಬರ್ 207,208, 209, 166/2 ಮತ್ತು 167 ಜಮೀನಿಗೆ ಸಂಬಂಧಿಸಿದಂತೆ ಆಶ್ರಯ ಯೋಜನೆಯಲ್ಲಿ 870 ಫಲಾನುಭವಿಗಳಿಗೆ 2004 2005ನೇ ಸಾಲಿನಲ್ಲಿ ಅಕ್ಕಪತ್ರಗಳನ್ನು ವಿತರಣೆ ಮಾಡದೆ . 22 ವರ್ಷಗಳು ಕಳೆದರೂ ಚುನಾಯಿತಿ ವ ಪ್ರತಿನಿಧಿಗಳು ಹಾಗೂ ನಗರಸಭೆ ಅಧಿಕಾರಿಗಳು ಕಣ್ಣಿಗೆ ಕಾಣದ ಕಾಣದಂತೆ ಇರುವ ಸಿಬ್ಬಂದಿ ವರ್ಗದವರು ಫಲಾನುಭವಿಗಳಿಗೆ ನಿವೇಶನಗಳನ್ನು ನೀಡದೆ ಅನ್ಯಾಯ ಮಾಡಿರುತ್ತಾರೆ ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷರು ಸ್ವಾಮಿಗಳ ತಿಳಿಸಿದ್ದಾರೆ

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗಿದೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ದಿನಾಂಕ ಶಾಸಕರಾದ ಎಚ್ ಪಿ ಮಂಜುನಾಥ್ ರವರು ನಿವೇಶನಕ್ಕೆ ಸಂಬಂಧಿಸಿದಂತೆ ಒಂದನೇ ಸಭೆ ನಡೆಸಿರುತ್ತಾರೆ ದಿನಾಂಕ 25.1.2011 ರಂದು ಎರಡನೇ ಸಭೆ ನಡೆಸಿರುತ್ತಾರೆ ದಿನಾಂಕ 11 12 2011 ರಂದು ಮೂರನೇ ಸಭೆ ನಡೆಸಿರುತ್ತಾರೆ ದಿನಾಂಕ 8.8.2012ರಂದು ಸಭೆ ನಡೆಸಿರುತ್ತಾರೆ ದಿನಾಂಕ 06.11.2014 ರಂದು ಶಾಸಕರಾದ ಎಸ್ ಪಿ ಮಂಜುನಾಥ್ ಅವರು 5ನೇ ಸಭೆ ನಡೆಸಿರುತ್ತಾರೆ ದಿನಾಂಕ 5.12.2018 ರಂದು ಎಂಎ ಶಾಸಕರಾದ ಎಚ್ ವಿಶ್ವನಾಥ್ ಅವರು ಸಭೆ ನಡೆಸಿರುತ್ತಾರೆ ದಿನಾಂಕ 6.12.2024ರಂದು ಶಾಸಕರಾದ ಜಿ ಡಿ ಹರೀಶ್ ಗೌಡರು ಸಭೆ ನಡೆಸಿರುತ್ತಾರೆ ಶಾಸಕರು ಸಭೆ ನಡೆಸಿದರು 870 ಫಲಾನುಭವಗಳಿಗೆ ನಿವೇಶನವನ್ನು ನೀಡಿರುವುದಿಲ್ಲ ಹುಣಸೂರು ಪಟ್ಟಣದ ಆಶ್ರಯ ಸಮಿತಿಯ ನಿರ್ಣಯದಂತೆ 870 ಫಲಾನುಭವಿಗಳಿಗೆ ನಿವೇಶನ ನೀಡುವ ಅಥವಾ ವಿತರಣೆ ನಿರ್ಣಯವನ್ನಾಗಲಿ ಸ್ಪಷ್ಟವಾಗಿ ತೀರ್ಮಾನ ಕೈಗೊಳ್ಳದೆ ಅಡ್ಡಗೋಡೆಯ ಮೇಲೆ ದೀಪ ಇಟ್ಟಂತೆ ನಿರ್ಣಯ ಮಾಡಿರುತ್ತಾರೆ ಸದರಿ ಹಕ್ಕುಪತ್ರಗಳನ್ನು ನೀಡಿರುವ ಜಮೀನನ್ನು ಸರ್ಕಾರದ ಹಣದಿಂದಾಗಲಿ ಅಥವಾ ಶಾಸಕರುಗಳ ಹಣದಿಂದ ಖರೀದಿ ಮಾಡಿರುವುದಿಲ್ಲ ಹುಣಸೂರು ಪಟ್ಟಣದ ಸಾರ್ವಜನಿಕ ಕಂದಾಯ ತೆ-ರಿಗೆ ಹಣದಿಂದ ಹಣದಿಂದ 35 ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ ಹಿರಿಯ ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರು ಖರೀದಿ ಮಾಡಿರುವ ಜಮೀನ್ ಆಗಿರುತ್ತದೆ ಇದಾದ ನಂತರ ಮಾಜಿ ಶಾಸಕರಾದ ವಿ ಪಾಪಣ್ಣರವರು 2002 ಮೂರನೇ ಸಾಲಿನಲ್ಲಿ ಆಶ್ರಯ ಸಮಿತಿಯ ವತಿಯಿಂದ 870 ಫಲಾನುಭವಿಗಳಿಗೆ ವಿತರಣೆ ಮಾಡಿರುವ ಹಕ್ಕು ಪತ್ರಗಳನ್ನು ವಿತರಣೆ ಮಾಡಿರುತ್ತಾರೆ.

ಇದರ ಬಗ್ಗೆ ತುರ್ತಾಗಿ ಎರಡನೇ ಪ್ರತಿಭಟನೆ ಕಾರ್ಯಕ್ರಮದ ಮುಖಾಂತರ ಅನ್ಯಾಯಕ್ಕೆ ಒಳಗಾಗಿರುವ ಫಲಾನುಭವಿಗಳಿಗೆ ಸಾಮಾಜಿಕ ನ್ಯಾಯ ದೊರೆಯುವ ವಿಚಾರದಲ್ಲಿ ಸೂಕ್ತ ಮತ್ತು ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು 2002 ಮೂರನೇ ಸಾಲಿನ ಆಶ್ರಯ ಸಮಿತಿಯ ನಿರ್ಣಯದಂತೆ ಅಂದಿನ ಜಿಲ್ಲಾಧಿಕಾರಿಯವರು ಅನುಮೋದಿ ಮಾಡಿರುವ ಪಟ್ಟಿಯನ್ನು ವಿನಾ ಕಾರಣ ಪರಿಶೀಲನೆ ಮಾಡುವ ನೆಪದಲ್ಲಿ 20 ವರ್ಷಗಳ ಹಿಂದೆ ಹಕ್ಕು ಪತ್ರವನ್ನು ಪಡೆದಿರುವ ಫಲಾನುಭವಿಗಳಿಗೆ ಅನ್ಯಾಯವಾಗಿರುತ್ತದೆ. ಎಂದರು

ಉಪಾಧ್ಯಕ್ಷರಾದ ಇಂಟಕ್ ರಾಜು ಮಾತನಾಡಿ ಇನ್ನೂ ಮುಂದೆಯಾದರೂ ಜನಪ್ರತಿನಿಧಿಗಳಾಗಲಿ ಸಂಬಂಧಪಟ್ಟ ಅಧಿಕಾರಗಳಾಗಲಿ, ಮಾನವೀಯತೆಯ ದೃಷ್ಟಿಯಿಂದ ಹಕ್ಕು ಪತ್ರವನ್ನು ಪಡೆದಿರುವ ಫಲಾನುಭವಿಗಳಿಗೆ ಸಾಮಾಜಿಕ ದೃಷ್ಟಿಯಿಂದ ಕೊಡಬೇಕು ಇಲ್ಲದಿಲ್ಲಲಿ ಇಲ್ಲದಿದ್ದಲ್ಲಿ ನಮ್ಮ ಸಮಿತಿ ವತಿಯಿಂದ ಬಡ ನಿವೇಶನ ರಹಿತ ಸೇರಿದಂತೆ ಸಾಮಾಜಿಕ ನ್ಯಾಯಕ್ಕಾಗಿ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ

ನಗರದ 870 ಆಶ್ರಯ ಸಮಿತಿ ವತಿಯಿಂದ ನೀಡಿರುವ ಹಕ್ಕುಪತ್ರದ ನಂಬರನ್ನು, ಈಗಾಗಲೇ ಗುರುತಿಸಿದ್ದೇವೆ ಆ ನಂಬರಿನ ಪ್ರಕಾರ ಫಲಾನುಭವಿಗಳಿಗೆ ಸ್ಥಳದಲ್ಲಿ ಗುರುತಿಸುವ ಕೆಲಸವನ್ನು ನಾವೇ ನಮ್ಮ ಸಂಘಟನೆಯಿಂದ ಮಾಡುತ್ತೇವೆ ಚುನಾಯಿತಿ ಪ್ರತಿನಿಧಿಗಳು ಮತಗಳು ಪಡೆಯೋಕೆ ಮಾತ್ರ ಅವರ ಬಳಿ ಹೋಗ್ತಾರೆ ಆದರೆ ಅವರಿಗೆ ಸೂರು ನೀಡುವುದರಲ್ಲಿ ಜನಪ್ರತಿನಿಧಿಗಳು

ಹಾಗೂ ನಗರಸಭೆ ಅಧಿಕಾರಿಗಳು ಆಶ್ರಯ ನಿವೇಶನ ನೀಡಿದ್ದ ನಿವೇಶನವನ್ನು ವಿತರಣೆ ಆಗಿದ್ದು ಖಾಲಿ ಬಿದ್ದಂತ ಭೂಮಿಯ ಸರ್ವೆ ನಡೆಸಿ ನಂಬರ್ ಗಳನ್ನು ಗುರುತಿಸಿ ಫಲಾನುಭವಿಗಳಿಗೆ ನೀಡಲು ಸಂಪೂರ್ಣ ವಿಫಲ ಇದು ಒಂದು ದುರದೃಷ್ಟ ಕರ ಎಂದರು

ಪತ್ರಿಕಾಗೋಷ್ಠಿಯಲ್ಲಿ ಕಾರ್ಯದರ್ಶಿ ಎಸ್ ಕೆ ಸುರೇಶ್ ಸಂಘಟನೆಯ ಕಾರ್ಯದರ್ಶಿ ವಿಷಕಂಠ ಸಂಚಾಲಕ. ಕಲ್ಕುಣಿಕೆ ಶ್ರೀನಿವಾಸ್ ಹಾಜರಿದ್ದರು

# ಹತ್ತನೇ ವಿದ್ಯಾರ್ಥಿಗಳ ಬೀಳ್ಕೊಡುಗೆ : ಪಾಲಕರ ಸಭೆ

ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಪಟ್ಟಣದ ಸರಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಹತ್ತನೇ ತರಗತಿ ವಿದ್ಯಾರ್ಥಿಗಳ ಬೀಳ್ಕೊಡುಗೆ ಕಾರ್ಯಕ್ರಮ ಗುರುವಾರ ಜರುಗಿತು.

ಕಾರ್ಯಕ್ರಮ ಉದ್ಘಾಟನೆ ಲಿಂಗಸಗೂರು ಕ್ಷೇತ್ರ ಶಿಕ್ಷಣಾಧಿಕಾರಿ ಸುಜಾತ ಹೊನೂರ ನೆರವೇರಿಸಿ ಬಳಿಕ ಮಾತನಾಡಿದ ಅವರು ವಿದ್ಯಾರ್ಥಿಗಳ ಶೈಕ್ಷಣಿಕ ಜೀವನದ ಒಂದು ಮಹತ್ವ ಹಂತಕ್ಕೆ ವಿದಾಯ ಹೇಳಿ, ಹೊಸ ವಿಷಯದತ್ತ ಹೆಜ್ಜೆ ಇಡುವ ಕ್ಷಣವನ್ನು ಸ್ಮರಣಿಯವಾಗಿಸಲು ಕಾರ್ಯಕ್ರಮ ಆಯೋಜನೆ ಮಾಡಲಾಗಿರುತ್ತದೆ. ವಿದ್ಯಾರ್ಥಿಗಳ ಶೈಕ್ಷಣಿಕ ಸಾಧನೆ,



ಶಾಲೆಯಲ್ಲಿ ಕಳೆದ ಅಮೋಘ ಕ್ಷಣಗಳು, ಮುಂದಿನ ಬದುಕಿನ ಹಾದಿಗೆ ಅಗತ್ಯದ ಪ್ರೇರಣಾತ್ಮಕ ಸಂದೇಶಗಳು ಮುಖ್ಯ ಅಂಶಗಳಾಗಿವೆ ಎಂದು ತಿಳಿಸಿದರು. ಜನತಾಪುರ ಶಾಲಾ ಸಹ ಶಿಕ್ಷಕ ಮೌನೇಶ ಆಚಾರ ವಿಶ್ವಕರ್ಮ ಮಾತನಾಡಿ ವಿದ್ಯಾರ್ಥಿಗಳ ಶಾಲಾ ಜೀವನದ ನೆನಪುಗಳನ್ನು ಮೆಲುಕು ಹಾಕುವ, ಶಿಕ್ಷಕರು ಹಾಗೂ ಕಿರಿಯ ವಿದ್ಯಾರ್ಥಿಗಳು ಹಿರಿಯ ವಿದ್ಯಾರ್ಥಿಗಳಿಗೆ ಶುಭ ಹಾರೈಸುವ ಭಾವುಕ ಕ್ಷಣವಾಗಿದೆ.

ಶೈಕ್ಷಣಿಕ ಸಾಧನೆಗಾಗಿ ಸನ್ಮಾನ, ಸಾಂಸ್ಕೃತಿಕ ಕಾರ್ಯಕ್ರಮಗಳು, ಮುಂದಿನ ಭವಿಷ್ಯಕ್ಕೆ ಮಾರ್ಗದರ್ಶನ ಮತ್ತು ಪ್ರೀತಿಯ ಕಾಣಿಕೆಗಳನ್ನು ನೀಡುವುದ ಸಂದೇಶವಾಗಿದೆ ಎಂದರು.

ಕಳೆದ ವರ್ಷ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಗೌರವಿಸಲಾಯಿತು.

ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಚಂದ್ರಶೇಖರ, ಮುಖ್ಯಗುರು ಬಾಲಚಂದ್ರ ದಾಸರ, ಶಾಲಾ ಸುಧಾರಣಾ ಸಮಿತಿ ಅದ್ಯಕ್ಷ ರಮೇಶ, ಕಸಾಪ ಮಾಜಿ ಅದ್ಯಕ್ಷ ಮಲ್ಲಿಕಾರ್ಜುನ ಗೌಡೂರು ಸೇರಿದಂತೆ ಇತರರಿದ್ದರು.

# ಸಮುದಾಯ ಒಕ್ಕೂಟ ವತಿಯಿಂದ ಅನ್ಯಾಯವನ್ನು ಖಂಡಿಸಿ ಪ್ರತಿಭಟನೆ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ನಗರ ಅರಸು ಪ್ರತಿಮೆಯಿಂದ ಸಂವಿಧಾನ ಸರ್ಕಲ್ ವರೆಗೆ ಪ್ರಾರಂಭಗೊಂಡು ತಾಲ್ಲೂಕು ಬಲಗೈ (ಹೊಲಯ) ಸಮುದಾಯಗಳ ಒಕ್ಕೂಟ ವತಿಯಿಂದ ಅನ್ಯಾಯವನ್ನು ಖಂಡಿಸಿ

ಸಂವಿಧಾನ ವೃತ್ತದವರೆಗೆ ಹಾಗೂ ಪ್ರತಿಭಟನಾ .ಮೆರವಣಿಗೆ ಸಂವಿಧಾನ ವೃತ್ತಕ್ಕೆ ಬಂದು ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿ. ಉಪವಿಭಾಗಾಧಿಕಾರಿ ಕಛೇರಿಯ ತಹಶಿಲ್ದಾರ್ ಯಧುಗಿರೀಶ್ ಮನವಿ ಪತ್ರ ಸಲ್ಲಿಸಿದರು

ಪ್ರತಿಭಟನಾ ಮೆರವಣಿಗೆಯಲ್ಲಿ ನಂತರ ಡಿಎಸ್ ಯುವ ಮುಖಂಡರಾದ ಕಿರಂಗಸ್ವಾಮಿ ಮಾತನಾಡಿ ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಗಳಿಗೆ ಶಿಕ್ಷಣ ಮತ್ತು ಉದ್ಯೋಗಕ್ಕೆ ಒಳಮೀಸಲಾತಿ ವರದಿಯ ಸಮಸ್ಯೆಯು ಸಂಪೂರ್ಣವಾಗಿ ಬಗೆಹರಿಯುವ ತನಕ ಪ್ರಸ್ತುತ ಶೈಕ್ಷಣಿಕ ವಲಯ ಮತ್ತು ಉದ್ಯೋಗಕ್ಕೆ ಅನ್ವಯಿಸುತ್ತಿರುವ ಒಳಮೀಸಲಾತಿಯ ಕಾರ್ಯ



ಚಟುವಟಿಕೆಗಳಿಗೆ ಶೀಘ್ರವೇ ತಡೆಯಾಜ್ಞೆ ನೀಡುವುದು.

ಒಳಮೀಸಲಾತಿಗೆ ಅನ್ವಯಿಸಿರುವ ರೋಸ್ಟರ್ ಬಿಂದುವನ್ನು ಪರಿಷ್ಕರಿಸುವುದು. ಹಳೆ ಮೀಸಲಾತಿಯನ್ನೇ ಅನ್ವಯಿಸಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವುದು. ಹಾಗೂ ಜಾತಿಗಣತಿಯನ್ನು ಕೂಡಲೇ ಬಿಡುಗಡೆ ಮಾಡವುದು ಮೀಸಲಾತಿ ಪಡೆಯುವ ಎಲ್ಲಾ ಜಾತಿಗಳ ವೈಜ್ಞಾನಿಕ ವರ್ಗೀಕರಣ ಮಾಡುವುದು ಮತ್ತು ಖಾಸಗಿ ವಲಯದಲ್ಲಿ ಮೀಸಲಾತಿ ನೀಡುವುದು. ಕೊಳ್ಳೇಗಾಲದ ಒಳಮೀಸಲಾತಿ ಬಲಗೈ ಹೋರಾಟಗಾರರ ಮೇಲೆ ದಾಖಲಿಸಿರುವ ಮೊಕೊದ್ದಮೆಯನ್ನು ಹಿಂಪಡೆಯಬೇಕು. ಎಂದರು

ಪ್ರತಿಭಟನೆಯಲ್ಲಿ ಡಿ ಎಸ್ ಎಸ್ ಮುಖಂಡ ಹರಿಹರ ಆನಂದ ಸ್ವಾಮಿ ನಿಂಗರಾಜ್ ಮಲ್ಲಾಡಿ ಬಸವಲಿಂಗಯ್ಯ, ಮಹದೇವಮ್ಮ, ವಕೀಲ ಪುಟ್ಟರಾಜು ನಾಗರಾಜ್, ತಟ್ಟೆಕೆರೆ ನಾಗರಾಜ್, ಕಿರಣ್, ದೇವರಾಜ್ ಒಡೆಯರ್, ರಮೇಶ್ ಮಲ್ಲೇಶ್ ತರಿಕಲ್ ರಾಜು ಸಂತೋಷ್ ಶಿವ ಶೇಖರ್ ರಾಮಕೃಷ್ಣ ಶಾಂತರಾಜ ಪ್ರಸನ್ನ ಹಾಜರಿದ್ದರು.

# ವಿಶೇಷ ಅಂಚೆ ಜೀವ ವಿಮಾ ಮೇಳ



• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ರಾಯಚೂರು ಅಂಚೆ ವಿಭಾಗದಿಂದ ವಿಶೇಷ ಅಂಚೆ ಜೀವ ವಿಮಾ ಮೇಳ ಇತ್ತೀಚೆಗೆ ಯಶಸ್ವಿಯಾಗಿ ನಡೆಯಿತು.

ಈ ಮೇಳಕ್ಕೆ ಜಿಲ್ಲೆಯ ಕೇಂದ್ರ ಹಾಗೂ ರಾಜ್ಯ ಸರ್ಕಾರಿ ನೌಕರರು, ಗ್ರಾಮೀಣ ಅರೆ-ಸರ್ಕಾರಿ ನೌಕರರು, ಆಟೋ ಚಾಲಕರು, ಸಣ್ಣ ಉದ್ಯಮಿಗಳು ಹಾಗೂ ವ್ಯಾಪಾರಸ್ಥರು ಸೇರಿದಂತೆ ವಿವಿಧ ವರ್ಗದ ಸುಮಾರು 490 ಜನರು ಭಾಗವಹಿಸಿದ್ದರು.

ಈ ಮೇಳದ ಮೂಲಕ ಒಟ್ಟು 1.75 ಕೋಟಿ ರೂ. ಪ್ರೀಮಿಯಂ ಸಂಗ್ರಹವಾಗಿದ್ದು, ಕೇಂದ್ರ ಸರ್ಕಾರದ ಜನಪರ ಅಂಚೆ ಜೀವ ವಿಮಾ ಯೋಜನೆಗೆ ಜನರಿಂದ ಭಾರೀ ಸ್ಪಂದನೆ ವ್ಯಕ್ತವಾಗಿದೆ.

ಅಂಚೆ ಜೀವ ವಿಮೆ ಯೋಜನೆ ಕಡಿಮೆ ಪ್ರೀಮಿಯಂನಲ್ಲಿ ಹೆಚ್ಚಿನ ಬೋನಸ್ ಹಾಗೂ ವಿಶ್ವಾಸಾರ್ಹ ಭದ್ರತೆ ನೀಡುವ ಸರಳ ಮತ್ತು ಸುರಕ್ಷಿತ ಯೋಜನೆಯಾಗಿದೆ. ಇದು ಜನರ ಆರ್ಥಿಕ ಭದ್ರತೆಯನ್ನು ಖಚಿತಪಡಿಸುವ ಉದ್ದೇಶದಿಂದ ರೂಪಿಸಲಾದ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದೆ.ಮಾರ್ಚ 11ರಂದು ಮತ್ತೆ ಮೇಳ: ಈ ಮಹಾ ಯಶಸ್ಸಿನ ಹಿನ್ನೆಲೆಯಲ್ಲಿ ಜಿಲ್ಲೆಯ ಇನ್ನಷ್ಟು ಜನರಿಗೆ ಯೋಜನೆಯ ಪ್ರಯೋಜನ ತಲುಪಿಸುವ ಉದ್ದೇಶದಿಂದ ರಾಯಚೂರು ಅಂಚೆ ವಿಭಾಗದ ಅಂಚೆ ಅಧೀಕ್ಷಕರಾದ ಶ್ರೀ ಶಿವಾನಂದ ಆರ್.ಎಚ್. ಅವರ ಮಾರ್ಗದರ್ಶನದಲ್ಲಿ ಮಾರ್ಚ್ 11ರಂದು ಮತ್ತೊಮ್ಮೆ ವಿಶೇಷ ಅಂಚೆ ಜೀವ ವಿಮಾ ಮೇಳ ಆಯೋಜಿಸಲು ನಿರ್ಧರಿಸಲಾಗಿದೆ. ಜಿಲ್ಲೆಯ ಸಮಸ್ತ ನಾಗರಿಕರು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಯೋಜನೆಯ ಲಾಭ ಪಡೆಯುವಂತೆ ಮನವಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ ಎಂದು ರಾಯಚೂರು ವಿಭಾಗ ಅಂಚೆ ಅಧೀಕ್ಷಕರಾದ ಶಿವಾನಂದ ಆರ್.ಎಚ್ ಅವರು ತಿಳಿಸಿದ್ದಾರೆ.

# ಅಂಜುಮನ್ ಸಂಸ್ಥೆಯಿಂದ ದೇವಿಯರಿಗೆ ಉಡಿ ತುಂಬವ ಕಾರ್ಯ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ

ಮನುಷ್ಯರಾಗಿ ಹುಟ್ಟಿ ಸಮಾಜಕ್ಕೆ ಏನಾದರೂ ಕಾಣಿಕೆ ನೀಡಬೇಕು ಸಮಾಜದಿಂದ ಎಲ್ಲವನ್ನು ಪಡೆದಿದ್ದೆವೆ ಕೊನೆಗೆ ನಾವು ಮನುಷ್ಯರಾಗಿ ಆದರೂ ಬಾಳಬೇಕು ಎಂದು ಅಂಜುಮನ್ ಸಂಸ್ಥೆ ಅಧ್ಯಕ್ಷ ಅಜಮತ್‌ಉಲ್ಲಾಖಾನ್ ಜಾಗಿರದಾರ ಮಾತನಾಡಿದರು.

ಅವರು ಪಟ್ಟಣದ ಪ್ರಮುಖ 5 ಗ್ರಾಮಗಳಲ್ಲಿ ಮೂರು ವರ್ಷಕ್ಕೊಮ್ಮೆ ಜರಗುವ ಶ್ರೀಗ್ರಾಮದೇವಿ ಜಾತ್ರಾ ಮಹೋತ್ಸವದಲ್ಲಿ ನಮ್ಮ ಸಂಸ್ಥೆ ವತಿಯಿಂದ ದ್ಯಾಮವ್ವ ದುರಗವ್ವ ದೇವಿಯರಿಗೆ ಉಡಿ ತುಂಬವ ಮೂಲಕ ನಾವೆಲ್ಲರೂ ಒಂದೆ ಎನ್ನುವ ಸಾಮರಸ್ಯ ಮೆರೆದರು ನಂತರ ಪ್ರತಿ ಜಾತ್ರೆಯಲ್ಲಿ ಒಂದು ದಿವಸ ನಮ್ಮ ಸಂಸ್ಥೆ, ಹಾಗೂ ಸಮಾಜ ಬಾಂಧವರ ವತಿಯಿಂದ ಆಯೋಜಿಸಿರುವ ಮಹಾ ಪ್ರಸಾದ ಸೇವೆ ನೆರವೇರಿಸಲಾಯಿತು.

ಮಾಜಿ ಪ.ಪಂ ಅಧ್ಯಕ್ಷ ಸಿಕಂದರಬಾಷಾ ಬೇಪಾರಿ ಮಾತನಾಡಿ ನಮ್ಮ ಸಮಾಜ ಬಾಂಧವರು ಜಾತ್ರೆಯ ಆರಂಭದಿಂದಲೂ ಎಲ್ಲ ನಿಯಮಾದಿಗಳನ್ನು ಕಟ್ಟು ನಿಟ್ಟಾಗಿ ಪಾಲಿಸುತ್ತಿದ್ದು ನಮ್ ಊರಿಗೆ ಒಳ್ಳೆಯದಾಗಲಿ ಕಾಲಕಾಲಕ್ಕೆ ಮಳೆಬೆಳೆ ಸರಿಯಾಗಿ ಬರಲಿ ಎಂಬ ಬಲವಾದ ನಂಬಿಕೆಯಿಂದ ಗ್ರಾಮದೇವಿಯರನ್ನು ಪ್ರಾರ್ಥಿಸುತ್ತವೆ ಎಂದರು.

ಅಂಜುಮನ್ ಸಂಸ್ಥೆಯ ಉಪಾಧ್ಯಕ್ಷ ಹಜರೆಸಾಬ್ ಶಿಗ್ಗಾಂವ ಮಾತನಾಡಿ ನಾವು ನಮ್ಮ ಸಮಾಜ ನಮ್ಮೂರ ಜಾತ್ರೆಯ ಪ್ರತಿಯೊಂದು ಕಾರ್ಯಕ್ರಮದಲ್ಲಿ ಬಾಗವಹಿಸಿ ಸೇವೆ ಸಲ್ಲಿಸುತ್ತೆವೆ ಬರುವ ಭಕ್ತಾದಿಗಳಿಗೆ ಕುಡಿಯಲು ನೀರು, ವಯೋವೃದ್ದರಿಗೆ ಕುಳಿತುಕೊಳ್ಳಲು ಆಸನದ ವ್ಯವಸ್ಥೆಯನ್ನು ಕೂಡ ಮಾಡಿಕೊಟ್ಟದುಂಟು ಎಂದರು.

ಈ ಸಂದರ್ಭದಲ್ಲಿ ಹರಿಶಂಕರ ಮಠದ, ಬಾಬಣ್ಣ ಅಂಚಟಗೇರಿ, ಸುಧೀರ ಬೋಳಾರ, ಕುಮಾರ ಖಂಡೆಕರ, ಪ್ರಮೋದ ಪಾಲ್ಕರ, ಬಾಳು ಖಾನಾಪೂರ, ರಾಜು ಚಿಕ್ಕಮಠ, ಶೌಕತಅಲಿ ತೇರಗಾಂವ್, ಸಯ್ಯದಬಾಷಾ ಕಾರಿಗಾರ, ಹಸನಸಾಬ್ ಗಂಜಿಗಟ್ಟಿ, ಮಹಮ್ಮದಗೌಸ್ ಮುಲ್ಲಾ, ಸಾಧಿಕಬೇಗ್ ಮುಲ್ಲಾ, ದಾವಲಸಾಬ್ ಓಲೇಕಾರ, ಆಜಾದ ಮಲ್ಲಿಕನವರ, ,ಸಿರಾಜ್ ರಜಬಲಿ, ಅಬ್ದುಲ್ ಝುಂಡೆವಾಲೆ, ಬುಡ್ಡೆಸಾಬ್ ತೋರಗಲ್, ಅಲಿಸಾಬ್ ನಾಲಬಂದ್, ಮಹಬುಬಲಿ ದಲಾಲ, ರಶೀದ ಬೇಪಾರಿ, ಇಮಾಮಹುಸೇನ್ ಬುಡನಖಾನ್, ಜಾವೇದಜಹಗಿರದಾರ, ಬಾಷಾಸಾಬ್ ನಾಲಬಂದ್ ಶಾರುಖ ಜಾಗಿರದಾರ, ರುಸ್ತುಂಅಲಿ ರಜಬಲಿ ಇದ್ದರು.

# ಆಹಾರ ಪೂರೈಕೆ ಸರಬರಾಜು ವಿತರಣೆಯಲ್ಲಿ ಲೋಪ: ಕೃಷ್ಣ



• ಮಲ್ಲಮ್ಮ ನುಡಿ ವಾರ್ತೆ ಕಾರವಾರ

ಜಿಲ್ಲೆಯಲ್ಲಿಶಾಲೆಗಳಲ್ಲಿಬಿಸಿಯೂಟ, ವಿದ್ಯಾರ್ಥಿನಿಲಯಗಳಲ್ಲಿಊಟದವ್ಯವಸ್ಥೆಹಾಗೂತೀವ್ರಅಪೌಷ್ಠಿಕತೆಯಿಂದಬಳಲುತ್ತಿರುವಮಕ್ಕಳಿಗೆ ನೀಡುವಆಹಾರಪದಾರ್ಥಗಳವಿತರಣೆಯಕರ್ತವ್ಯದಲ್ಲಿನಿರ್ಲಕ್ಷ ವಹಿಸಿದಸಿಬ್ಬಂದಿಗಳವಿರುದ್ದಸಂಬಂದಪಟ್ಟಇಲಾಖೆಯಅಧಿಕಾರಿಗಳಮೂಲಕಶಿಸ್ತುಕ್ರಮಕ್ಕೈಗೊಳ್ಳಲಾಗಿದೆಎಂದುಕರ್ನಾಟಕರಾಜ್ಯಆಹಾರಆಂಯೋಗದಅಧ್ಯಕ್ಷಡಾ. ಹೆಚ್. ಕೃಷ್ಣತಿಳಿಸಿದರು.

ಅವರುಮಂಗಳವಾರಜಿಲ್ಲಾಧಿಕಾರಿಕಚೇರಿಸಭಾಂಗಣದಲ್ಲಿನಡೆದ ಸಭೆಯಅಧ್ಯಕ್ಷತೆಮಾತನಾಡಿದರು.

ಕಾರವಾರದಬಜಾರ್ಶಾಲೆಯಲ್ಲಿ, ಶಾಲಾಮಕ್ಕಳಿಗೆಬಿಸಿಯೂಟವಿತರಣೆಮತ್ತುಸ್ವಚ್ಛತೆಕಾಪಾಡುವಕಾರ್ಯದಲ್ಲಿನಿರ್ಲಕ್ಷ ವಹಿಸಿದಶಿಕ್ಷಕರವಿರುದ್ದಕ್ರಮಕ್ಕೈಗೊಳ್ಳುವಂತೆಶಿಕ್ಷಣಇಲಾಖೆಅಧಿಕಾರಿಗಳಿಗೆಸೂಚಿಸಿದ್ದು, ಈಕುರಿತಂತೆಅಧಿಕಾರಿಗಳುಸಂಬಂದಪಟ್ಟಶಿಕ್ಷಕರಿಗೆ 15 ದಿನಗಳಕಡ್ಡಾಯರಜೆಯಶಿಕ್ಷೆನೀಡಿದ್ದು, ಅಮದಳ್ಳಿಯಡಾ.ಬಿ.ಆರ್.ಅಂಬೇಡ್ಕರ್ಬಾಲಕಿಯರವಸತಿಶಾಲೆಯಲ್ಲಿವಿದ್ಯಾರ್ಥಿಗಳಿಗೆಗುಣಮಟ್ಟದಆಹಾರನೀಡದಸಿಬ್ಬಂದಿಗೆಮತ್ತುಕ್ರಿಮ್ಸ್‌ನಲ್ಲಿತೀವ್ರಅಪೌಷ್ಠಿಕತೆಯಿಂದಬಳಲುತ್ತಿರುವಮಕ್ಕಳಿಗೆನೀಡುವಆಹಾರದಕುರಿತಂತೆನಿರ್ಲಕ್ಯತೋರಿದವೈದ್ಯರಿಗೆಸಂಬಂದಪಟ್ಟಹಿರಿಯಅಧಿಕಾರಿಗಳಮೂಲಕಕಾರಣಕೇಳಿನೋಟಿಸ್ಜಾರಿಗೊಳಿಸಲಾಗಿದೆಎಂದರು.ಜಿಲ್ಲೆಯಎಲ್ಲಾವಿದ್ಯಾರ್ಥಿನಿಲಯಗಳಲ್ಲಿಊಟದವ್ಯವಸ್ಥೆ ,ಸಾರ್ವಜನಿಕಪಡಿತರಆಹಾರವಿತರಣೆ, ಶಾಲೆಗಳಲ್ಲಿಬಿಸಿಯೂಟ, ಅಂಗನವಾಡಿಗಳಲ್ಲಿಆಹಾರನೀಡಿಕೆ, ವಿದ್ಯಾರ್ಥಿನಿಲಯಗಳಲ್ಲಿಆಹಾರವಿತರಣೆ, ಗರ್ಭಿಣಿಮತ್ತುಬಾಣಂತಿಯರಿಗೆನೀಡುವಪೌಷ್ಠಿಕಆಹಾರ, ತೀವ್ರಅಪೌಷ್ಠಿಕತೆಯಿಂದಬಳಲುತ್ತಿರುವಮಕ್ಕಳಿಗೆನೀಡುವಆಹಾರ, ಆಹಾರಪದಾರ್ಥಗಳದಾಸ್ತಾನುಸೇರಿದಂತೆಆಹಾರವಿತರಣಾವ್ಯವಸ್ಥೆಯಪ್ರಕ್ರಿಯೆಗಳಲ್ಲಿಯಾವುದೇಲೋಪಗಳುಕಂಡುಬಾರದಂತೆಅಧಿಕಾರಿಗಳುಮತ್ತುಸಿಬ್ಬಂದಿಗಳುಕಾರ್ಯನಿರ್ವಹಿಸಬೇಕುಎಂದುಅಧ್ಯಕ್ಷರುತಿಳಿಸಿದರು.

ಕರ್ನಾಟಕರಾಜ್ಯಆಹಾರಆಯೋಗದವತಿಯಿಂದ3ದಿನಗಳಕಾಲಜಿಲ್ಲೆಯಲ್ಲಿ ,ಪಡಿತರದಾಸ್ತಾನುಕೇಂದ್ರಗಳು, ಶಾಲೆಮತ್ತುಅಂಗನವಾಡಿಗಳು, ಹಾಸ್ಟೆಲ್ಗಳು, ಆಸ್ಪತ್ರೆಗಳಿಗೆಭೇಟಿನೀಡಿ, ಪರಿಶೀಲನೆನಡೆಸಿ, ಭೇಟಿಸಂದರ್ಭದಲ್ಲಿಕಂಡುಬರುವನ್ಯೂನತೆಗಳಕುರಿತಂತೆವರದಿಯನ್ನುಸಿದ್ದಪಡಿಸಿದ್ದು, ಈವರದಿಯಲ್ಲಿನಲೋಪಗಳನ್ನುಅಧಿಕಾರಿಗಳುಸರಿಪಡಿಸುವಕಾರ್ಯಮಾಡುವಮೂಲಕಪ್ರತಿಯೊಬ್ಬರಿಗೂಆಹಾರದಹಕ್ಕಿನಸಂಪೂರ್ಣಪ್ರಯೋಜನದೊರೆಯುವಂತೆಮಾಡಬೇಕುಎಂದರು.

ಆಹಾರಸಿದ್ದಪಡಿಸುವಕೇಂದ್ರಗಳಲ್ಲಿಸ್ವಚ್ಛತೆಕಾಪಾಡಬೇಕು, ಇಲ್ಲಿಕಾರ್ಯನಿರ್ವಹಿಸುವಸಿಬ್ಬಂದಿಗಳಿಗೆಕಡ್ಡಾಯವಾಗಿಆರೋಗ್ಯತಪಾಸಣೆಮಾಡಿಸಬೇಕು, ಗೋದಾಮುಗಳಲ್ಲಿಆಹಾರಶೇಖರಣೆಯನ್ನುವೈಜ್ಞಾನಿಕರೀತಿಯಲ್ಲಿನಿರ್ವಹಿಸಬೇಕು, ಆಹಾರತಯಾರಿಕಾಮಾದರಿಗಳನ್ನುಆಗಾಗ್ಗೆಕಡ್ಡಾಯವಾಗಿತಪಾಸಣೆಗೆಒಳಪಡಿಸಬೇಕು, ಉತ್ತಮಗುಣಮಟ್ಟದಆಹಾರವನ್ನುಸರಬರಾಜುಮಾಡಬೇಕುಎಂದುನಿರ್ದೇಶನನೀಡಿದರು.ಜಿಲ್ಲಾಧಿಕಾರಿಕೆ.ಲಕ್ಷ್ಮೀಪ್ರಿಯಮಾತನಾಡಿ, ಕರ್ನಾಟಕರಾಜ್ಯಆಹಾರಆಯೋಗದವತಿಯಿಂದನಡೆಸಿರುವಪರಿಶೀಲನಾವೇಳೆಯಲ್ಲಿಕಂಡುಬಂದಿರುವಲೋಪಗಳನ್ನುಆದ್ಯತೆಯಲ್ಲಿಸರಿಪಡಿಸಲುಕ್ರಮಕ್ಕೈಗೊಳ್ಳಲಾಗುವುದುಎಂದಅವರುಈಎಲ್ಲಾಲೋಪಗಳಕುರಿತಂತೆಸಂಬಂದಪಟ್ಟಇಲಾಖೆಯಅಧಿಕಾರಿಗಳುಕ್ರಮಕೈಗೊಂಡುವರದಿಯನ್ನುಸಲ್ಲಿಸುವಂತೆಸೂಚಿಸಿದರು

# ಖಾಲಿ ಹುದ್ದೆ ಒಳಮೀಸಲಾತಿ ಆಧಾರದಲ್ಲಿ ಭರ್ತಿ ಮಾಡಬೇಕು: ನಾಗೇಂದ್ರ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು

ಕರ್ನಾಟಕ ಸರ್ಕಾರ 56432 ಹುದ್ದೆಗಳನ್ನು ಭರ್ತಿ ಮಾಡುವಾಗ ಒಳಮೀಸಲಾತಿ ಆಧಾರದಲ್ಲಿ ಅನುಸರಿಸಿ ಭರ್ತಿ ಮಾಡಬೇಕು. ಎಂದು ಮಾದಿಗ ಹೋರಾಟ ಸಮಿತಿಯ ವತಿಯಿಂದ ಮುಖಂಡ ಅರಕಲವಾಡಿ ನಾಗೇಂದ್ರ ಎಂದು ತಿಳಿಸಿದ್ದಾರೆ

ನಗರದ ಪತ್ರಕರ್ತರ ಸಂಘದ ಕಚೇರಿಯಲ್ಲಿ ಕರೆಯಲಾಗಿದೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ ಕರ್ನಾಟಕ ಸರ್ಕಾರದಲ್ಲಿ ಖಾಲಿ ಇರುವ 56432 ಹುದ್ದೆಗಳನ್ನು ತುಂಬಬೇಕು. ಸರ್ಕಾರಕ್ಕೆ ಕಳೆದ 2022 ನೇ ಇಸವಿಯಲ್ಲಿ ಈ ಹಿಂದೆ ಇದ್ದ ಮೀಸಲಾತಿ ಪ್ರಮಾಣದಲ್ಲಿ ಉದ್ಯೋಗ ತುಂಬುವ ಕೆಲಸ ಮಾಡಲು ಹೊರಟಿದೆ. ಹೀಗಿರುವಾಗ ಸಮಾಜ ಕಲ್ಯಾಣ ಇಲಾಖೆಯ ಒಳಗಡೆ ಗೊಂದಲಗಳನ್ನು ಸೃಷ್ಟಿಸುವ ಕೆಲಸಗಳು ಆಗಬಾರದು. ಸಮಾಜ ಕಲ್ಯಾಣ ಇಲಾಖೆಯ ಸಚಿವರಾದ ಹೆಚ್.ಸಿ ಮಹದೇವಪ್ಪರವರು ಒಂದು ಸಮುದಾಯದ ಪರವಾಗಿ ಮಾತನಾಡಬಾರದು. ಗೊಂದಲ ಸೃಷ್ಟಿ ಮಾಡುವುದು ಸಾಮಾಜಿಕ ನ್ಯಾಯ ಎಂದು ಹೇಳುತ್ತಿದ್ದಾರೆ. ಇಂತಹ ಕೃತ್ಯಗಳನ್ನು ಬಿಟ್ಟು ಸಾಮಾಜಿಕ ನ್ಯಾಯದ ಪರವಾಗಿ ನಡೆದುಕೊಳ್ಳಬೇಕು. ಸರ್ಕಾರದ ತೀರ್ಮಾನವೇನಿದೆ. ಅದರಂತೆ 56432 ಹುದ್ದೆಗಳನ್ನು ಒಳಮೀಸಲಾತಿ ಆಧಾರದ ಮೇಲೆ ತುಂಬಬೇಕು.6.3.2026 ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿ ರಸ್ತೆ ತಡೆ ಮಾಡಿ ಸರ್ಕಾರವನ್ನು ಎಚ್ಚರಿಕೆ ನೀಡುತ್ತೇವೆಂದು

ಒಳಮೀಸಲಾತಿ ಜಾರಿಯಾದ ನಂತರ ಒಳಮೀಸಲಾತಿಯಲ್ಲಿ ಪವರ್ಗಗಳ ವಿಚಾರದಲ್ಲಿ ರೋಸ್ಟರ್ ಬಿಂದುವಿನಲ್ಲಿ ಅನ್ಯಾಯವಾಗಿದೆ ಎಂದು ಕೆಲವು ಹೋರಾಟಗಳು ನಡೆಯುತ್ತಿವೆ. ಆ ಕಾರಣಕ್ಕಾಗಿ ಸರ್ಕಾರ ಒಂದು ನಿರ್ಧಾರವನ್ನು ಮಾಡಿದೆ.

2022 ರಲ್ಲಿದ್ದ ಬೊಮ್ಮಾಯಿ ಸರ್ಕಾರ ಮೀಸಲಾತಿ ಪ್ರಮಾಣವನ್ನು ಪರಿಶಿಷ್ಟ ಜಾತಿಗೆ 2% ಪರಿಶಿಷ್ಟ ಪಂಗಡಕ್ಕೆ



4% ಹೆಚ್ಚು ಮಾಡಿದೆ. ಈ ಆಧಾರದಲ್ಲಿ ಹುದ್ದೆಗಳನ್ನು ತುಂಬಿದರೆ ಕಾನೂನಾತ್ಮಕವಾಗಿ ತೊಡಕಾಗುತ್ತದೆ ಎನ್ನುವ ಕಾರಣವನ್ನು ಹೇಳಿ ಈ ಹಿಂದೆ 2022 ನೇ ಸಾಲಿನಲ್ಲಿದ್ದ 15% ಮೀಸಲಾತಿ ಪ್ರಮಾಣದಲ್ಲಿ ಉದ್ಯೋಗ ತುಂಬುವಾಗ ನಮ್ಮೊಂದು ಒತ್ತಾಯವಿದೆ. ಈಗಾಗಲೆ ಒಳಮೀಸಲಾತಿ ಜಾರಿಯಾಗಿದೆ. ಪ್ರವರ್ಗ ಎ, ಬಿ, ಸಿ ಎಂದು ಮೂರು ಗುಂಪುಗಳನ್ನಾಗಿ ವಿಂಗಡಿಸಿ ಅದಕ್ಕೆ ರಾಜ್ಯಪಾಲರ ಅಂಕಿತವೂ ಆಗಿದೆ. ಹೀಗಿದ್ದರೂ ಕರ್ನಾಟಕ ಸರ್ಕಾರ ಕೆಲವು ಗೊಂದಲಗಳನ್ನು ಮೂಡಿಸುತ್ತಿದೆ. ಇದಕ್ಕೆ ಅವಕಾಶ ಕೊಡದೆ ಸರಿಯಾದ ತೀರ್ಮಾನವನ್ನು ಮಾಡಬೇಕು.

ಉದ್ಯೋಗವನ್ನು ತುಂಬುವಾಗ 15% ಒಳಗೆ ಒಳಮೀಸಲಾತಿಯನ್ನು ಅಳವಡಿಸಬೇಕು. ಎಂದರು

ಪರಿಶಿಷ್ಟ ಜಾತಿ 2% ಮತ್ತು ಪರಿಶಿಷ್ಟ ಪಂಗಡ 4% ಒಟ್ಟು 6% ಮೀಸಲಿರಿಸಿ ಕೋರ್ಟ್ ಅಂತಿಮ ತೀರ್ಪಿನ ನಂತರ ಆ ಹುದ್ದೆಗಳನ್ನು ಭರ್ತಿ ಮಾಡಬೇಕು. ಇದ-ಕ್ಕೆ ಪೂರಕವಾಗಿ ನಾವು ಸರ್ಕಾರದ ಮೇಲೆ ಒತ್ತಡ ಹಾಕುತ್ತಿದ್ದೇವೆ. ಮೈಸೂರು, ಚಾಮರಾಜನಗರ, ಹಾಸನ, ಮಂಡ್ಯ ಜಿಲ್ಲೆಗಳಲ್ಲಿ ಹೋರಾಟವನ್ನು ನಡೆಸಲು ಚಿಂತನೆ ನಡೆಸಿದ್ದೇವೆ. ಇದರ ಭಾಗವಾಗಿ ಹುಣಸೂರಿನಲ್ಲಿ ಪತ್ರಿಕಾಗೋಷ್ಠಿ ಸಹ ನಡೆಸುತ್ತಿದ್ದೇವೆ. ಮಿಸಲಾತಿ ವಿಚಾರದಲ್ಲಿ ಕೆಲವು ಸುಳ್ಳು ಸುದ್ದಿಗಳನ್ನು ಹರಡಿಸಿ ಗೊಂದಲ ನಿರ್ಮಾಣವಾಗಿದೆ. ಈ ಗೊಂದಲಗಳಿಗೆ ಅಂಕಿ ಅಂಶಗಳನ್ನು ನೀಡುವುದರ ಮೂಲಕ ತೀರ್ಮಾನಿಸುತ್ತೇವೆ. ಇದೇ ರೀತಿ ಗೊಂದಲಗಳನ್ನು ಸರ್ಕಾರ ಮುಂದುವರೆಸಿದ್ದೇ ಆದಲ್ಲಿ ಸರ್ಕಾರಕ್ಕೆ ಭವಿಷ್ಯವಿಲ್ಲವೆಂದು ಈಗಾಗಲೇ ತೀರ್ಮಾನ ಮಾಡಿಕೊಂಡಿದ್ದೇವೆ.

ಸರ್ಕಾರದಲ್ಲಿ ಅಧಿಕಾರದಲ್ಲಿರುವ ರಾಜಕಾರಣಿಗಳು ಯಾವುದೇ ಪದಾಧಿಕಾರಿಗಳು ಪಕ್ಷದಿಂದ ಹೊರಬರಬೇಕು. ಸರ್ಕಾರದ ವಿರುದ್ಧ ಹಂತ ಹಂತವಾಗಿ ಹೋರಾಟ ನಡೆಸಲು ತೀರ್ಮಾನಿಸಿರುತ್ತೇವೆ. ಏಕೆಂದರೆ ಒಳಮೀಸಲಾತಿಯನ್ನು ಯಾವುದೋ ಸರ್ಕಾರ ಕೊಟ್ಟ ಭಿಕ್ಷೆಯಲ್ಲ. ಬಾಬಾ ಸಾಹೇಬರು ಬರೆದುಕೊಟ್ಟಂತಹ ಸಂವಿಧಾನದ ಆಧಾರದ ಮೇಲೆ ಸುಪ್ರೀಂ ಕೋರ್ಟ್ ಒಂದು ತೀರ್ಪನ್ನು ನೀಡಿದೆ. ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳ ಒಳಗೆ ಯಾವ ಜಾತಿಯ ಉಪ ಜಾತಿಗಳು ಹಿಂದುಳಿದಿವೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಸ್ವಾತಂತ್ರ್ಯ ಬಂದ ನಂತರ ನ್ಯಾಯ ಸಿಕ್ಕಿಲ್ಲವೋ ಆ ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕೊಡಲು ಒಳಮೀಸಲಾತಿಯನ್ನು ಜಾರಿ ಮಾಡಲು ಆಯಾ ರಾಜ್ಯ ಸರ್ಕಾರಗಳೇ ತೀರ್ಮಾನ ಮಾಡಬೇಕೆಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಅದರಂತೆ ಕರ್ನಾಟಕದಲ್ಲಿ ವಿಶ್ರಾಂತ ನಾಗಮೋಹನ್ ದಾಸ್ ರವರ ನೇತೃತ್ವದಲ್ಲಿ ನ್ಯಾಯಮೂರ್ತಿಗಳಾದ ಹೆಚ್ ಎನ್ ಆಯೋಗವನ್ನು ರಚನೆ ಮಾಡಿ ವೈಜ್ಞಾನಿಕವಾಗಿ ವರದಿಯನ್ನು ಕೊಟ್ಟಿದ್ದರೂ ಉದ್ದೇಶಪೂರ್ವಕವಾಗಿ ಗೊಂದಲ ಸೃಷ್ಟಿ, ಮಾಡಿ ಸಾಮಾಜಿಕ ನ್ಯಾಯಕ್ಕೆ ವ್ಯತಿರಿಕ್ತವಾದ ನಡೆಗಳು ಕರ್ನಾಟಕದಲ್ಲಿ ನಡೆಯುತ್ತಿವೆ.

ಕರ್ನಾಟಕ ರಾಜ್ಯ ಮೊದಲಿನಿಂದಲೂ ಕೂಡ ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿ ನಡೆದು ಪ್ರಗತಿಯನ್ನು ಸಾಧಿಸಿದೆ. ಭಾರತ ದೇಶವು ಇತರೆ ರಾಜ್ಯಗಳಿಗೆ ಹೋಲಿಕೆ ಮಾಡಿಕೊಂಡರೆ ಬಂದು ಹೋದಂತಹ ನಾಯಕರು ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದಾರೆ. ಹಾಗೆಯೇ ಕರ್ನಾಟಕ ಸರ್ಕಾರ ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿ ಮೀಸಲಾತಿಯನ್ನು ಇದ್ದಂತಹ ಹಿಂದೆ ನಡೆದುಕೊಂಡಿದೆ. ಅಳವಡಿಸುವುದಾದರೆ ಪರಿಶಿಷ್ಟ ಜಾತಿ ಉಪಜಾತಿಗೆ ಅನ್ಯಾಯವಾಗುವುದರ ಜೊತೆಗೆ ಪರಿಶಿಷ್ಟ ಪಂಗಡದ ಜಾತಿಗಳಿಗೆ ದೊಡ್ಡಮಟ್ಟದ ಅನ್ಯಾಯವಾಗುತ್ತದೆ. ಈ ವಿಚಾರವಾಗಿ ಪರಿಶಿಷ್ಟ ಜಾತಿಯ ಪಂಗಡದ ನಾಯಕರು ಕೂಡ ಮಾತನಾಡಿದ್ದಾರೆ. ಮುಂದಿನ ದಿನಗಳಲ್ಲಿ ದೊಡ್ಡಮಟ್ಟದ ಹೋರಾಟವು ನಡೆಯಲಿದೆ. ಒಳಮೀಸಲಾತಿ ಜಾರಿಯಾಗಿದೆ. ರಾಜ್ಯಪಾಲರು ಸಹಿ ಹಾಕಿದ್ದಾರೆ. ಸರ್ಕಾರದ ತೀರ್ಮಾನದಂತೆ ಪ್ರವರ್ಗ ಎ, ಬಿ, ಸಿ ಎಂದು ಗುಂಪುಗಳಾಗಿದೆ.


ಪತ್ರಿಕಾಗೋಷ್ಠಿಯಲ್ಲಿ ಮಾದಿಗ ಹೋರಾಟ ಸಮಿತಿಯ ಅದ್ಯಕ್ಷ ಪರಶುರಾಮ, ಪ್ರ.ಕಾ.ಬೆಳ್ತೂರು ವೆಂಕಟೇಶ್, ಮುಖಂಡ ಶಿವರಾಮು ಹಾಜರಿದ್ದರು

# ಬಣ್ಣಗಳ ಹಬ್ಬ ಹೋಳಿ ಆಚರಣೆ

• ಮಲ್ಲಮ್ಮ ನುಡಿ ವಾರ್ತೆ ಕಮಲನಗರ

ಪಟ್ಟಣದಲ್ಲಿ ಬಣ್ಣಗಳ ಹಬ್ಬ ಹೋಳಿ ಹುಣ್ಣಿಮೆಯನ್ನು ಅತ್ಯಂತ ಸಡಗರ–ಸಂಭ್ರಮದಿಂದ ಆಚರಿಸಲಾಯಿತು. ಹಿರಿಯರು ಹಾಗೂ ಕಿರಿಯರು ಪರಸ್ಪರ ಬಣ್ಣ ಹಚ್ಚುವ ಮೂಲಕ ಹಬ್ಬದ ಶುಭಾಶಯ ವಿನಿಮಯ ಮಾಡಿಕೊಂಡರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಬಣ್ಣದ ಓಕುಳಿ ಆಡುತ್ತಾ ಸಾರ್ವಜನಿಕರು ಹರ್ಷ ವ್ಯಕ್ತಪಡಿಸಿದರು. ಹಿರಿಯ ಉದ್ಯಮಿಗಳಾದ ರಾಜಕುಮಾರ ಶಿವಣಕರ ಹಾಗೂ ಯುವ ಮುಖಂಡರಾದ ಮಹೇಶ ರಾಂಪುರೆ ಅವರು ಪರಸ್ಪರ ಬಣ್ಣ ಹಚ್ಚಿ, ಹಬ್ಬದ ಸಂಭ್ರಮವನ್ನು ಹಂಚಿಕೊಂಡರು. ಈ ಬಣ್ಣಗಳ ಹಬ್ಬವು ಜನರ ನಡುವೆ ಪ್ರೀತಿ ಮತ್ತು ಸಹೋದರತ್ವವನ್ನು ಹೆಚ್ಚಿಸಲಿ ಎಂದು ಗಣ್ಯರು ಹಾರೈಸಿದರು. ಬಣ್ಣಗಳ ಹಬ್ಬ ಹೋಳಿ, ಕಮಲನಗರದ ಜನರಲ್ಲಿ ಹೊಸ ಕಳೆ ತಂದಿತು.




**ಬಳ್ಳಾರಿ ಜಿಲ್ಲೆ ಕಂಪ್ಲಿ ತಾಲೂಕಿನ ನಿವೇದಿತ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮುಖ್ಯ ಗುರುಗಳಾದ ಹೆಚ್ಚು ಮರಿಯಪ್ಪ ಅವರು ಪ್ರತಿ ದಿನ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ಅತ್ಯುತ್ತಮವಾಗಿ ಸುದ್ದಿಗಳು ಪ್ರಸಾರ ಆಗುತ್ತಿರುವ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ಪತ್ರಿಕೆಗೆ ನಿವೇದಿತ ಆಂಗ್ಲ ಮಾಧ್ಯಮ ಪ್ರೌಢಶಾಲೆ ಮುಖ್ಯ ಗುರುಗಳು ಹೆಚ್ಚು ಮರಿಯಪ್ಪ ಅವರು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.**

# ಕಾರ್ಮಿಕ ಕಾರ್ಡ್ ವಿಳಂಬ ಅಂಗಡಿ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ



ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸ್ಮಾರ್ಟ್ ಕಾರ್ಡ್ ವಿತರಣೆಯಲ್ಲಿನ ವಿಳಂಬ ನೀತಿಯ ವಿರುದ್ಧ ನಮ್ಮ ಕರ್ನಾಟಕ ಸೇನೆಯ ಕಾರ್ಮಿಕ ಘಟಕದ ಅಧ್ಯಕ್ಷ ಗುರುರಾಜ ಎಸ್. ಅಂಗಡಿ ತೀವ್ರ ಕಿಡಿಕಾರಿದ್ದಾರೆ.

ವರ್ಷಗಳೇ ಕಳೆದರೂ ಬಡ ಕಾರ್ಮಿಕರಿಗೆ ಸ್ಮಾರ್ಟ್ ಕಾರ್ಡ್ ನೀಡದೆ ಅಧಿಕಾರಿಗಳು ಸತಾಯಿಸುತ್ತಿದ್ದಾರೆ.

ಮಾಹಿತಿ ಕೇಳಲು ಹೋದರೆ ಹಳ್ಳಿಗಾಡಿನ ಕಾರ್ಮಿಕರ ಜೊತೆ ಅಧಿಕಾರಿಗಳು ಉದ್ಧಟತನದಿಂದ ವರ್ತಿಸುತ್ತಿದ್ದಾರೆ. ಅರ್ಹ ಫಲಾನುಭವಿಗಳಿಗೆ ಸರ್ಕಾರದ ಶೈಕ್ಷಣಿಕ ಹಾಗೂ ವೈದ್ಯಕೀಯ ಸೌಲಭ್ಯಗಳು ತಲುಪುತ್ತಿಲ್ಲ. ಒಂದು ವಾರದೊಳಗೆ ಸಮಸ್ಯೆ ಬಗೆಹರಿಯದಿದ್ದರೆ ಕೆಂಭಾವಿ ಬಂದ್ ಮಾಡಿ, ಕಾರ್ಮಿಕ ಇಲಾಖೆ ಕಚೇರಿಗೆ ಬೀಗ ಜಡಿಯಲಾಗುವುದು," ಎಂದು ಗುರುರಾಜ ಎಸ್. ಅಂಗಡಿ ಎಚ್ಚರಿಕೆ ನೀಡಿದ್ದಾರೆ.

# ಆಕ್ಷೇಪಣೆಗೆ ಅರ್ಜಿ ಆಹ್ವಾನ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

2022ರಲ್ಲಿ ಪ್ರಥಮ ಮುದ್ರಣಗೊಂಡು ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಪಟ್ಟಿಯನ್ನು ಇಲಾಖೆ ಅಧಿಕೃತ ವೆಬ್ ಸೈಟ್ ಜಠಿಟ.ಇಚಿಡಿಟಿಚಿಣಚಿಞಚಿ.ರಠತ.ಟಿ ನಲ್ಲಿ ದಿನಾಂಕ: 02–03–2026 ರಂದು ಪ್ರಕಟಿಸಲಾಗಿದೆ.

ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ ಪುಸ್ತಕಗಳ ಲೇಖಕರು, ಲೇಖಕ–ಪ್ರಕಾಶಕರು, ಪ್ರಕಾಶಕರು ಮತ್ತು ಪುಸ್ತಕ ಮಾರಾಟಗಾರರ ಪುಸ್ತಕಗಳಲ್ಲಿ ಶೀರ್ಷಿಕೆ, ಲೇಖಕರ ಹೆಸರು, ಪ್ರಕಾಶಕರ ಹೆಸರು, ಮುಖಬೆಲೆ ಮತ್ತು ನಿಗದಿತ ಬೆಲೆಯಲ್ಲಿ ಹೆಚ್ಚು ಅಥವಾ ಕಡಿಮೆಯಾಗಿದ್ದಲ್ಲಿ, ಪುಸ್ತಕದ ಅಳತೆ, ಪುಟಸಂಖ್ಯೆ ಹಾಗೂ ಇತರೆ ಯಾವುದೇ ತಾಂತ್ರಿಕ ವ್ಯತ್ಯಾಸಗಳಿದ್ದಲ್ಲಿ ಅಧಿಕೃತ ಮಾಹಿತಿ/ದಾಖಲಾತಿಗಳೊಂದಿಗೆ ದಿನಾಂಕ: 16–03–2026ರ ಸಂಜೆ 5.30ರೊಳಗಾಗಿ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ.ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರಿಗೆ ಲಿಖಿತವಾಗಿ ಆಕ್ಷೇಪಣೆ ಸಲ್ಲಿಸಬಹುದು. ನಿಗದಿತ ಅವಧಿಯ ನಂತರ ಬರುವ ಮನವಿಯನ್ನು ಪರಿಗಣಿಸಲಾಗುವುದಿಲ್ಲ. ಮತ್ತು ಏಕಪಕ್ಷೀಯವಾಗಿ ನಿರ್ಣಯ ಕೈಗೊಳ್ಳಲಾಗುವುದು ಎಂದು ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಆಯುಕ್ತರು ತಿಳಿಸಿದ್ದಾರೆ ಎಂದು ಜಿಲ್ಲಾ ಕೇಂದ್ರ ಗ್ರಂಥಾಲಯದ ಮುಖ್ಯ ಗ್ರಂಥಾಲಯಾಧಿಕಾರಿಗಳಾದ ಸಿದ್ಧಾರ್ಥ ಎ.ಭಾವಿಕಟ್ಟೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಭಕ್ತರ ಆಸೆಯಂತೆ ಸಾಯಿಬಾಬರ ಮೂರ್ತಿ ಪ್ರತಿಷ್ಠಾಪನೆ : ವಿಜಯಕುಮಾರ ದೇಸಾಯಿ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ

ಯಲಬುರ್ಗಾ ಅಗಾಧಶಕ್ತಿಯನ್ನು ಹೊಂದಿರುವ ಅಸಾಮನ್ಯ ದೈವಿ ಸ್ವರೂಪಿಯಾದ ಶಿರಡಿ ಸಾಯಿಬಾಬರವರ ಮೂರ್ತಿಯನ್ನು ಶೀಘ್ರದಲ್ಲಿಯೆ ಪ್ರತಿಷ್ಠಾಪನೆಯನ್ನು ಮಾಡಲಾಗುವುದು ಎಂದು ಸಾಯಿಮಂದಿರದ ಮುಖ್ಯಸ್ಥರು ಹಾಗೂ ಬೆಂಗಳೂರಿನ ಮುಖ್ಯ ನ್ಯಾಯಾಲಯದ ನ್ಯಾಯವಾದಿಗಳಾದ ವಿಜಯಕುಮಾರ ದೇಸಾಯಿರವರು ಹೇಳಿದರು.

ಪಟ್ಟಣದ ಸಾಯಿ ಧ್ಯಾನ ಮಂದಿರದಲ್ಲಿ ಆಯೋಜಿಸಿದ ಎಂಟನೇ ವಾರ್ಷಿಕೋತ್ಸವದಲ್ಲಿ ಭಾಗಿಯಾಗಿ ಮಾತನಾಡಿದ ಅವರು ಈಗಾಗಲೆ ಜೈಪುರದಲ್ಲಿ ಸಾಯಿ ಬಾಬಾರವರ ಮೂರ್ತಿಯನ್ನು ಮಾಡಲು ಹಾಕಲಾಗಿದೆ ಆ ದಿವ್ಯಮೂರ್ತಿಯನ್ನು ಇನ್ನು ನಾಲ್ಕು ತಿಂಗಳದ ಒಳಗಡೆ ಮಂದಿರದಲ್ಲಿ ಸ್ಥಾಪಿಸಲು ಭಕ್ತಾದಿಗಳ ಸಲಹೆಯಂತೆ ಕ್ರಮಕೈಗೊಳ್ಳಲಾಗಿದೆ ಎಂದೆನ್ನುತ್ತಾ ಯಾರು ತಮ್ಮ ಮೇಲೆ ನಂಬಿಕೆಯನ್ನು ಇಟ್ಟು–ಕೊಂಡಿರುತ್ತಾರೆಯೋ ಅವರಿಗೆ ದೇವರು ಇದ್ದಾನೆ ಯಾರಿಗೂ ತಮ್ಮ ಮೇಲೆ ನಂಬಿಕೆ ಇಲ್ಲವೋ ಅವರಿಗೆ ದೇವರು ಪ್ರತ್ಯಕ್ಷನಾಗುವದಿಲ್ಲ ಎಂದೆನ್ನುತ್ತಾ ತಂದೆಯರು ಹಾಗೂ ನಿ. ನ್ಯಾಯಧೀಶರಾದ ಮಹಿಪಾಲ ದೇಸಾಯಿರವರು ಬಾಬರವರ ಪರಮ ಭಕ್ತರು ಆಗಿದ್ದರು ಈಗಾಗಲೆ ಪಟ್ಟಣದಲ್ಲಿ ಧ್ಯಾನಮಂದಿರ ಅವರ ಜೀವಿತ ಕಾಲಾವಧಿಯಲ್ಲಿಯೆ ನಿರ್ಮಾಣವಾಗಿದೆ ಅದಕ್ಕೆ ಪಟ್ಟಣದ ಜನತೆ ಸಹಕಾರ ನೀಡಿದಂತೆ ಮೂರ್ತಿ ಪ್ರತಿಷ್ಠಾಪನೆಗೂ ಸಹಕರಿಸುವಂತೆ ಕರೆ ನೀಡಿದರು.

ಹಿರಿಯ ನ್ಯಾಯವಾದಿಗಳಾದ ಬಿ.ಎಂ.ಶಿರೂರ ವರ್ತಕರಾದ ಸಂಗಣ್ಣ ಟೆಂಗಿನಕಾಯಿ ಮಲ್ಲಿಕಾರ್ಜುನ ಉಳ್ಳಾಗಡ್ಡಿ ವೀರಣ್ಣ ನಿಂಗೋಜಿ ಇನ್ನಿತರರು ಮಾತನಾಡಿ ಬಾಬರವರ ಹಲವು ಮಹಿಮೆಗಳನ್ನು ಕೊಂಡಾಡಿದರು.

ಜಿ.ಪಂ. ಮಾಜಿ ಉಪಾಧ್ಯಕ್ಷ ಶಿವಶಂಕರರಾವ ದೇಸಾಯಿ ಗಿರಿಜಾದೇವಿ ದೇಸಾಯಿ ಅನುಸೂಯಾ ಟೆಂಗಿನಕಾಯಿ ಬಸವಲಿಂಗಪ್ಪ ಭೂತೆ ಶರಣಕುಮಾರ ಅಮರಗಟ್ಟಿ ಮುದಕಪ್ಪ ಗಾ–ಣಗೇರ ಎಂ.ಎಫ್.ನಡಾಫ್ ವೀರನಗೌಡ ಪಾಟೀಲ ! ಫಕೀರಪ್ಪ ಕಜ್ಜಿ ಶಶಿದರ ಪಾಟೀಲ !ಸಿದ್ಧಪ್ಪ ಕಟ್ಟಿಮನಿ ವೆಂಕಣ್ಣ ಮುಕ್ತೆದಾರ !ಮಲ್ಲಪ್ಪ ಮಡಿವಾಳರ ಸಾಲಿಮಠ ಹಡಪದ ಹಾಗೂ ಅನೇಕ ನ್ಯಾಯವಾದಿಗಳು ಪತ್ರಕರ್ತರು ಕೆಪಿಟಿಸಿಎಲ್. ನೌಕರರು ಭಕ್ತವ್ರಂದದವರು ನೂರಾರು ಮಹಿಳೆಯರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ವಿಶೇಷಪೂಜೆ ಹಾಗೂ ಧಾರ್ಮಿಕ ಬೋಧನೆಯನ್ನು ಅರ್ಚಕರು ನಡೆಸಿಕೊಟ್ಟರು. ನಂತರ ಎಲ್ಲರೂ ಸಹ ಭೋಜನವನ್ನು ಸ್ವೀಕರಿಸಿದರು.

# ಸತ್ಪ್ರಜೆಗಳಾಗಲು ಸೇವಾ ಮನೋಭಾವ ಅಗತ್ಯ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಶಿಬಿರಾರ್ಥಿಗಳು ಶಿಸ್ತು, ಸಂಯಮ, ಸಮಯ ಪ್ರಜ್ಞೆ, ಆತ್ಮವಿಶ್ವಾಸ, ಸೇವಾ ಮನೋಭಾವ ಬೆಳೆಸಿಕೊಂಡು ಮಾದರಿ ವ್ಯಕ್ತಿಯಾಗಿ ಸಮಾಜದ ಶಕ್ತಿಯಾಗಬೇಕು ಎಂದು ಯುವ ಮುಖಂಡ ಆದಿತ್ಯಗೌಡ ಪೋಲೀಸ್ ಪಾಟೀಲ್ ಹೇಳಿದರು.

ಪಟ್ಟಣದ ಶ್ರೀಮತಿ ಗಂಗೂಬಾಯಿ ಶಾಂತಗೌಡ ಪೋಲೀಸ್ ಪಾಟೀಲ್ ಮೆಮೋರಿಯಲ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ

ಯೋಜನಾ ಘಟಕ ಹಾಗೂ ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ ರಾಯಚೂರು ಸಂಯುಕ್ತ ಆಶ್ರಯದಲ್ಲಿ ಗುರುವಾರ

ಪಟ್ಟಣದ ಬಸವನಗರ ಕೋರಿಸಿದ್ದೇಶ್ವರ ಪುಣ್ಯಾಶ್ರಮದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು ಪಠ್ಯದ ಜೊತೆಗೆ

ಪಠ್ಯೇತರ ಚಟುವಟಿಕೆಗಳು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾಗಿದ್ದು. ಏಳು ದಿನಗಳ ಕಾಲ ನಡೆಯುವ ಈ ವಿಶೇಷ ಶಿಬಿರದ ಸದುಪಯೋಗ ನಡೆಸಿಕೊಂಡು ಸತ್ಪ್ರಜೆಗಳಾಗುವಂತೆ ಕರೆ ನೀಡಿದರು.

ಮಹಿಪಾಲರಡ್ಡಿ ಡಿಗ್ಗಾವಿ ಎನ್ ಎಸ್ ಎಸ್ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು. ಕೋರಿಸಿದ್ದೇಶ್ವರ ಪುಣ್ಯಾಶ್ರಮದ ಅರ್ಚಕ

ಬೀರಪ್ಪ ಪೂಜಾರಿ ಸಾನ್ನಿಧ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಾಪುಗೌಡ ಪೋಲೀಸ್ ಪಾಟೀಲ್, ಪ್ರಧಾನಪ್ಪ ಪೂಜಾರಿ, ಪುರಸಭೆ ಸದಸ್ಯ ಶರಣಪ್ಪ ಯಾಳಗಿ ಭಾಗವಹಿಸಿದ್ದರು.

ಪ್ರಾಂಶುಪಾಲ ಡಾ ನಾಗಪ್ಪ ಚಾವಲ್ಕರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಎನ್ ಎಸ್ ಎಸ್ ಅಧಿಕಾರಿ ಡಾ ಸಿದ್ದಲಿಂಗ ರಾಠೋಡ್ ಪ್ರಾಸ್ತಾವಿಕ ಮಾತನಾಡಿದರು, ಮಲ್ಲಣ್ಣ ಬಿಳೆಬಾವಿ ಸ್ವಾಗತಿಸಿದರು ಮಲ್ಲಿಕಾರ್ಜುನ ಮರಡ್ಡಿ ನಿರೂಪಿಸಿದರು, ಶಶಿಕುಮಾರ ಎತ್ತಿನಮನಿ ವಂದಿಸಿದ. ಕಾಲೇಜಿನ ಬೋಧಕ ಮತ್ತು ಬೋಧ–ಕೇತರ ಸಿಬ್ಬಂದಿಗಳು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

# ಆರ್‌ವೈಎಂಇ ಕಾಲೇಜಿನಲ್ಲಿ ಉದ್ಯೋಗ ಮೇಳ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ




ಬಳ್ಳಾರಿಯ ರಾವ್ ಬಹದ್ದೂರ್ ವೈ ಮಹಬಲೇಶ್ವರಪ್ಪ ತಾಂತಿಕ ಮಹಾವಿದ್ಯಾಲಯದಲ್ಲಿ (ಲರ್ನಿಂಗ್ ಲಿಂಕ್ಸ್ ಫೌಂಡೇಶನ್, ನ್ಯೂ ಡೆಲ್ಲಿ,) (ಐಬಿಎಂ ಸ್ಕಿಲ್ಸ್ ಬಿಲ್ಡ್) ಇವರುಗಳ ಬೆಂಬಲದೊಂದಿಗೆ ನಾಳೆ ಉದ್ಯೋಗ ಮೇಳವನ್ನು ಹಮ್ಮಿಕೊಂಡಿರುತ್ತಾರೆ.

ಈ ಉದ್ಯೋಗ ಮೇಳದಲ್ಲಿ ಸುಮಾರು 10+ ಕಂಪನಿಗಳು ಭಾಗವಹಿಸಲಿದ್ದು, 700+ ಉದ್ಯೋಗ ನೀಡಲು ಸಂದರ್ಶನವನ್ನು ನಡೆಸಲು ಉದ್ದೇಶಿಸಿದ್ದು, ಸದರಿ ಸುವರ್ಣಾವಕಾಶವನ್ನು ಉಪಯೋಗಿಸಿಕೊಳ್ಳಲು ಕೋರಲಾಗಿದೆ, ವೀರಶೈವ ವಿದ್ಯಾವರ್ಧಕ ಸಂಘದ ಆಡಳಿತಕ್ಕೊಳಪಟ್ಟ ಎಲ್ಲಾ ಪದವಿ ಕಾಲೇಜುಗಳ 2024 ಮತ್ತು 2025 ನೇ ಸಾಲಿನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಮತ್ತು ಪ್ರಸುತ್ತ 2026 ನೇ ಸಾಲಿನ ಆಸಕ್ತ ವಿದ್ಯಾರ್ಥಿಗಳನ್ನು ನಾಳೆ ನಡೆಯುವ ಉದ್ಯೋಗ ಸಂದರ್ಶನ ಮೇಳದಲ್ಲಿ ಭಾಗವಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಕಾಲೇಜ್ ನ ಕಛೇರಿಯನ್ನು ಸಂಪರ್ಕಿಸಲು ಮನವಿ.

# ಮಾದಾಪುರದ ಗೋಪಾಲ್ ಮರ್ಡರ್ ನಾಲ್ವರ ಬಂಧನ



• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ತಾಲೂಕಿನ ಕುಡುತಿನಿ ಪೊಲೀಸ್ ಠಾಣಾ ಸರಹದ್ದಿನ ಹಳೇ ಮಾದಾಪುರ ಗ್ರಾಮದ, ಗಾದಿ ಲಿಂಗಪ್ಪನ ಹೊಲದ ಕಾಲುವೆಯಲ್ಲಿ ಹೆಚ್.ಗೋಪಾಲ್ (42) ಎಂಬುವವರ ತಲೆಗೆ ಬಲವಾಗಿ ಹೊಡೆದು ಮಾ.1 ರಂದು ಕೊಲೆಮಾಡಲಾಗಿತ್ತು. ಸ್ಥಳಕ್ಕೆ ಭೇಟಿ ನೀಡಿ. ಕೊಲೆ ಪ್ರಕರಣವನ್ನು ತ್ವರಿತವಾಗಿ ಪತ್ತೆ ಹಚ್ಚುವಂತೆ ಎಸ್ಪಿ ಡಾ.ಸುಮನ್ ಡಿ.ಪಿ ಅವರು ಕುರುಗೋಡು ಠಾಣೆಯ ತನಿಖಾಧಿಕಾರಿ ಬಾಳನಗೌಡ ಮಾನ ಶೆಟ್ಟರ್ ಅವರಿಗೆ ಸೂಚಿಸಿದ್ದರು.

ಈ ಪ್ರಕರಣದಲ್ಲಿ ಸಂಡೂರು ತಾಲೂಕಿನ ಹಳೇ ಮಾದಾಪುರ ಗ್ರಾಮದ ಗೋವಿಂದ (50) ಈತನ ಪತ್ನಿ ಅಂಬಮ್ಮ(40), ಮಕ್ಕಳಾದ ಪ್ರಜ್ವಲ್ (20) ವರ್ಷ, ರಮೇಶ್ (22) ಬಂಧಿಸಲಾಗಿದೆ.

ಆರೋಪಿಗಳು ವಿಚಾರಣೆ ಸಮಯದಲ್ಲಿ ಫೆ.28 ರಂದು ರಾತ್ರಿ ಕೊಲೆಯಾದ ಹೆಚ್.ಗೋಪಾಲನು ಆರೋಪಿತರ ಮನೆ ಹತ್ತಿರ ಬಂದು, ಆರೋಪಿತರ ಮನೆಯ ಬಾಗಿಲು ಬಡಿದು ಅಂಬಮ್ಮಳನ್ನು ತನ್ನೊಂದಿಗೆ ಫೋನ್ನಲ್ಲಿ ಮಾತನಾಡಲು ಹೇಳುವಂತೆ ಹಾಗೂ ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಆಗ ಆರೋಪಿಗಳು ಮತ್ತು ಕೊಲೆಯಾದ ವ್ಯಕ್ತಿಯ ನಡುವೆ ಜಗಳ ನಡೆದಿರುತ್ತದೆ. ಈ ವೇಳೆ ಗೋವಿಂದನು, ಗೋಪಾಲನಿಗೆ ಮಚ್ಚಿನಿಂದ ತೆಲೆಗೆ ಹೊಡೆದಿದ್ದು, ಇದರಿಂದ ಗೋಪಾಲನು ಮೃತಪಟ್ಟಿರುತ್ತಾನೆ. ನಂತರ ಆರೋಪಿಗಳು ಮೃತ ಗೋಪಾಲನ ಶವವನ್ನು ಗಾದಿ ಲಿಂಗಪ್ಪನ ಹೊಲದ ಕಾಲುವೆಯಲ್ಲಿ ಬಿಸಾಡಿ ಪರಾರಿಯಾಗಿರುವುದಾಗಿ ಹೇಳಿದ್ದಾರೆಂದು ಎಸ್ಪಿ ಕಚೇರಿ ಪ್ರಕಟಣೆ ತಿಳಿಸಿದೆ.

# ಶಾಲಾ ಮಕ್ಕಳಿಗೆ ಪೊಲೀಸ್ ಠಾಣೆಯಲ್ಲಿ ಮಾಹಿತಿ



• ಮಲ್ಲಮ್ಮ ನುಡಿ ವಾರ್ತೆ ಬಸವನಬಾಗೇವಾಡಿ

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪಟ್ಟಣದ ಶ್ರೀ ಬಸವೇಶ್ವರ ಅಂತರಾಷ್ಟ್ರೀಯ ಶಾಲಾ ಮಕ್ಕಳಿಗೆ ತೆರೆದ ಮನೆ ಕಾರ್ಯಕ್ರಮದ ಅಡಿಯಲ್ಲಿ ಪೊಲೀಸ್ ಠಾಣೆ ಹಾಗೂ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಸಿಬ್ಬಂದಿಗಳ ಕರ್ತವ್ಯದ ಬಗ್ಗೆ ಕಾನೂನು ಸುವ್ಯವಸ್ಥೆ, ಅಪರಾಧ, ತನಿಖೆ, ಸೈಬರ್ ಕ್ರೈಂ, ಸೋಶಿಯಲ್ ಮೀಡಿಯಾದಿಂದ ಆಗುವ ಉಪಯೋಗಗಳು ಹಾಗೂ ದುಷ್ಪರಿಣಾಮಗಳು ಅಪಘಾತಗಳ ಬಗ್ಗೆ, ಪೊಲೀಸ್ ಠಾಣೆ ಹಾಗೂ ಕೋರ್ಟ್ ನಡುವಿನ ಸಂಬಂಧಗಳ ಬಗ್ಗೆ, ಮಹಿಳಾ ಮತ್ತು ಮಕ್ಕಳ ಬಗ್ಗೆ, ಮಾದಕ ದ್ರವ್ಯಗಳ ಬಗ್ಗೆ, ಹೀಗೆ ಹಲವಾರು ವಿಷಯಗಳ ಬಗ್ಗೆ ಮಕ್ಕಳಿಗೆ ಅಲ್ಲಿಯ ಸಿಬ್ಬಂದಿಗಳು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಶಿಕ್ಷಕರಾದ ಮಹೇಶ್ ಸಂಗಮ, ಸಂಗಮೇಶ್ ವಂದಾಲ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಮಲಿಂಗೇಶ್ವರ ಜಾತ್ರೆ: ಕುಂಭ ಮೆರವಣಿಗೆ



• ಮಲ್ಲಮ್ಮ ನುಡಿ ವಾರ್ತೆ ಮುದಗಲ್

ಕಿಲ್ಲಾದಲ್ಲಿರುವ ಐತಿಹಾಸಿಕ ಶ್ರೀ ರಾಮಲಿಂಗೇಶ್ವರ ಜಾತ್ರೆ ಹಾಗೂ ಶ್ರೀಶೈಲ ಪಾದಯಾತ್ರೆ ಹೋಗುತ್ತಿರುವ ಭಕ್ತರಿಗೆ ಅನ್ನದಾಸೋಹ ಅಂಗವಾಗಿ ಮಹಿಳೆಯರಿಂದ ಕಳಸ ಕುಂಭಗಳ ಮೆರವಣಿಗೆ ಗುರುವಾರ ಜರುಗಿತು.

ಪಟ್ಟಣದ ಕುಂಬಾರಪೇಟೆಯ ಬಸವೇಶ್ವರ ದೇವಸ್ಥಾನದಿಂದ ಪಟ್ಟಣದ ವಿವಿಧ ಬೀದಿಗಳಲ್ಲಿ ರಾಮಲಿಂಗೇಶ್ವರ ದೇವರ ಕಳಸದ ಮೆರವಣಿಗೆ ನಡೆಯಿತು. ವಿವಿಧ ವಾದ್ಯಮೇಳ ಸಮೇತ ಸಂಭ್ರಮದ 301 ಕುಂಭ ಮೆರವಣಿಗೆ ಸಿಂದಗಿ ತಾಲೂಕು ಕೊರವರ ಗ್ರಾಮದ ತಂಡದಿಂದ ಹಲಗಿ ವಾದ್ಯ ಜರುಗಿತು. ದೇವಸ್ಥಾನದಲ್ಲಿ ಶ್ರೀ ರಾಮಲಿಂಗೇಶ್ವರ ದೇವರಿಗೆ ವಿವಿಧ ಧಾರ್ಮಿಕ ಪೂಜಾ ವಿಧಿ ವಿಧಾನಗಳು ರುದ್ರಾಭಿಷೇಕ, ಬಿಲ್ವಾರ್ಚನೆಯ ಕೈ ಕರ್ಯಗಳು ಜರುಗಿದವು.

ರಾಮಲಿಂಗೇಶ್ವರ ದೇವಾಲಯ ಸಮಿತಿಯಿಂದ ಲಕ್ಷಾಂತರ ಶ್ರೀಶೈಲ ಪಾದಯಾತ್ರೆ ಅನ್ನ ದಾಸೋಹ, ವೈದ್ಯಕೀಯ ಸೇವೆ ನೆರವೇರಿಸಿದರು. ಸುರೇಂದ್ರಗೌಡ ಪಾಟೀಲ್, ಶಿವಪ್ಪ ಸುಂಕದ, ಲಿಂಗಪ್ಪ ಹಣಗಿ, ಅನಿಲ್ ಬುಶೆಟ್ಟಿ, ಮಹೇಶ ವಸ್ತ್ರದ, ಉದಯ ಕುಮಾರ ಕಂಬಾರ, ಶರಣಪ್ಪ ಅಂಗಡಿ, ವಾಸುದೇವ ಸುರಪುರ, ಬಸವರಾಜ ಉಪ್ಪಾರ, ಮಲ್ಲಪ್ಪ ಮಾಟೂರ, ಸಂಗಮೇಶ ಫೋ–ಟೋ ಸ್ಟುಡಿಯೋ, ಶ್ರೀಕಾಂತಗೌಡ ಪಾಟೀಲ್, ಬಸವರಾಜ ಬಳಿಗೇರ, ಶಶಿಕಲಾ ಭೋವಿ, ತೋಟಮ್ಮ, ಗಂಗಮ್ಮ ಜೆರಕಲ್, ವಿಲಾಸ ಬುಶೆಟ್ಟಿ, ಜಯಮ್ಮ, ಪ್ರಮೀಳಾ, ನಿರ್ಮಲ, ವಿಜಯ ಲಕ್ಷ್ಮೀ, ರುದ್ರಮ್ಮ ಸೇರಿದಂತೆ ಇತರರಿದ್ದರು.

# ವೈಜ್ಞಾನಿಕ ಪ್ರಕಾರ ಉದ್ಯೋಗ ನೇಮಕ ಮಾಡಿ ಗಿರಿಜಾಲಿ ಒತ್ತಾಯ

• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಒಳಮೀಸಲಾತಿ ಜಾರಿ ಅನ್ವಯ ಸರ್ಕಾರ ಇವತ್ತೇನು ಉದ್ಯೋಗಗಳು ನೇಮಕ ಮಾಡಬೇಕೆಂದು ಒಕ್ಕೂಟದ ವತಿಯಿಂದ ಸರ್ಕಾರಕ್ಕೆ ಮನವಿ ಮಾಡುತ್ತೇವೆ. ಎಂದು ತಾಲೂಕು ಮಾದಿಗ ಮಹಾ ಮಹಾಸಭಾದ ತಾಲೂಕು ಅಧ್ಯಕ್ಷರಾದ ಅಮರೇಶ ಗಿರಿಜಾಲಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದರು ಸುಮಾರು 35 ವರ್ಷಗಳ ಕಾಲ ಸುದೀರ್ಘವಾಗಿ ಮಾದಿಗ ಮಹಾ ಮಹಾಸಭಾದಿಂದ ಹಿರಿಯರು ಯುವಕರು ಬುದ್ದಿಜೀವಿಗಳು ಸೇರಿ ಒಳ ಮೀಸಲಾತಿ ಜಾರಿಗಾಗಿ ಹೋರಾಟವನ್ನು ಮಾಡಿ ತಮ್ಮ ಪ್ರಾಣವನ್ನು ಕೊಟ್ಟವರನ್ನು ನೆನಪಿಸುತ್ತವೆ. ಎಂದು ಹೇಳಿದರು

ಒಳಮೀಸಲಾತಿಗಾಗಿ ಹಲವಾರು ಹೋರಾಟಗಳು ಸಮಾವೇಶಗಳು ಪಾದಯಾತ್ರೆ ಸಿಂಧನೂರು ತಾಲೂಕು ಜಿಲ್ಲಾ ಕೇಂದ್ರ ರಾಜ್ಯಗಳಲ್ಲಿ ಬಂದ್ ಮಾಡಿ ದೊಡ್ಡ ಹೋರಾಟಗಳನ್ನು ಮಾಡುತ್ತಾ ಬಂದಿದೆ.

ಈ ಹಿನ್ನೆಲೆಯಲ್ಲಿ ಒಳ ಮೀಸಲಾತಿ ಜಾರಿಯಾದರೆ ನಮ್ಮ ಸಮುದಾಯದ ಶೈಕ್ಷಣಿಕವಾಗಿ ಸಾಮಾಜಿಕ ಆರ್ಥಿಕವಾಗಿ ಮುಂದೆ ಬರುವುದಕ್ಕೆ ಸಾಧ್ಯವಾಗುತ್ತದೆ. 35 ವರ್ಷಗಳ ಕಾಲ ಸುದೀರ್ಘವಾಗಿ ಹೋರಾಟವನ್ನು ಮಾಡುತ್ತಾ ಬಂದಿದ್ದೇವೆ. ಆ ನಿಟ್ಟಿನಲ್ಲಿ ಸುಪ್ರೀಂ ಕೋರ್ಟ್ ಆಗಸ್ಟ್ 01–8–2024ರಂದು ಅಹಾ ರಾಜ್ಯಗಳ ಸರ್ಕಾರಗಳೇ ಜಾರಿಗೆ ಮಾಡಬೇಕೆಂದು ಆದೇಶ ನೀಡಿತ್ತು. ಅದರಂತೆ ರಾಜ್ಯಗಳ ಜಾರಿಯಾಗಿ ಉದ್ಯೋಗದಲ್ಲಿ ಕಾರ್ಯ ಚಟುವಟಿಕೆಗಳು ನಡೆದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ.




ಆದರೆ ಸಿದ್ದರಾಮಯ್ಯ ಡಿ. ಕೆ.ಶಿವಕುಮಾರ್ ನೇತೃತ್ವದ ಸರ್ಕಾರ ಇದನ್ನು ಲೆಕ್ಕಿಸದೆ 56.432 ಉದ್ಯೋಗವನ್ನು ನೇಮಕ ಮಾಡುವುದಕ್ಕೆ ಹೊರಟಿದ್ದಾರೆ. ಆದರೆ ಇವತ್ತು ಮಾದಿಗ ಸಮುದಾಯದಿಂದ ವೋಟ್ ಗಳನ್ನು ಪಡೆದು ಬಹುಮತದಿಂದ ರಾಜ್ಯದಲ್ಲಿ ಆಡಳಿತವನ್ನು ನಡೆಸುತ್ತಿದ್ದೀರಿ ಎಂದರೆ ಮಾದಿಗ ಕೊಡುಗೆ ಇದೆ ಎಂದು ಯಾರೂ ಕೂಡ ಮರೆಯಬಾರದು

ಸುಪ್ರೀಂ ಕೋರ್ಟ್ ಆದೇಶ ಹಾಗೂ ಸಂವಿಧಾನದ ಆದರ್ಶಗಳನ್ನು ರಾಜ್ಯ ಸರ್ಕಾರ ಧಿಕ್ಕರಿಸುವಂತ ಕೆಲಸ ಮಾಡುವುದಕ್ಕೆ ಹೊರಟಿದೆ ಅದನ್ನು ನಮ್ಮ ಸಮುದಾಯದ ಸಹಿಸಲ್ಲ ಇದನ್ನು ಘಂಟೆಗೊಸವಾಗಿ ಖಂಡಿಸುವ ಕೆಲಸ ಮಾಡುತ್ತವೆ ಮತ್ತು ಸಮುದಾಯದ ಒಕ್ಕೂಟದ ಮೂಲಕ ಸದರ್ಕಾರಕ್ಕೆ ಎಚ್ಚರಿಕೆ ನೀಡಲಾಗಿತ್ತು ಎಂದು ಹೇಳಿದರು.

ಈ ಸಂದರ್ಭದಲ್ಲಿ. ಮಾದಿಗ ಕ್ಷೇಮ ಅಭಿವೃದ್ಧಿ ಸಂಘದ ತಾಲೂಕು ಅಧ್ಯಕ್ಷ ಮರಿಯಪ್ಪ ಜಾಲಿಹಾಳ. ಜಗದೀಶ್ ವಕೀಲರು. ಶ್ರೀನಿವಾಸ ವೈ. ಡಿಎಸ್ ಜಿಲ್ಲಾ ಸಂಚಾಲಕ ಮರಿಯಪ್ಪ. ವೀರೇಶ್ ಉಪ್ಪಲದೊಡ್ಡಿ. ಶಿವು. ಜಾಕೋಬ್. ಕಂಠೇಶ ಬಸಾಪುರ ಹನುಮೇಶ ಕರ್ನಿ. ಮಂಜು ಗಿರಿಜಾಲಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಪುರಸಭೆ ಅಧ್ಯಕ್ಷ ಮರಿರಾಮಪ್ಪ ರಿಂದ ರಂಜಾನ್ ಭೋಜನ ಧರ್ಮ ಸೌಹಾರ್ದತೆಗೆ ಸಂದೇಶ



• ಮಲ್ಲಮ್ಮ ನುಡಿ, ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ,ಪಟ್ಟಣದ 21ನೇ ವಾರ್ಡಿನ ರಾಮನಗರದ ಮಸೀದಿಯಲ್ಲಿ ಪವಿತ್ರ ರಂಜಾನ್ ಮಾಸದ ಅಂಗವಾಗಿ ರಂಜಾನ್ ಹಬ್ಬದ ಪ್ರಯುಕ್ತ ರೋಜಾ ಇರುವ ಮುಸ್ಲಿಂ ಬಾಂಧವರಿಗೆ ಊಟದ( ಭೋಜನ) ವ್ಯವಸ್ಥೆಯನ್ನು ಪುರಸಭೆ ಅಧ್ಯಕ್ಷ ಎಂ,ಮರಿರಾಮಣ್ಣ ಏರ್ಪಡಿಸಿದ್ದರು.

ರಂಜಾನ್ ಮಾಸವು ಆತ್ಮಶುದ್ಧಿ, ಉಪವಾಸ ಹಾಗೂ ಪರಸ್ಪರ ಸಹೋದರತ್ವ ಸಂಕೇತವಾಗಿದೆ, ಈ ಹಿನ್ನೆಲೆಯಲ್ಲಿ ಉಪವಾಸ ಮುಕ್ತಾಯದ ನಂತರ ಮುಸ್ಲಿಂ ಬಂಧುಗಳು ಭೋಜನದಲ್ಲಿ ಪಾಲ್ಗೊಂಡು ಸಂತೋಷ ವ್ಯಕ್ತಪಡಿಸಿದರು,ಸಮಾಜದಲ್ಲಿ ಎಲ್ಲ ಧರ್ಮಗಳ ನಡುವೆ ಸೌಹಾರ್ದತೆ ಮತ್ತು ಏಕತೆ ಬೆಳೆಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನುಹಮ್ಮಿಕೊಳ್ಳಲಾಗಿದೆ ಎಂದು ಪುರಸಭೆ ಅಧ್ಯಕ್ಷ ಮರಿ ರಾಮಪ್ಪ ತಿಳಿಸಿದರು,

ಈ ಸಂದರ್ಭದಲ್ಲಿ ಮಸೀದಿಯ ಕಮಿಟಿಯಿಂದ ಅವರಿಗೆ ಸನ್ಮಾನಿಸಲಾಯಿತು. ನಂತರ ಮಸೀದಿಯಲ್ಲಿವಾಜುಖಾನ ನಮಾಜ್ ಮಾಡುವ ಮುನ್ನ,ಕೈ,ಮುಖ,ಕಾಲು ತೊಳೆಯುವ ವ್ಯವಸ್ಥೆಯನ್ನು ನಿರ್ಮಿಸಿ ಕೊಡಬೇಕೆಂದು ಇದರ ಜೊತೆಗೆ ಇನ್ನೂ ಹಲವಾರು ಬೇಡಿಕೆಗಳನ್ನು ಪುರಸಭೆ ಅಧ್ಯಕ್ಷರಿಗೆ ಬೇಡಿಕೆ ಇಟ್ಟರು. ಮನವಿ ಪತ್ರ ಸ್ವೀಕರಿಸಿದ ಅಧ್ಯಕ್ಷರು ಶೀಘ್ರದಲ್ಲೇ ಪುರಸಭೆ ಅನುದಾನದಲ್ಲಿ ಈ ಕಾರ್ಯಗಳನ್ನುಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಸೈಯದ್ ನಜೀರ್ ಸಾಬ್ ಮುತುವಲ್ಲಿ, ಮೈಬೂಬ್ ಸಾಬ್ ವೈಸ್ ಮುತುವಲ್ಲಿ, ಸೆಕ್ರೆಟರಿ ಎಣ್ಣೆ ಭಾಷಾ ಸಾಬ್, ಖಜಾಂಚಿ ಕೆಜಿನ್ ಅಲ್ಲಾಭಕ್ಷಿ, ಕೆ.ಶ್ಯಾಬುದ್ದೀನ್ ಮಾನವ ಹಕ್ಕು ಜಿಲ್ಲಾ ಕಾರ್ಯಾಧ್ಯಕ್ಷರು, ಮಸ್ತಾನ್ ಸಾಬ್, ಟೈಲರ್ ನಜೀರ್ ಜಾಂಗೀರ್ ಸಾಬ್ ಇಜಭ ಗುತ್ತಿಗೆದಾರರು, ಮೆಕ್ಯಾನಿಕ್ ಬಶೀರ್, ಟೈಲರ್ ಯೂಸುಫ್ ಸಾಬ್, ತಂಬ್ರಹಳ್ಳಿ ಹುಸೇನ್ ಸಾಬ್, ಯು.ಬಾಬುವಲಿ ಪುರಸಭೆ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರು, ಗುಂಡ್ರು ಹನುಮಂತಪ್ಪ ಮಾಜಿ ಪುರಸಭೆ ಸದಸ್ಯರು, ಇನ್ನು ಸಮಾಜದ ಎಲ್ಲ ಮುಸ್ಲಿಂ ಬಾಂಧವರು ಹಾಜರಿದ್ದರು.

# ಪಿಯು ಪರೀಕ್ಷೆ: 1111 ವಿದ್ಯಾರ್ಥಿ ಗೈರು

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ 2026ರ ಮಾರ್ಚ್ 05ರ ಗುರುವಾರ ದಂದು ನಡೆದ ಇತಿಹಾಸ ವಿಷಯದಲ್ಲಿ 1,111 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ.

ಜಿಲ್ಲೆಯ 43 ಪರೀಕ್ಷೆ ಕೇಂದ್ರಗಳಲ್ಲಿ ನಡೆದ ಇತಿಹಾಸ ವಿಷಯದಲ್ಲಿ ಪರೀಕ್ಷೆಗೆ 12,092 ನೋಂದಣಿಯಾಗಿದ್ದು, 10,981 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 1,111 ವಿದ್ಯಾರ್ಥಿಗಳು ಗೈರು ಹಾಜರಾಗಿದ್ದಾರೆ ಎಂದು ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಸೋಮಶೇಖರಪ್ಪ ಹೊಕ್ರಾಣಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಿಳೆ ಮಕ್ಕಳ ಮೇಲಿನ ದೌರ್ಜನ್ಯ ತಡೆ ವಿವಿಧ ಬೇಡಿಕೆಗಳ ಮನವಿ ಸಲ್ಲಿಕೆ




ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಅಖಿಲಭಾರತಮಹಿಳಾಸಾಂಸ್ಕೃತಿಕ ಸಂಘಟನೆ(ಎಐಎಂಎಸ್) ಕರ್ನಾಟಕ ರಾಜ್ಯ ಸಮಿತಿಯು ಮಾರ್ಚ್ 4ರಂದು ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳ ವಿರುದ್ಧ ಸಮರ ಹೂಡಲು ಆಂದೋಲನವನ್ನು ನವೆಂಬರ್ 25,2025 ರಿಂದ ಮಾರ್ಚ್ 25, 2026ರ ವರೆಗೆ ರಾಜ್ಯದಾದ್ಯಂತ ನಡೆಯುತ್ತಿರುವ ಪ್ರಚಾರ ಕಾರ್ಯಕ್ರಮ ಮತ್ತು ಸಹಿ ಸಂಗ್ರಹಣೆ ಪ್ರಯುಕ್ತ, ಮುಖ್ಯಮಂತ್ರಿಗಳಿಗೆ, ಎಐಎಂಎಸ್ ರಾಜ್ಯಸಮಿತಿಯಿಂದನಿಯೋಗವೊಂದು ಕಾರ್ಯದರ್ಶಿಗಳಾದ ಶ್ರೀಮತಿ ಶೋಭಾ ಎಸ್ . ನೇತೃತ್ವದಲ್ಲಿ ಅಲಕಾ ರಾವ್, ಸೀಮಾ ಜಿ.ಎಸ್. ಹೇಮಾ,ಶಾಂತ ಅವರೊಂದಿಗೆ ಭೇಟಿ ಮಾಡಿದರು. ಅವರೊಂದಿಗೆ ಸಾಮಾಜಿಕ ಜಾಲತಾಣ ಹಾಗೂ ಮಾಧ್ಯಮಗಳ ಪ್ರಭಾವ, ಮರ್ಯಾದೆಗೇಡು ಹತ್ಯೆ ತಡೆಗಟ್ಟಲು ಮಾನ್ಯ ಕಾಯ್ದೆ , ಸರ್ಕಾರಿ ಕಛೇರಿಗಳಲ್ಲಿ ಆಂತರಿಕ ದೂರು ಸಮಿತಿ ರಚಿಸಿ, ಸಮಿತಿಯು ಸಕ್ರಿಯವಾಗಿರುವಂತೆ ಮಾಡುವುದು, ಮಕ್ಕಳ ಮೇಲೆ ಹೆಚ್ಚುತ್ತಿರುವ ಅತ್ಯಾಚಾರ ಪ್ರಕರಣಗಳು , ಅಪ್ರಾಪ್ತ ಮಕ್ಕಳ ಮೊಬೈಲ್ ಬಳಕೆ ಕುರಿತು ಮುಖ್ಯಮಂತ್ರಿಗಳ ಹತ್ತಿರ ಪ್ರಸ್ತಾಪಿಸಿ, ಮನವಿ ಪತ್ರವನ್ನು ಸಲ್ಲಿಸಲಾಯಿತು. ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದರು. ಎಂದು ಜಿಲ್ಲಾ ಕಾರ್ಯದರ್ಶಿ ವಿಜಯಲಕ್ಷ್ಮಿ ತಿಳಿಸಿದ್ದಾರೆ.

# ಮೊದಲ ಬಾರಿಗೆ ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

• ಮಲ್ಲಮ್ಮ ನುಡಿ ವಾರ್ತೆ ರಾಯಚೂರು

ಸನ್ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾರ್ಚ್ 6 ರಂದು (ಶುಕ್ರವಾರ) ವಿಧಾನಸೌಧದಲ್ಲಿ ಮಂಡಿಸಲಿರುವ 2026–27ನೇ ಸಾಲಿನ ರಾಜ್ಯದ ಆಯವ್ಯಯದ ಬಜೆಟ್ ಭಾಷಣವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿರುವ ಎಲ್ಇಡಿ ಮತ್ತು ಟಿವಿ ಪರದೆಗಳ ಮೂಲಕ ಮೊತ್ತ ಮೊದಲ ಬಾರಿಗೆ ನೇರ ಪ್ರಸಾರ ಮಾಡುತ್ತಿದೆ.

ಆರ್ಥಿಕ ಸಚಿವರೂ ಆಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆ ಸೃಷ್ಟಿಸುತ್ತಿದ್ದಾರೆ.

ಈ ಮಹತ್ವದ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಹೇಮಂತ್ ಎಂ. ನಿಂಬಾಳ್ಕರ್, ಐಪಿಎಸ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ (ಡಿಐಪಿಆರ್) ಯು ಬೆಂಗಳೂರು ಮೂಲದ ವೃತ್ತಿ ಮೀಡಿಯಾ ಸಲ್ಯೂಷನ್ಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಡಿಜಿಟಲ್ ಡಿಸ್ಪ್ಲೇ (ಎಲ್ಇಡಿ) ಮತ್ತು ಟಿವಿ ಪರದೆಗಳ ಮೂಲಕ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ಮಾರ್ಚ್ 6 ರಂದು ಬೆಳಿಗ್ಗೆ 10.15 ಗಂಟೆಯಿಂದ ಪ್ರಸಾರ ಮಾಡಲಿದೆ ಎಂದು ಆಯುಕ್ತರು ತಿಳಿಸಿದ್ದಾರೆ.

ವಿಧಾನಸೌಧದಲ್ಲಿ ನಡೆಯುವ ಬಜೆಟ್ ಮಂಡನೆ ಹಾಗೂ ನಂತರ ನಡೆಯಲಿರುವ ಮುಖ್ಯಮಂತ್ರಿಗಳ ಪತ್ರಿಕಾಗೋಷ್ಠಿಯನ್ನೂ ಇದೇ ಪರದೆಗಳ ಮೂಲಕ ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ನೇರವಾಗಿ ಪ್ರಸಾರ ಮಾಡಲಾಗುತ್ತದೆ.

ಇದರ ಮೂಲಕ ಸಾರ್ವಜನಿಕರು ಬಸ್ ನಿಲ್ದಾಣಗಳಲ್ಲಿಯೇ ಈ ಮಹತ್ವದ ಕಾರ್ಯಕ್ರಮವನ್ನು ವೀಕ್ಷಿಸುವ ಅವಕಾಶವನ್ನು ಪಡೆಯಲಿದ್ದಾರೆ. ರಾಜ್ಯದಲ್ಲಿಯೇ ಮೊದಲ ಬಾರಿಗೆ ಬಸ್ ನಿಲ್ದಾಣಗಳ ಮೂಲಕ ಜನಸಾಮಾನ್ಯರಿಗೆ ಬಜೆಟ್ ಮಂಡನೆಯ ನೇರ ಪ್ರಸಾರವನ್ನು ತಲುಪಿಸುವ ಪ್ರಯತ್ನವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೈಗೊಂಡಿದೆ.

# ಸಾಯಿಬಾಬಾರ ಮೂರ್ತಿ ಸ್ಥಾಪನೆಗೆ ಜೂನ್.ಜುಲೈದಲ್ಲಿ ನಿಗದಿ: ವಿಜಯಕುಮಾರ



• ಮಲ್ಲಮ್ಮ ನುಡಿ ವಾರ್ತೆ ಯಲಬುರ್ಗಾ

ಪಟ್ಟಣದ ಬುದ್ದ ಬಸವ ಅಂಬೇಡ್ಕರ ಭವನದ ಮಾರ್ಗದ ಹೊರವಲಯದಲ್ಲಿರುವ ಸಾಯಿ ಮಂದಿರದಲ್ಲಿ ಬರುವ ಜೂನ – ಜುಲೈ ನಲ್ಲಿ ಸಾಯಿಬಾಬಾರ ಮೂರ್ತಿ ಸ್ಥಾಪನೆಗೆ ಶೀಘ್ರದಲ್ಲೇ ದಿನಾಂಕವನ್ನುನಿಗದಿಪಡಿಸುವುದಾಗಿ ಸಾಯಿ ಮಂದಿರದ ಮುಖ್ಯಸ್ಥ ಹಾಗೂ ಹೈಕೋರ್ಟಿನ ವಕೀಲ ವಿಜಯ ಕುಮಾರ ದೇಸಾಯಿ ಅವರು ಸಾಯಿ ಧ್ಯಾನ ಮಂದಿರದ 8ನೇ ವಾರ್ಷಿಕೋತ್ಸವದ ನಿಮಿತ್ತ ಮಂದಿರದಲ್ಲಿ ಹಮ್ಮಿಕೊಂಡಿದ್ದ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮದ ಅದ್ಯಕ್ಷತೆ ವಹಿಸಿ ಮಾ.5 ರಂದು ಮಾತನಾಡಿದರು. ಯಲಬುರ್ಗಾ ಹಾಗೂ ಸುತ್ತಮುತ್ತಲಿನ ಬಾಬರ ಭಕ್ತರ ಸಲುವಾಗಿ ನಿವೃತ್ತ ನ್ಯಾಯಾಧೀಶ ದಿ. ಮಹಿಪಾಲರಾವ್ ದೇಸಾಯಿ ಯವರ ಆಸೆಯಂತೆ ಪಟ್ಟಣದಲ್ಲಿ ಸಾಯಿ ಮಂದಿರವನ್ನು ಸ್ಥಾಪಿಸಿ ಏಳು ವರ್ಷ ಗತಿಸಿದೆ, ಇಂದು 8 ವರ್ಷದ ಬಾಬಾರ ಧ್ಯಾನ ಮಂದಿರದ ವಾರ್ಷಿಕೋತ್ಸವದ ನಿಮಿತ್ತ ಜೈಪುರದಿಂದ ತರಲಾಗುವ ಬಾಬಾರ ದಿವ್ಯ ಮೂರ್ತಿಯನ್ನು ಸ್ಥಾಪಿಸಲು ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗಿದೆ ಎಂದು ವರ್ತಕ ಮಲ್ಲಿಕಾರ್ಜುನ ಉಳ್ಳಾಗಡ್ಡಿ ಅವರು ಮಾತನಾಡಿದರು. ಸಂಗೀತ ಬಳಗದ ಶರಣಕುಮಾರ ಬಂಡಿ, ಗಂಗಾವತಿಯ ಸಂಗೀತ, ಶರಣಪ್ಪ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಜರುಗಿತು. ಬಳಿಕ ಪ್ರಸಾದ ಸೇವೆ ಜರುಗಿತು. ಈ ವೇಳೆ ಭಕ್ತರಾದ ಶಿವಶಂಕರ ದೇಸಾಯಿ, ಬಸವಲಿಂಗಪ್ಪ ಭೂತೆ, ಸಂಗಣ್ಣಟೆಂಗಿನಕಾಯಿ, ಬಿ.ಎಂ.ಶಿರೂರು, ವೀರಣ್ಣ ನಿಂಗೋಜಿ, ಅಶೋಕ ಮಾಲಿಪಾಟೀಲ್, ಮುದಕಪ್ಪ ಸಜ್ಜನ,, ಮಾತೋಶ್ರೀ ಗಿರಿಜಾ ದೇಸಾಯಿ ಹಾಗೂ ಅಪಾರ ಭಕ್ತರು ಇದ್ದರು.

# ಡ್ರೈನೇಜ್‌ಗೆ ತೋಡಿದ ತಗ್ಗನ್ನು ಮುಚ್ಚಿಸಲು ಮನವಿ




• ಮಲ್ಲಮ್ಮ ನುಡಿ ವಾರ್ತೆಬಳ್ಳಾರಿ

18ನೇ ವಾರ್ಡಿನ ವೆಂಕಟೇಶ್ವರನಗರ ಮೂರನೇ ಮುಖ್ಯ ರಸ್ತೆಯನ್ನು ಹಾಕಲು ತೋಡಿರುತ್ತಾರೆ ಅದರ ಜೊತೆಯಲ್ಲಿ ಓಪನ್ ಡ್ರೈನೇಜ ತೋಡಿ ಬಿಟ್ಟಿರುತ್ತಾರೆ ಇದರಿಂದ ಮನೆಗಳಿಗೆ ಹೋಗುವುದಕ್ಕೆ ಬರೋದಕ್ಕೆ ಬಹಳ ತೊಂದರೆಯನ್ನು ಅನುಭವಿ ಸುತ್ತಿದ್ದೇವೆ ಮುಖ್ಯ ರಸ್ತೆಯನ್ನು ಸಂಪೂರ್ಣವಾಗಿ ಸುಮಾರು ಒಂದು ಅಡಿಯಷ್ಟು ರಸ್ತೆಯನ್ನು ಹಾಕಲು ಕುಣಿಯನ್ನು ತೋಡಿ ಬಿಟ್ಟಿರುತ್ತಾರೆ ಒಂದುವರೆ ತಿಂಗಳಾದರೂ ಈ ರಸ್ತೆಯ

ಅಭಿವೃದ್ಧಿಯ ಒಂದು ಪರ್ಸೆಂಟ್ ಸಹ ಕೆಲಸ ಮಾಡಿರುವುದಿಲ್ಲ ಕಾರ್ಪೊರೇಷನ್ ಸಿಬ್ಬಂದಿಯವರಾಗಲಿ ತೋಡಿದ ದಿವಸದಿಂದ ಇಲ್ಲಿಯವರೆಗೂ ತಿರುಗಿ ನೋಡಿರುವುದಿಲ್ಲ ಆದ್ದರಿಂದ ಇತ್ತ ಕಡೆ ನಿವಾಸಿಗಳಿಗೆ ಬಹಳಷ್ಟು ತೊಂದರೆ ಆಗಿರುವುದರಿಂದ

ಈ ರಸ್ತೆ ಅಭಿವೃದ್ಧಿ ಕಾರ್ಯವನ್ನು ಬೇಗನೆ ಮುಗಿಸಿ ಕೊಡಬೇಕೆಂದು ಮಹಾನಗರ ಪಾಲಿಕೆ ಆಯುಕ್ತರಿಗೆ ಮನವಿ ಸಲ್ಲಿಸಿದ್ದಾರೆ. ಸಂದರ್ಭದಲ್ಲಿ ವೆಂಕಟೇಶ್ವರ ನಗರ ಸೇವಾ ಸಂಘದ ಅಧ್ಯಕ್ಷರಾದ ಪಿ. ಧನಂಜಯ, ಭೀಮ ಲಿಂಗನಗೌಡ, ಪಿ .ಎಂ. ನಟ ರಾಜ ಲೋಕರಾಜ್ ,ವೀರೇಶ್, ಎಂ ರವಿ ,ಸತೀಶ,

ಮುಲ್ಲಂಗಿ ಗಿರಿ, ರಘು ,ಮಯೂರ ಟ್ರಾನ್ಸ್ಪೋರ್ಟ್ ಸೀನ, ಮುಂತಾದವರು ಪಾಲ್ಗೊಂಡಿದ್ದರು.

# ಬೇಸಿಗೆಯಲ್ಲಿ ನೀರಿನ ಸಮಸ್ಯೆಗೆ ಟ್ಯಾಂಕರ್ ನೀರು ಪೂರೈಸಲು ಸಿದ್ಧತೆ ಮಾಡಿಕೊಳ್ಳಿ: ಸುಧಾಕರ್ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಚಿಕ್ಕಬಳ್ಳಾಪುರ




ಎಚ್ಎನ್ ವ್ಯಾಲಿ ಹಾಗೂ ಕೆಸಿ ವ್ಯಾಲಿಯಿಂದ ಬರುವ ನೀರನ್ನು ಹೆಚ್ಚು ಶುದ್ಧ ಮಾಡಲು 3 ನೇ ಹಂತದ ಸಂಸ್ಕರಣೆ ಯೋಜನೆ ಜಾರಿ ಮಾಡದೇ ಇದ್ದಲ್ಲಿ ದೊಡ್ಡಮಟ್ಟದ ಹೋರಾಟ ರೂಪಿಸಬೇಕಾಗುತ್ತದೆ ಎಂದು ಸಂಸದ ಡಾ.ಕೆ.ಸುಧಾಕರ್ ಹೇಳಿದರು. ದಿಶಾ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೂರನೇ ಹಂತದ ಸಂಸ್ಕರಣೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿಗಳು ಕ್ರಮವಹಿಸಬೇಕಿದೆ. ಸುಮಾರು 70–80 ಲಕ್ಷ ಜನರು ಈ ನೀರನ್ನು ಬಳಸುತ್ತಿದ್ದಾರೆ. ಇಲ್ಲಿನ ಶಾಸಕರು ಹಾಗೂ ಸಚಿವರು ಈ ಬಗ್ಗೆ ಹಿಂದೆ ಮಾತಾಡುತ್ತಿದ್ದರು. ಚುನಾಯಿತ ಪ್ರತಿನಿಧಿಗಳಿಗೆ ಕನಿಷ್ಠ ಬದ್ಧತೆ ಇರಬೇಕಾಗುತ್ತದೆ. ಆದ್ದ–ರಿಂದ ಈ ಯೋಜನೆಯನ್ನು ಜಾರಿ ಮಾಡಬೇಕು. 2 ನೇ ಹಂತದಲ್ಲಿ ಸಂಸ್ಕರಣೆಯಾಗುವ ನೀರು ಕುಡಿಯಲು ಯೋಗ್ಯವಲ್ಲ ಎಂದು ವಿಜ್ಞಾನಿಗಳೇ ಹೇಳಿದ್ದಾರೆ. ಯಾವುದೇ ದೇಶದಲ್ಲಿ ಎರಡನೇ ಹಂತದಲ್ಲಿ ಸಂಸ್ಕರಣೆಯಾಗುವ ನೀರುವ ಕುಡಿಯಲು ಅಥವಾ ಕೃಷಿಗೆ ಬಳಸುವುದಿಲ್ಲ. ಬಿಜೆಪಿ ಸರ್ಕಾರವಿದ್ದಾಗಲೇ ಮೂರನೇ ಹಂತದ ಶುದ್ಧೀಕರಣ ಯೋಜನೆ ಘೋಷಣೆಯಾಗಿತ್ತು. ನನಗೆ ಬದ್ಧತೆ ಇದ್ದಿದ್ದರಿಂದಲೇ ನಾನು ಆ ಯೋಜನೆ ಬಜೆಟ್‌ನಲ್ಲಿ ಬರುವಂತೆ ಮಾಡಿದ್ದೆ. ಈಗ ಕಾಂಗ್ರೆಸ್ ಸರ್ಕಾರ ಅದನ್ನು ಜಾರಿ ಮಾಡಿದರೆ ಅಭಿನಂದಿಸುತ್ತೇನೆ ಎಂದರು.

17 ನೇ ಬಜೆಟ್ ಮಂಡಿಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಶುಭಾಶಯ ಕೋರುತ್ತೇನೆ. ಇತಿಹಾಸದಲ್ಲಿ ಅತಿ ಹೆಚ್ಚು ಸಾಲ ಮಾಡಿದ ಮುಖ್ಯಮಂತ್ರಿ ಎಂದು ಅವರು ಅನ್ನಿಸಿಕೊಳ್ಳುವುದು ಬೇಡ. ಸಾಲವನ್ನು ಕಡಿಮೆ ಮಾಡಿ ಜನರ ಮೇಲಿನ ಆರ್ಥಿಕ ಹೊರೆಯನ್ನು ಇಳಿಸಬೇಕು. ಆರ್‌ಬಿಐ ಹೇಳಿರುವ ಪ್ರಕಾರ, ರಾಜ್ಯದ ಸಾಲ ಆರ್ಥಿಕ ಶಿಸ್ತನ್ನು ಮೀರಲಿದೆ. ಆದ–ರೆ ಇದನ್ನು ರಾಜ್ಯ ಸರಕಾರ ಅಲ್ಲಗಳೆದು ಸಮರ್ಥಿಸಿಕೊಳ್ಳುವುದು ವಿತಂಡವಾದವಾಗುತ್ತದೆ. ಕರ್ನಾಟಕ ಇಂದು ಆರ್ಥಿಕ ಅಶಿಸ್ತಿನಿಂದ ಸಮಸ್ಯೆಗಳನ್ನು ಎದುರಿಸುತ್ತಿದೆ. ಇದೇ ಪ್ರಮಾಣದಲ್ಲಿ ಸಾಲ ಮಾಡಿದರೆ ಮುಂದೆ ಬಡ್ಡಿ ಕಟ್ಟಲು ಕೂಡ ಹಣ ಇರುವುದಿಲ್ಲ. ಅಧಿಕಾರಿಗಳು ಹಾಗೂ ನೌಕರರಿಗೂ ಸಂಬಳ ಕೊಡುವುದು ಕಷ್ಟವಾಗುತ್ತದೆ. ಈಗಾಗಲೇ ಅಭಿವೃದ್ಧಿ ಕುಂಠಿತವಾಗಿದೆ ಎಂದರು.

ಬೇಸಿಗೆಗೆ ಸಿದ್ಧತೆ ಮಾಡಿಕೊಳ್ಳಿ

ಈ ಬಾರಿಯ ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಿಸುತ್ತಿರುವ ಗ್ರಾಮಗಳಿಗೆ ಟ್ಯಾಂಕರ್ ನೀರು ಪೂರೈಸಲು ಕೂಡಲೇ ಸಿದ್ಧತೆ ಮಾಡಿಕೊಳ್ಳಬೇಕು. ಕೇಂದ್ರ ಸರ್ಕಾರದ ಜಲಜೀವನ್ ಮಿಷನ್‌ನಡಿ ಗುಣಮಟ್ಟದ ಕಾಮಗಾರಿ ನಡೆಸದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಂಸದ ಡಾ.ಕೆ.ಸುಧಾಕರ್ ಸೂಚನೆ ನೀಡಿದರು. ಜಿಲ್ಲಾ ಮಟ್ಟದ ಅಭಿವೃದ್ಧಿ ಮತ್ತು ಆಡಳಿತ ಸಭೆಯಲ್ಲಿ (ದಿಶಾ) ಭಾಗವಹಿಸಿದ ಅವರು ವಿವಿಧ ಯೋಜನೆಗಳ ಪ್ರಗತಿ ವಿವರ ಪಡೆದು ಸೂಚನೆಗಳನ್ನು ನೀಡಿದರು.

2019 ರಿಂದ 2025 ರವರೆಗೆ 350 ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡುಬಂದಿದೆ. ಈ ಪೈಕಿ 150 ರಿಂದ 170 ಗ್ರಾಮಗಳಲ್ಲಿ ತೀವ್ರ ಕೊರತೆ ಎಂದು ಗುರುತಿಸಲಾಗಿದೆ. 30 ರಿಂದ 40 ಗ್ರಾಮಗಳಿಗೆ ಟ್ಯಾಂಕರ್ ಅಥವಾ ಖಾಸಗಿ ಬೋರ್‌ವೆಲ್‌ಗಳ ಮೂಲಕ ನೀರು ಪೂರೈಸಲಾಗುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಂಸದ ಡಾ.ಕೆ.ಸುಧಾಕರ್, ಈ ಬಾರಿಯ ಬೇಸಿಗೆಯಲ್ಲಿ ಯಾವುದೇ ಗ್ರಾಮಗಳಲ್ಲಿ ನೀರಿನ ಸಮಸ್ಯೆ ಕಂಡುಬರದಂತೆ ಕ್ರಮ ವಹಿಸಬೇಕಿದೆ. ನೀರು ಕೊರತೆಯಾದ ಕಡೆಗಳಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಬೇಕು ಎಂದು ಸೂಚನೆ ನೀಡಿದರು. ಜಲಜೀವನ್ ಮಿಷನ್ ಯೋಜನೆಯಡಿ 800 ಕ್ಕೂ ಅಧಿಕ ಗ್ರಾಮಗಳಲ್ಲಿ ಕಾಮಗಾರಿ ಆರಂಭವಾಗಿದೆ. 25 ಗ್ರಾಮಗಳಲ್ಲಿ ಪರಿಶೀಲನೆ ನಡೆದಿದ್ದು, 22 ಕಡೆ ಕಾಮಗಾರಿ ಪೂರ್ಣಗೊಂಡಿದೆ. ಒಟ್ಟಾರೆಯಾಗಿ 983 ಓವರ್‌ಹೆಡ್ ಟ್ಯಾಂಕ್‌ಗಳನ್ನು ನಿರ್ಮಿಸಲು ಉದ್ದೇಶಿಸಿದ್ದು, 310 ಕಡೆ ಕಾಮಗಾರಿ ಪ್ರಗತಿಯಲ್ಲಿದೆ. 22 ಕಡೆ ಇನ್ನೂ ಆರಂಭವಾಗಬೇಕಿದೆ. ಕೆಲವೆಡೆ ಅನುದಾನದ ಸಮಸ್ಯೆ, ಟೆಂಡರ್ ವಿಳಂಬವಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಈ ಎಲ್ಲ ಸಮಸ್ಯೆಗಳನ್ನು ಕೂಡಲೇ ಬಗೆಹರಿಸಬೇಕು ಹಾಗೂ ಕಾಮಗಾರಿ ವಿಳಂಬವಾದರೆ ಗುತ್ತಿಗೆದಾರರಿಗೆ ಎಚ್ಚರಿಕೆ ನೀಡಬೇಕು. ಎಲ್ಲ ಕಾಮಗಾರಿಗಳನ್ನು ಕಾಲಮಿತಿಯಲ್ಲಿ ಮುಗಿಸಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಸಂಸದ ಡಾ.ಕೆ.ಸುಧಾಕರ್ ಸಭೆಗೆ ಸೂಚಿಸಿದರು.

ಕೇಂದ್ರ ಸರ್ಕಾರದಿಂದ ಕ್ವಿಂಟಾಲ್‌ರಾಗಿಗೆ 4,886 ರೂ. ಬೆಂಬಲ ಬೆಲೆ ನೀಡಲಾಗಿದೆ. ಯುಪಿಎ ಸರ್ಕಾರದಲ್ಲಿ ಇದಕ್ಕೆ 1,500 ರೂ. ಇತ್ತು. ಇದೇ ರೀತಿ ಹಲವಾರು ಬೆಳೆಗಳಿಗೆ ಬೆಂಬಲ ಬೆಲೆ ನೀಡಲಾಗಿದೆ. ರಾಷ್ಟ್ರೀಯ ಹೆದ್ದಾರಿ 44 ರಲ್ಲಿ ಬೆಂಗಳೂರಿನ ದೇವನಹಳ್ಳಿಯಿಂದ ಆಂಧ್ರದ ಗಡಿವರೆಗೆ 2500 ಕೋಟಿ ರೂ. ವೆಚ್ಚದಲ್ಲಿ ಹೊಸದಾಗಿ 6 ಪಥದ ರಸ್ತೆ ನಿರ್ಮಾಣವಾಗಲಿದೆ. ಈಗ ಇರುವ ನಾಲ್ಕು ಪಥ ಸೇರಿ ಒಟ್ಟು ಹತ್ತು ಪಥದ ರಸ್ತೆಯಾಗಲಿದೆ. ಇನ್ನು ಮೂರು ತಿಂಗಳಲ್ಲಿ ಕಾಮಗಾರಿ ಆರಂಭವಾಗಲಿದೆ. ಭೂ ಸ್ವಾಧೀನದ ಯಾವುದೇ ಸಮಸ್ಯೆ ಇಲ್ಲ. ರಾಷ್ಟ್ರೀಯ ಆರೋಗ್ಯ ಮಿಷನ್‌ನಡಿ, 65 ಲಕ್ಷ ರೂ. ವೆಚ್ಚದಲ್ಲಿ ಆಯುಷ್ಮಾನ್ ಆರೋಗ್ಯ ಮಂದಿರ ನಿರ್ಮಾಣವಾಗಲಿದೆ ಎಂದು ತಿಳಿಸಿದರು.

# ಸಂಭ್ರಮದ ಬಂಡೇ ರಂಗನಾಥೇಶ್ವರ ಬ್ಯಾಟಿ ಗಿಡ ಉತ್ಸವ



• ಮಲ್ಲಮ್ಮನ ನುಡಿ, ಹಗರಿಬೊಮ್ಮನಹಳ್ಳಿ

ಹಗರಿಬೊಮ್ಮನಹಳ್ಳಿ ತಾಲೂಕಿನ ತಂಬ್ರಹಳ್ಳಿಯ ಇತಿಹಾಸ ಪ್ರಸಿದ್ಧ ಶ್ರೀ ಬಂಡೆ ರಂಗನಾಥ ಸ್ವಾಮಿ ರಥೋತ್ಸವ ಹಾಗೂ ಜಾತ್ರಾ ಮಹೋತ್ಸವ ನಿಮಿತ್ಯವಾಗಿ ನಡೆದ ಬ್ಯಾಟಿಗಿಡ ಉತ್ಸವ ಬುಧವಾರ ಸಂಭ್ರಮದಿಂದ ಜರುಗಿತು.

ತುಂಗಭದ್ರ ಹಿನ್ನೀರಿನ ದಂಡೆ–ಯ ಮೇಲೆ ನೆಲೆಸಿರುವ ಶ್ರೀ ಬಂಡೆರಂಗನಾಥ ಸ್ವಾಮಿ ಹಾಗೂ ಲಕ್ಷ್ಮಿ ದೇವಿಗೆ ಕಳೆದ ಒಂದು ವಾರದಿಂದ ಪೂಜೆ ಹೋಮ ಹವನ ಇತ್ಯಾದಿ ಆಚರಣೆಗಳು ಆರ್ಚಕರಿಂದ ಶಾಸ್ತ್ರೋಕ್ತವಾಗಿ ಜರುಗಿದವು.

ಬಂಡೇ ರಂಗನಾಥೇಶ್ವರ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಮೆರವಣಿಗೆ ಮುಖಾಂತರ ಗ್ರಾಮದ ಹೊರವಲಯದ ಹತ್ತಿರದಲ್ಲಿ (ಮುಳ್ಳುಕಂಟಿಗಿಡ )ಬ್ಯಾಟಿ ಗಿಡ ತೆಗೆದುಕೊಂಡು ಬಂದು ಪೂಜಿಸಲಾಯಿತು.

ಬೆಟ್ಟದ ಕೆಳಗಡೆ ಇರುವ. ತೇರು ಬೀದಿಯಲ್ಲಿ ಮೆರವಣಿಗೆ ಮೂಲಕ ತರಲಾಯಿತು. ಬ್ಯಾಟಿ ಗಿಡವನ್ನು ವಾಲ್ಮೀಕಿ ಸಮುದಾಯದ ಯುವಕರು ಹೊತ್ತುಕೊಂಡು ಮೇಳಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯುತ್ತಿದ್ದು ಭಕ್ತರನ್ನು ಭಾವಪರವಶಗೊಳಿಸಿದರು. ನೆರೆದ ಭಕ್ತರು ಬಾಳೆಹಣ್ಣು ಉತ್ತುತ್ತಿ ದವನ ಹೂವು ಅರ್ಪಿಸಿ ಧನ್ಯತೆ ಮೆರೆದರು. ನಂತರ ಬ್ಯಾಟಿ ಗಿಡವನ್ನು ಬೆಟ್ಟದ ಮೇಲೆ ತೆಗೆದುಕೊಂಡು ಹೋದರು.

ವಿವಿಧ ಕಡೆಯಿಂದ. ಜಾತ್ರಾ ಮಹೋತ್ಸವಕ್ಕೆ ಈ ಭಾರಿ ಭೃಹತ್ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರು. ಬೆಟ್ಟದ ಮೇಲೆ ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದರು. ತಂಬ್ರಹಳ್ಳಿ ಪೋಲಿಸ್ ಠಾಣೆಯ ಸಿಬ್ಬಂದಿಯವರು ಸೂಕ್ತ ಬಂದೋಬಸ್ತ ವ್ಯವಸ್ಥೆ ಕಲ್ಪಿಸಿದ್ದರು.

ಈ ಸಂದರ್ಭದಲ್ಲಿ ದೇವಸ್ಥಾನ ಆಡಳಿತಮಂಡಳಿಯ. ಪದಾಧಿಕಾರಿಗಳು ಮುಖಂಡರು ಹಾಗೂ ಸುತ್ತಲಿನ. ಹತ್ತಾರು ಹಳ್ಳಿಗಳ ಭಕ್ತರು ಪಾಲ್ಗೊಂಡಿದ್ದರು.



ಮಲ್ಲಮ್ಮ ನುಡಿ ವಾರ್ತೆ ಪೀಣ್ಯ ದಾಸರಹಳ್ಳಿ

ರಾಜಗೋಪಾಲನಗರ ಜಿಕೆಡಬ್ಲ್ಯು ಲೇಔಟ್ ನ ನಿವಾಸಿಯಾದ ನಾಡಪ್ರಭು ಕೆಂಪೇಗೌಡ ಸೇವಾ ಟ್ರಸ್ಟ್ ನಿರ್ದೇಶಕ ಹಾಗೂ ಜಿಬಿಎ ನೌಕರರಾದ ಬಿ ಕೆ,ಮಲ್ಲೇಶ್ ಅವರ ಹುಟ್ಟುಹಬ್ಬವನ್ನು ಎಸ್ ಎಲ್ ಎನ್ ಪ್ರಿಷಿಸನ್ ವರ್ಕ್ಸ್ ಹಾಗೂ ಅನುಗ್ರಹ ಇಂಜಿನಿಯರಿಂಗ್ ವರ್ಕ್ಸ್ ನ ಮಾಲೀಕರಾದ ಬಿ ಹೆಚ್ ಹನುಮೇಗೌಡ,ಬಿಜೆ ನಾರಾಯಣ್, ಬಿಜೆ ರಾಮು, ನೇತ್ರಾವತಿ ,ಹಾಗೂ ಎ ಎಂ ಎಸ್ ಮಂಜುನಾಥ್ ಸೇರಿದಂತೆ ಗೆಳೆಯರ ಬಳಗ ಅದ್ದೂರಿಯಾಗಿ ಕೇಕ್ ಕತ್ತರಿಸಿ ಸಿಹಿ ತಿನ್ನಿಸಿ ಸನ್ಮಾನಿಸಿ ಗೌರವಿಸುವ ಮೂಲಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಜಗೋಪಾಲ ನಗರ ವಾರ್ಡಿನ, ಜಿಬಿಎ ಚುನಾವಣಾ ಆಕಾಂಕ್ಷಿ ಮಂಜುಳ ಮಲ್ಲೇಶ್, ಕುಟುಂಬಸ್ಥರು ಮುಂತಾದವರು ಉಪಸ್ಥಿತರಿದ್ದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

## ಕರುನಾಡಿನಲ್ಲಿ ನೆಮ್ಮದಿಯ

# ಗ್ಯಾರಂಟಿ

## ನಿಮ್ಮ ಆರೋಗ್ಯ
## ನಮ್ಮ ಆದ್ಯತೆ







- ಹೃದಯಾಘಾತ ತಡೆಗೆ **ಡಾ. ಪುನೀತ್ ರಾಜ್‌ಕುಮಾರ್ ಹೃದಯಜ್ಯೋತಿ** ಯೋಜನೆ ಜಾರಿ
- ಅಂಧತ್ವ ಮುಕ್ತ ಕರ್ನಾಟಕ ನಿರ್ಮಾಣಕ್ಕಾಗಿ **ಆಶಾಕಿರಣ** ಯೋಜನೆ
- ಬೆಂಗಳೂರು ನಗರದ ಸರ್ಕಾರಿ ಆಸ್ಪತ್ರೆಗಳಿಗೆ **ಪೌಷ್ಟಿಕ ಆಹಾರ ಪೂರೈಕೆ**
- ತಾಯಿ ಮತ್ತು ಶಿಶು ಮರಣ ಇಳಿಕೆಗೆ ತಾಲ್ಲೂಕು ಆಸ್ಪತ್ರೆಗಳಲ್ಲಿ ತ್ರಿವಳಿ ತಜ್ಞರ ನಿಯೋಜನೆ
- ಮೂತ್ರಪಿಂಡ, ಹೃದಯ, ಯಕೃತ್ ಮತ್ತು ಬಹು ಅಂಗಾಂಗ ವೈಫಲ್ಯಕ್ಕೆ **ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಉಚಿತ** ಕಸಿ ಚಿಕಿತ್ಸೆ
- ದೇಶದಲ್ಲೇ ಮೊದಲ ಬಾರಿಗೆ ರಾಜ್ಯದ ಎಲ್ಲಾ ಸರ್ಕಾರಿ ಇಲಾಖೆಗಳ ನೌಕರರು, ಗುತ್ತಿಗೆ, ಹೊರಗುತ್ತಿಗೆ ನೌಕರರಿಗೆ **₹. 5 ಲಕ್ಷದ ವರೆಗೆ ನಗದು ರಹಿತ ಚಿಕಿತ್ಸೆಯ** ಸೌಲಭ್ಯ
- ಎಲ್ಲ ತಾಲ್ಲೂಕು ಆಸ್ಪತ್ರೆಗಳಲ್ಲಿ 24x7 ಆರೋಗ್ಯ ಸೇವೆ
- ರಾಜ್ಯದ ಎಲ್ಲ ಜಿಲ್ಲಾಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ದೃಷ್ಟಿಕೇಂದ್ರಗಳ ಸ್ಥಾಪನೆ
- **ಗೃಹ ಆರೋಗ್ಯ :** ಆರೋಗ್ಯ ಸೇವೆ ಮನೆ ಬಾಗಿಲಿಗೆ ಯೋಜನೆ ಜಾರಿ
- ಮಹಿಳೆಯರಲ್ಲಿ ಗರ್ಭಕಂಠದ ಕ್ಯಾನ್ಸರ್ ಅನ್ನು ತಡೆಗಟ್ಟಲು 14 ವರ್ಷದ ಹೆಣ್ಣು ಮಕ್ಕಳಿಗೆ **HPV ಲಸಿಕೆ**

## ಕರ್ನಾಟಕ ನವ ನಿರ್ಮಾಣಕ್ಕೆ
# ಗ್ಯಾರಂಟಿ ಸರ್ಕಾರ...

ಗ್ಯಾರಂಟಿ ಯೋಜನೆಗಳ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಾ ನುಡಿದಂತೆ ನಡೆದು ಜನರ ವಿಶ್ವಾಸ ಗಳಿಸಿದ್ದೇವೆ.

ವೈಜ್ಞಾನಿಕ ಮನೋಧರ್ಮ ಬೆಳೆಸಿಕೊಳ್ಳುವುದು; ಪ್ರಶ್ನೆ ಮಾಡುವ ಮತ್ತು ಬದಲಾವಣೆಗೆ ಒಡ್ಡಿಕೊಳ್ಳುವ ಮನಃಸ್ಥಿತಿ ಬೆಳೆಸಿಕೊಳ್ಳುವುದು.- ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಗಡಿ ಭಾಗದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು